ಜನವರಿ 31

## ಮನಮರುಗುವ ಪ್ರಾರ್ಥನೆ!

ಬೆಳಿಗ್ಗೆ : ವಿಮೋ. 25,26
ಸಂಜೆ : ಮತ್ತಾ. 20:17–34

"ಕರ್ತನೇ, ನಾನೂ ಈ ಹೊಳೆಯನ್ನು ದಾಟಿ ಆಚೆಯಿರುವ ಒಳ್ಳೆಯ ದೇಶವನ್ನು, ಅಂದರೆ ಆ ಅಂದವಾದ ಬೆಟ್ಟದ ಸೀಮೆಯನ್ನೂ ಲೆಬನೋನ್ ಪರ್ವತವನ್ನೂ ನೋಡುವದಕ್ಕೆ ಅಪ್ಪಣೆಯಾಗಲಿ ಎಂದು ಬಿನ್ನೈಸಿದೆನು" (ಧರ್ಮೋ. 3:25).

ಸತ್ಯವೇದದಲ್ಲಿ ಆಂತರ್ಯವನ್ನು ಕಲಕುವ ಪರಿತಾಪಕರವಾದ ಪ್ರಾರ್ಥನೆಯನ್ನು ಇಲ್ಲಿ ನೋಡುತ್ತೇವೆ. ಮೋಶೆಯ ಈ ಪ್ರಾರ್ಥನೆಗೆ ದೇವರು ಕನಿಕರ ತೋರಿಸಲಿಲ್ಲ. ತನ್ನ ಹೃದಯವನ್ನು ಕಠಿಣ ಪಡಿಸಿಕೊಂಡನು. ಸುಮಾರು ಮೂವತ್ತು ಲಕ್ಷ ಇಸ್ರಾಯೇಲ್ಯರನ್ನು ಮೋಶೆ ಐಗುಪ್ತದ ದಾಸತ್ವದಿಂದ ಬಿಡುಗಡೆಗೊಳಿಸಿ, ಒಬ್ಬ ತಂದೆಯಂತೆ ನಾಲ್ವತ್ತು ವರುಷಗಳು ನಡೆಸಿಕೊಂಡು ಬಂದನು. ಮಾರಾದ ಕಹಿ ನೀರನ್ನು ಮಧುರವಾಗಿಸಿಕೊಟ್ಟನು. ಅವರು ಮಾಂಸವನ್ನು ತಿನ್ನಬೇಕೆಂದು ಅಪೇಕ್ಷಿಸಿದಾಗ ದೇವರ ಬಳಿ ಪ್ರಾರ್ಥಿಸಿ, ಬೇಡಿ ಅವರ ಆಶೆಯನ್ನು ಪೂರೈಸಿದನು.

ಅನೇಕ ಬಾರಿ ಇಸ್ರಾಯೇಲ್ಯರು ಐಗುಪ್ತಕ್ಕೆ ಹಿಂದಿರುಗಬೇಕೆಂದು ಬಯಸಿ, ಆರೋನನನ್ನೂ, ಮೋಶೆಯನ್ನೂ ಕಲ್ಲೆಸೆದು ಕೊಲ್ಲಬೇಕೆಂದು ಬಯಸಿದರು. ಸದಾ ಗುಣುಗುಟ್ಟುತ್ತಾ ಕರ್ತನಿಗೆ ದ್ರೋಹಮಾಡಿದರು. ಆ ಸಮಯಗಳಲ್ಲೆಲ್ಲಾ ಮೋಶೆ ಅವರಿಗಾಗಿ ಪ್ರಾರ್ಥಿಸುತ್ತಾ ಮನವಿಗಳನ್ನು ಸಲ್ಲಿಸುತ್ತಾ ದೇವರ ಕೋಪ ಅವರ ಮೇಲೆ ಎರಗದಂತೆ ತಡೆದನು. ಇಸ್ರಾಯೇಲ್ಯರು ಮೋವಾಬ್ಯ ಹೆಂಗಸರೊಂದಿಗೆ ಸಂಬಂಧ ಬೆಳೆಸಿ, ಅವರ ದೇವತೆಗಳಿಗೆ ಯಜ್ಞಗಳನ್ನು ಅರ್ಪಿಸಿ, ಚಿನ್ನದ ಬಸವನನ್ನು ಮಾಡಿ ಅಡ್ಡ ಬಿದ್ದಾಗ ಕರ್ತನು ಅವರನ್ನು ಒಂದು ನಿಮಿಷದಲ್ಲಿ ನಾಶಪಡಿಸಲು ತೀರ್ಮಾನಿಸಿದನು. ಆಗ ಮೋಶೆ ಇಸ್ರಾಯೇಲ್ಯರಿಗಾಗಿ ಪೌಳಿಯ ಸೀಳಿನಲ್ಲಿ ನಿಂತನು. ಎರಡನೆಯ ಬಾರಿ ಇಸ್ರಾಯೇಲ್ಯರಿಗೆ ನೀರು ಸಿಗದೆ ಹೋದಾಗ, ಕರ್ತನು ಮೋಶೆಯ ಬಳಿ ಬಂಡೆಯನ್ನು ನೋಡಿ ಮಾತಾಡಿ "ಅದು ನೀರುಕೊಡುವದು" ಎಂದು ಹೇಳಿದನು. ಆದರೆ ಇಸ್ರಾಯೇಲ್ಯರ ವರ್ತನೆಯಿಂದ ಬೇಸರಗೊಂಡಿದ್ದ ಮೋಶೆ ತನ್ನ ಕೋಲಿನಿಂದ ಬಂಡೆಯನ್ನು ಹೊಡೆಯಲು ನೀರು ಉಕ್ಕಿ ಬಂತು. ಆದರೆ ಕರ್ತನು ಮೋಶೆಯ ಅವಿಧೇಯತೆಯನ್ನು ಸಹಿಸಲಿಲ್ಲ. ಆ ಬಂಡೆ ಕ್ರಿಸ್ತನೇ ಆಗಿದ್ದನು (1 ಕೊರಿಂ. 10:4). ಮೋಶೆ ಕಾನಾನನ್ನು ಪ್ರವೇಶಿಸಲೇ ಇಲ್ಲ.

ದೇವಮಕ್ಕಳೇ, ಈಗಾಗಲೇ ಒಂದು ಬಾರಿ ಕ್ರಿಸ್ತನು ತನ್ನ ದೇಹವನ್ನು ಶಿಲುಬೆಯಲ್ಲಿ ಜಡಿಯಲು ಒಪ್ಪಿಸಿಕೊಟ್ಟಿರುವನು. ಪುನಃ ನಿಮ್ಮ ಪಾಪಗಳಿಂದ ಆತನನ್ನು ಶಿಲುಬೆಯಲ್ಲಿ ಜಡಿಯಬೇಡಿ. ದೇವರು ಅವಿಧೇಯತೆಯನ್ನು ಸಹಿಸುವದಿಲ್ಲ. ಆತನು ಖಂಡಿಸುವ ದೇವರೂ ಹೌದು, ಕನಿಕರವುಳ್ಳ ದೇವರೂ ಹೌದು. ಆತನನ್ನು ಎಂದಿಗೂ ದುಃಖ ಪಡಿಸದಿರಿ.

*ನೆನಪಿಗೆ : "ಇದಲ್ಲದೆ ಮೋಶೆಯೂ, ಎಲೀಯನೂ ಆತನೊಂದಿಗೆ ಮಾತನಾಡುತ್ತಾ ಅವರಿಗೆ ಕಾಣಿಸಿಕೊಂಡರು" (ಮತ್ತಾ. 17:3).*




# ಅನುದಿನದ ಆಹಾರ

**ANUDINADA AHARA - JANUARY 2015**

**ಜನವರಿ – 2015**

ಮರ 16 ಹಣ್ಣು 1 TREE 16 FRUIT 1


## ಜಯದ ರಹಸ್ಯಗಳು

"ನಮ್ಮ ಮೇಲೆ ಬಂದ ಈ ಮಹಾ ಸಮೂಹದ ಮುಂದೆ ನಿಲ್ಲುವದಕ್ಕೆ ನಮ್ಮಲ್ಲಿ ಬಲವಿಲ್ಲ, ಏನು ಮಾಡಬೇಕೆಂದೂ ತಿಳಿಯದು; ನಮ್ಮ ಕಣ್ಣುಗಳು ನಿನ್ನನ್ನೇ ನೋಡುತ್ತವೆ ಎಂದು ಪ್ರಾರ್ಥಿಸಿದನು" (2 ಪೂ.ವೃ. 20:12).

ಈ ನೂತನ ವರುಷ ನಿಮಗೆ ಒಂದು ಜಯಭರಿತವಾದ ವರುಷವಾಗಿರಲಿ. ಜಯದ ಹಲವು ರಹಸ್ಯಗಳನ್ನು ಅರಸನಾದ ಯೆಹೋಷಾಫಾಟನಿಂದ ನೀವು ತಿಳಿದುಕೊಳ್ಳಬಹುದು. ನಿಮ್ಮ ಜೀವಿತದಲ್ಲಿ ಸಮಸ್ಯೆಗಳು ಬರುವಾಗ ಈ ಮಾರ್ಗಗಳನ್ನು ಅನುಸರಿಸಿ ಗೆಲುವಿನ ಮೇಲೆ ಗೆಲುವನ್ನು ಹೊಂದಿಕೊಳ್ಳಿರಿ. 'ಯೆಹೋಷಾಫಾಟ' ಎಂದರೆ ಪ್ರಲಾಪಿಸುವವನು, ಮೊರೆಯಿಡುವವನು ಎಂದು ಅರ್ಥ. ಮೊರೆಯಿಟ್ಟು ಪ್ರಾರ್ಥಿಸುವವರಿಗೆ ಯಾವಾಗಲೂ ಜಯ ಉಂಟು.

ಒಂದು ದಿನ ಅರಸನಾದ ಯೆಹೋಷಾಫಾಟನಿಗೆ ಒಂದು ಭೀಕರವಾದ ಸಮಾಚಾರ ಬಂತು. ಇಸ್ರಾಯೇಲ್ಯರಿಗೆ ವಿರೋಧವಾಗಿ ಅಮ್ಮೋನಿಯರೂ, ಮೋವಾಬ್ಯರೂ, ಸೇಯೀರ್ ಬೆಟ್ಟದ ಜನರೂ, ಮೆಗೂನ್ಯರೂ, ಯುದ್ಧಕ್ಕೆ ಬಂದಿರುವರು ಎಂಬುದೇ ಆ ಸುದ್ದಿ. ಆ ಸಮಯದಲ್ಲಿ ಯೆಹೋಷಾಫಾಟನು ಯುದ್ಧಕ್ಕೆ ಸಿದ್ಧನಾಗಿರಲಿಲ್ಲ. ಯುದ್ಧದ ಸಮಾಚಾರ ಅವನನ್ನು ಬಹಳವಾಗಿ ಭಯ ಭೀತಿಗೆ ಒಳಪಡಿಸಿತು. ಶತ್ರು ಬರುವಾಗ ತನ್ನನ್ನು ಬಹಳ ಶಕ್ತಿಶಾಲಿಯನ್ನಾಗಿ ತೋರ್ಪಡಿಸಿಕೊಂಡೇ ಬರುವನು. ಆದರೆ ದೇವರ ಮಕ್ಕಳು ಶತ್ರುವಿನ ಬಲವನ್ನು ನೋಡದೆ, ಅವನಿಗಿಂತ ಹೆಚ್ಚಿನವನಾದ ಕರ್ತನ ಕಡೆಗೆ ತಮ್ಮ ದೃಷ್ಟಿಯನ್ನು ಹರಿಸಿ ಆತನಲ್ಲೇ ತಮ್ಮನ್ನು ದೃಢಪಡಿಸಿಕೊಳ್ಳುವರು. ಇಕ್ಕಟ್ಟಿನ ದಿನದಲ್ಲಿ ನೀನು ಬಳಲಿಹೋದರೆ ನಿನ್ನ ಬಲವೂ ಇಕ್ಕಟ್ಟೇ (ಜ್ಞಾನೋ.24:10) ಎಂದು ಸತ್ಯವೇದ ಹೇಳುತ್ತದೆ.

ನೀವು ಇಕ್ಕಟ್ಟಿನ ಸಮಯಗಳಲ್ಲಿ ಬೆಂಕಿಯ ಬಳಿ ತಂದ ಮೇಣದ ಬತ್ತಿಯಂತೆ ಕರಗಿಹೋಗಬಾರದು. ಜೇಡಿಮಣ್ಣಿನಂತೆ ಗಟ್ಟಿಯಾಗಬೇಕು. ನಮ್ಮ ದೇವರು ಹತ್ತಿರದಲ್ಲೇ ಇರುವನು. ಟೆಲಿಫೋನ್, ಎಸ್.ಎಂ.ಎಸ್., ಇ.ಮೇಲ್‍ಗಳಿಗಿಂತಲೂ ನಿಮ್ಮ ಪ್ರಾರ್ಥನೆ ದೇವರನ್ನು ಅತಿವೇಗವಾಗಿ ಸಂಪರ್ಕಿಸುವದು "ಕಷ್ಟಕಾಲದಲ್ಲಿ ನನಗೆ ಮೊರೆಯಿಡಿರಿ; ಬಿಡಿಸುವೆನು" (ಕೀರ್ತ. 50:15). "ಅವನು ನನಗೆ ಮೊರೆಯಿಡುವಾಗ ಸದುತ್ತರವನ್ನು ದಯಪಾಲಿಸುವೆನು. ಇಕ್ಕಟ್ಟಿನಲ್ಲಿ ಹತ್ತಿರವಿದ್ದು ಅವನನ್ನು ತಪ್ಪಿಸಿ ಘನಪಡಿಸುವೆನು" (ಕೀರ್ತ. 91:15) ಎಂಬುದು ನಮ್ಮ ಕರ್ತನ ವಾಗ್ದಾನವಾಗಿದೆ. ಎಷ್ಟು ಮಾತ್ರವೂ ಸೋತುಹೋಗಬೇಡಿರಿ. ಪೂರ್ಣಹೃದಯದಿಂದ ಆತನನ್ನು ಕರೆಯಿರಿ. ಆತನು ನಿಮ್ಮನ್ನು ಸೈತಾನನ ಬಲೆಗೆ ತಪ್ಪಿಸುವನು. ಒಂದು ಸಂಗತಿಯನ್ನು ನೀವು ಸ್ಪಷ್ಟವಾಗಿ ತಿಳಿದುಕೊಳ್ಳಿರಿ ಅದು ಲೌಕೀಕವಾದ ಯುದ್ಧವಾದರೂ ಸರಿಯೇ, ಆತ್ಮೀಕ ಯುದ್ಧವಾದರೂ ಸರಿಯೇ. ಪರಾಕ್ರಮಶಾಲಿಯೂ, ಸೇನಾಧೀಶ್ವರನೂ ಆದ ನಮ್ಮ ಕರ್ತನು ನಿಮಗಾಗಿ ಹೋರಾಡಿ ಜಯವನ್ನು ತಂದುಕೊಡುವನು.

ಯೆಹೋಷಾಫಾಟನಿಗೆ ವಿರೋಧವಾಗಿ ಬಂದ ಯುದ್ಧದಲ್ಲಿ ಅವನು ಯಾವ ಈಟಿಯನ್ನಾಗಲಿ, ಕತ್ತಿಯನ್ನಾಗಲಿ ಉಪಯೋಗಿಸಲಿಲ್ಲ. ಅವನ ಸೈನಿಕರೊಬ್ಬರೂ ರಕ್ತ ಚೆಲ್ಲಲಿಲ್ಲ ಬೇರೆಯವರನ್ನು ಹೊಡೆದು ಬೀಳಿಸಲೂ ಇಲ್ಲ. ಆದರೆ ಜಯಗಳಿಸಿದನು. ಆ ಜಯದ ರಹಸ್ಯವೇನು?

## 1. ಕರ್ತನನ್ನು ಹುಡುಕಿರಿ

ಅರಸನಾದ ಯೆಹೋಷಾಫಾಟನೂ, ಅವನ ಪ್ರಜೆಗಳೂ ಕರ್ತನನ್ನು ಹುಡುಕಲು ಏಕ ಮನಸ್ಸುಳ್ಳವರಾದರು. ಸತ್ಯವೇದ ಹೇಳುತ್ತದೆ "ನೀವು ಆತನನ್ನು ಹುಡುಕಿದರೆ ನಿಮಗೆ ಸಿಕ್ಕುವನು; ಆತನನ್ನು ಬಿಟ್ಟರೆ ಆತನೂ ನಿಮ್ಮನ್ನು ಬಿಟ್ಟುಬಿಡುವನು" ಎಂದು (2ಪೂ.ವೃ. 15:2). ಈ ಮಾತನ್ನು ದಾವೀದ ರಾಜನು ತನ್ನ ಮಗನಾದ ಸೊಲೊಮೋನನಿಗೂ ಹೇಳಿದನು "ನೀನು ಆತನನ್ನು ಹುಡುಕುವದಾದರೆ ಆತನು ನಿನಗೆ ಸಿಕ್ಕುವನು. ಆತನನ್ನು ಬಿಟ್ಟರೆ ನಿನ್ನನ್ನು ಶಾಶ್ವತವಾಗಿ ತಳ್ಳಿಬಿಡುವನು" ಎಂದು (1ಪೂ.ವೃ. 28:9).

ಇದು ಕರ್ತನನ್ನು ಹುಡುಕುವ ಕಾಲವಾಗಿದೆ. ಆತನೊಂದಿಗೆ ಏಕಾಂಗಿಯಾಗಿ ಕಾಲ ಕಳೆಯುವ ಸಂದರ್ಭ ಕ್ರಮಪಡಿಸಿಕೊಳ್ಳುವದನ್ನು ಕ್ರಮ ಪಡಿಸಿ, ದೇವರ ಸಮ್ಮುಖದಲ್ಲಿ ನಿಮ್ಮನ್ನು ಪರೀಕ್ಷಿಸಿಕೊಳ್ಳಿರಿ. "ದೇವರೇ ನನ್ನನ್ನು ಪರೀಕ್ಷಿಸಿ ತಿಳಿದುಕೋ, ನನ್ನ ಮಾರ್ಗಗಳನ್ನು ಸರಿಪಡಿಸು" ಎಂದು ಬೇಡಿಕೊಳ್ಳಿರಿ. ಅನೇಕ ವೇಳೆ ನೀವು ದೇವರನ್ನು



ಅಸಡ್ಡೆ ಮಾಡಿ ತಿರಸ್ಕರಿಸಿರಬಹುದು. ಆದರೆ ಪಶ್ಚಾತ್ತಾಪದ ಹೃದಯದಿಂದ ಆತನ ಬಳಿಗೆ ಬರುವಿರಾದರೆ ನಿಶ್ಚಯವಾಗಿ ಆತನು ನಿಮ್ಮನ್ನು ಅಂಗೀಕರಿಸಿ ತನ್ನ ಸಹಾಯಹಸ್ತವನ್ನು ನೀಡುವನು.

## 2. ಉಪವಾಸ ಪ್ರಾರ್ಥನೆ

"ಯೆಹೋಷಾಫಾಟನು ಹೆದರಿ ಯೆಹೋವನನ್ನೇ ಆಶ್ರಯಿಸಿಕೊಳ್ಳಬೇಕೆಂದು ನಿರ್ಣಯಿಸಿಕೊಂಡು ಯೆಹೂದ್ಯರೆಲ್ಲರೂ ಉಪವಾಸ ಮಾಡಬೇಕೆಂದು ಪ್ರಕಟಿಸಿದನು" (2 ಪೂ.ವೃ. 20:3) ಎಂದು ಸತ್ಯವೇದ ಹೇಳುತ್ತದೆ. ಅದರಂತೆಯೇ ಪಾರಸಿಯ ರಾಜನಾದ ಅಹಷ್ವೇರೋಷನ ಆಳ್ವಿಕೆಯ ಕಾಲದಲ್ಲಿ ಮಂತ್ರಿಯಾದ ಹಾಮಾನನ ಕುತಂತ್ರದಿಂದ ಯೆಹೂದ್ಯರೆಲ್ಲರನ್ನು ಕೊಲ್ಲಬೇಕೆಂಬ ರಾಜಾಜ್ಞೆ ಹೊರಟಾಗ ಯೆಹೂದ್ಯಳೂ, ಅರಸನ ಪಟ್ಟದ ರಾಣಿಯೂ ಆದ ಎಸ್ತೇರಳು ತನ್ನ ಸೋದರ ಮಾವನಾದ ಮೊರ್ದೆಕೈಯ ಬಳಿ ಶೂಷನ್ ಪಟ್ಟಣದಲ್ಲಿ ಸಿಕ್ಕುವ ಎಲ್ಲಾ ಯೆಹೂದ್ಯರನ್ನು ಕೂಡಿಸಿ ಉಪವಾಸ ಮಾಡಬೇಕೆಂದು ಹೇಳಿ ಕಳುಹಿಸಿದಳು. ಹಾಗೆಯೇ ತಾನೂ ತನ್ನ ದಾಸಿಯರೆಲ್ಲರೊಂದಿಗೆ ಉಪವಾಸ ಮಾಡಿದಳು. ಇದರ ಫಲಿತಾಂಶ ಅತಿಶಯವಾದದು (ಎಸ್ತೇರ್ 4:16). ದುಷ್ಟ ಹಾಮಾನನು ತಾನು ನಿರ್ಮಿಸಿದ ಮರಣದ ಕಂಬಕ್ಕೆ ತಾನೇ ತೂಗುಹಾಕಲ್ಪಡಬೇಕಾಯಿತು. ಯೆಹೂದ್ಯರ ವಿರೋಧವಾಗಿ ಎದ್ದ ಎಲ್ಲಾ ದುಷ್ಟಶಕ್ತಿಗಳು ನಾಶಹೊಂದಿದವು. ಪ್ರಿಯರೇ, ಸಾಧಾರಣ ಪ್ರಾರ್ಥನೆಗೆ ಜಗ್ಗದ ಅಶುದ್ಧಾತ್ಮಗಳು, ಉಪವಾಸ ಪ್ರಾರ್ಥನೆಗೆ ತಲೆಬಾಗಲೇಬೇಕು" (ಮತ್ತಾ. 7:21). ನೀವೂ ಸಹಾ ಕ್ಲಿಷ್ಟ ಸಮಸ್ಯೆಗಳು ಎದುರಾಗುವಾಗ, ಉಪವಾಸ ಪ್ರಾರ್ಥನೆ ಮಾಡಿ ಜಯಗಳಿಸಿರಿ.

## 3. ಏಕಾಂತವಾದ ಪ್ರಾರ್ಥನೆ

ಯೆಹೋಷಾಫಾಟನು ಇಸ್ರಾಯೇಲ್ಯರಿಗೆ ಉಪವಾಸವಿದ್ದು ಪ್ರಾರ್ಥಿಸಲು ಹೇಳಿದ್ದಲ್ಲದೆ, ತಾನೂ ಉಪವಾಸವಿದ್ದು ಬಲವಾಗಿ ಪ್ರಾರ್ಥಿಸಿದನು. ಅವನು ಮಾಡಿದ ಪ್ರಾರ್ಥನೆಯನ್ನು 2 ಪೂ.ವೃ. 20:6–12ನೇ ವಚನಗಳವರೆಗೆ ಕಾಣಬಹುದು. ನೀವು ಪ್ರಾರ್ಥಿಸುವಾಗೆಲ್ಲಾ ಆಸಕ್ತಿಯಿಂದ ನಿರ್ದಿಷ್ಟವಾಗಿ ಪ್ರಾರ್ಥಿಸಿರಿ. ಭಯಭಕ್ತಿಯೊಂದಿಗೆ ಪ್ರಾರ್ಥಿಸಿರಿ. ನಿಮ್ಮನ್ನು ತಗ್ಗಿಸಿಕೊಂಡು ಪ್ರಾರ್ಥಿಸಿರಿ. ನಂಬಿಕೆಯಿಂದ ಕೂಡಿದವರಾಗಿ ಪ್ರಾರ್ಥಿಸಿರಿ. ನಿಮ್ಮ ಎಲ್ಲಾ ಭಾರವನ್ನು ಕರ್ತನ ಮೇಲೆ ಹಾಕಿರಿ. ಕರ್ತನು ನಿಶ್ಚಯವಾಗಿ ನಿಮ್ಮ ಪ್ರಾರ್ಥನೆಗೆ ಉತ್ತರಿಸುವನು.

## 4. ಸ್ತುತಿಸಿರಿ

"ಆ ಮೇಲೆ ಯೆಹೋವನಿಗೋಸ್ಕರ ಗಾಯನ ಮಾಡುವದಕ್ಕಾಗಿ ಕೆಲವು ಭಟರನ್ನು ಆರಿಸಿಕೊಂಡು ಯೆಹೋವನಿಗೆ ಕೃತಜ್ಞತಾಸ್ತುತಿ ಮಾಡಿರಿ. ಆತನ ಕೃಪೆಯು ಶಾಶ್ವತವಾದದ್ದು

ಎಂದು ಭಜಿಸಿರಿ ಎಂದು ಹೇಳಿ ತಾನೂ ಅವರ ಮುಂದಾಗಿ ಹೊರಟನು" (2ಪೂ.ವೃ.20:21).

ಸ್ತುತಿಗಳ ನಡುವೆ ವಾಸಿಸುವ ಕರ್ತನು, ಇಸ್ರಾಯೇಲ್ಯರ ಸ್ತುತಿಯ ಶಬ್ದವನ್ನು ಕೇಳಿಸಿಕೊಂಡು ಅವರಿಗಾಗಿ ಯುದ್ಧಮಾಡಿದನು. ಸ್ತುತಿಯ ಶಕ್ತಿಗೆ ಸಾಟಿಯಾದದ್ದು ಯಾವದೂ ಇಲ್ಲ. ಪ್ರಿಯರೇ, ಸಮಸ್ಯೆಗಳು, ಹೋರಾಟಗಳು, ಕಳವಳಗಳು ಬಂದು ಎರಗಿದಾಗ ಭಯಭೀತರಾಗಬೇಡಿರಿ. ಅಂಥಹ ಸಮಯಗಳಲ್ಲಿ ಕರ್ತನನ್ನು ಸ್ತುತಿಸಿರಿ. "ಯೆಹೋವನು ಸ್ತೋತ್ರಕ್ಕೆ ಅರ್ಹನು; ಆತನಿಗೆ ಮೊರೆಯಿಡಲು ಆತನು ನನ್ನನ್ನು ಶತ್ರುಗಳಿಂದ ರಕ್ಷಿಸುತ್ತಾನೆ ಎಂದು ದಾವೀದನು ಹೇಳುತ್ತಾನೆ (ಕೀರ್ತ.18:3). ಇಸ್ರಾಯೇಲ್ಯರು ಯೆರಿಕೋ ಪಟ್ಟಣವನ್ನು ಪ್ರವೇಶಿಸಲು ತಡೆಯಾಗಿದ್ದ ಕೋಟೆಯ ಗೋಡೆಯನ್ನು ಉರುಳಿಸಲು ಅವರು ಉಪಯೋಗಿಸಿದ ಅಸ್ತ್ರ ದೇವಸ್ತುತಿ.

## 5. ಕರ್ತನಲ್ಲಿ ಉಲ್ಲಾಸಿಸಿರಿ

ಯೆಹೋಷಾಫಾಟನೂ ಅವನ ಭಟರೂ, ಗೆಲುವಿನ ಸಂತೋಷದೊಂದಿಗೆ ನಿಂತುಬಿಡಲಿಲ್ಲ. ಇನ್ನೊಂದು ಹೆಜ್ಜೆ ಮುಂದಿಟ್ಟು ಕರ್ತನಲ್ಲಿ ಆನಂದಿಸಿದರು (2ಪೂ.ವೃ.20:26,27) ಎಂದು ಸತ್ಯವೇದದಲ್ಲಿ ಕಾಣುತ್ತೇವೆ. ನಿಮ್ಮ ಜೀವಿತದಲ್ಲೂ ಸಹ ಕರ್ತನಲ್ಲಿ ಉಲ್ಲಾಸಿಸಲು ತೀರ್ಮಾನಿಸಿರಿ. ದೇವಜನರು ಉಲ್ಲಾಸಿಸುವದು ಕರ್ತನ ಅಂತರ್ಯವನ್ನು ಮುದಗೊಳಿಸುವದು. ಭೂಮಿಯಲ್ಲಿ ದೇವಜನರು ಉಲ್ಲಾಸಿಸುವಾಗ ಪರಲೋಕವೂ ಅವರೊಂದಿಗೆ ಸೇರುವದು. ದೇವದೂತರೂ ಹಾಡಿಕುಣಿದಾಡುವರು.

ದೇವಜನರೇ, ಕರ್ತನು ಈ ನೂತನ ವರುಷವನ್ನು ನೀಡಿದ್ದರಿಂದ ಆತ್ಮದಲ್ಲಿ ಉಲ್ಲಾಸಿಸಿರಿ. ಈ ವರುಷವೂ ದೇವ ಪ್ರಸನ್ನತೆಯು ನಿಮ್ಮ ಮುಂದಾಗಿ ಹೋಗುವದರಿಂದ ಉಲ್ಲಾಸಪಡಿರಿ. ನೀವು ಉಲ್ಲಾಸಿಸುವದರಿಂದ ಸೈತಾನನ ಸಾಮ್ರಾಜ್ಯ ಚದುರಿ ನಾಶವಾಗುವದು. ದೇವರ ರಾಜ್ಯ ದೇಶದಲ್ಲಿ ಬಲವಾಗಿ ಹರಡುವದು.

**ವಾಗ್ದಾನ ವಚನ** – ಯೆಶಾಯ 32:18

"ನನ್ನ ಜನರು ಸಮಾಧಾನ ನಿವಾಸದಲ್ಲಿಯೂ ನಿರ್ಭಯ ನಿಲಯಗಳಲ್ಲಿಯೂ ನೆಮ್ಮದಿಯ ಆಶ್ರಯಗಳಲ್ಲಿಯೂ ನೆಲೆಗೊಳ್ಳುವರು"



## ಭಕ್ತ ಅಗಸ್ಟೀನ್ ಮಾಡಿದ ಅರ್ಪಣೆಯ ಪ್ರಾರ್ಥನೆ

ಭಕ್ತ ಅಗಸ್ಟೀನ್ ತನ್ನನ್ನು ಕರ್ತನಿಗೆ ಒಪ್ಪಿಸಿಕೊಡುವ ಮುನ್ನ ಸಮಾಧಾನ ವಿಲ್ಲದವರಾಗಿದ್ದರು. ಪ್ರಾರ್ಥಿಸಿದರೆ ಸಮಾಧಾನವಾಗಬಹುದೆಂದು ಎಣಿಸಿ ಕರ್ತನೇ ನನ್ನ ಪಾಪಗಳಿಂದ ನನ್ನನ್ನು ಬಿಡಿಸು; ಆದರೆ ನಾನು ಅವುಗಳನ್ನು ಮಾಡದೆ ಇರಲಾರೆ ಎಂದು ಪ್ರಾರ್ಥಿಸಿದರು. ಇದರಿಂದ ಅವರಿಗೆ ಸಮಾಧಾನವಾಗಲಿಲ್ಲ. ಆದ್ದರಿಂದ ಪುನಃ ಕರ್ತನೇ ನನ್ನ ಪಾಪಗಳಿಂದ ನನ್ನನ್ನು ರಕ್ಷಿಸು. ಆದರೆ ಒಂದು ಪಾಪವನ್ನು ಮಾತ್ರ ನಾನು ಬಿಡಲಾರೆ ಎಂದು ಪ್ರಾರ್ಥಿಸಿದರು. ಆದರೆ ಅವರಿಗೆ ಸಮಾಧಾನವಾಗಲಿಲ್ಲ. ಆದ್ದರಿಂದ "ಕರ್ತನೇ ನನ್ನ ಎಲ್ಲಾ ಪಾಪಗಳಿಂದಲೂ ನನಗೆ ಬಿಡುಗಡೆ ಕೊಡು, ಈಗಲೇ ರಕ್ಷಿಸು" ಎಂದು ಬೇಡಿದರು. ಆಗ ಹೃದಯದಲ್ಲಿ ದೈವಿಕ ಸಮಾಧಾನ ಉಂಟಾಯಿತು. ಪೂರ್ಣವಾದ ಅರ್ಪಣೆಯ ಪ್ರಾರ್ಥನೆಯೇ, ಜೀವಿತದಲ್ಲಿ ಸ್ಥಿರವಾದ ದೇವ ಸಮಾಧಾನವನ್ನು ಕೊಡಬಲ್ಲದು. ಕರ್ತನಿಗೆ ಪೂರ್ಣವಾಗಿ ಅರ್ಪಿಸಿ ಪ್ರಾರ್ಥನೆ ಮಾಡಿರಿ.

## ಪೂರ್ವ ಸ್ಥಿತಿ ಹೋಯಿತು

ಒಂದು ಹಡಗು ಒಡೆದುಹೋಯಿತು. ನೀರಿನಲ್ಲಿ ಬಿದ್ದ ಪ್ರಯಾಣಿಕರು ಪರಿತಪಿಸುತ್ತಿದ್ದರು. ಅನೇಕರು ಮುಳುಗಿ ಸತ್ತುಹೋದರು. ಒಬ್ಬನು ಮಾತ್ರ ತಪ್ಪಿಸಿಕೊಂಡು ದೂರದಲ್ಲಿದ್ದ ದ್ವೀಪದೆಡೆಗೆ ಬಹಳ ಪ್ರಯಾಸದಿಂದ ಮುಳುಗುತ್ತಾ ತೇಲುತ್ತಾ ಬರುತ್ತಿದ್ದನು. ಆ ದ್ವೀಪದ ಜನರು ಅವನನ್ನು ನೋಡಿ, ತಮ್ಮ ಹಡಗುಗಳನ್ನು ತೆಗೆದುಕೊಂಡು ಬಂದು ಅವನನ್ನು ಕಾಪಾಡಿ, ಅವನಿಗೆ ಆಹಾರ ಕೊಟ್ಟು ಉಪಚರಿಸಿದರು. ಮೂರನೇ ದಿನ ಆ ದ್ವೀಪವನ್ನು ಸುತ್ತಾಡಿ ಬಂದ ಅವನು ಆ ದ್ವೀಪವಾಸಿಗಳ ಬಳಿ, ನೀವೆಲ್ಲರೂ ಬಹಳ ಒಳ್ಳೆಯವರಾಗಿ ಕಾಣುತ್ತೀರಿ? ಆದರೆ ನಿಮ್ಮನ್ನು ಈ ಮತ ಕೆಡಿಸಿಬಿಡುತ್ತದೆ, ಸೋಮಾರಿಗಳನ್ನಾಗಿಸುತ್ತದೆ. ಅದು ಒಂದು ಮಾದಕ ವಸ್ತು ಎಂದು ನೀವು ಯಾಕೆ ತಿಳಿಯಲಿಲ್ಲ. ಯೇಸುಕ್ರಿಸ್ತನನ್ನು ಆರಾಧಿಸಿ ಮೂಢನಂಬಿಕೆಯಲ್ಲಿ ಯಾಕೆ ಬೀಳುತ್ತೀರಿ? ಎಂದನು. ಅದಕ್ಕೆ ಅವರು ಅಯ್ಯಾ ನಾವು ನರಮಾಂಸ ಭಕ್ಷಕರಾಗಿದ್ದೆವು. ಹತ್ತು ವರ್ಷಕ್ಕೆ ಹಿಂದೆ ನೀವು ಇಲ್ಲಿಬಂದಿದ್ದಿದ್ದರೆ ನೀವೇ ನಮಗೆ ಆಹಾರವಾಗುತ್ತಿದ್ದಿರಿ. ಒಬ್ಬ ಮಿಶನರಿ ತನ್ನ ಪ್ರಾಣದ ಆಸೆ ತೊರೆದು ನಮ್ಮಲ್ಲಿಗೆ ಬಂದು ಯೇಸುಕ್ರಿಸ್ತನ ಕುರಿತು ನಮಗೆ ಹೇಳಿದರು. ಕೊಲೆಗಡುಕತನವೆಲ್ಲವನ್ನೂ ಅಗಲಿಸಿ, ನಮ್ಮನ್ನು ಒಳ್ಳೆಯವರನ್ನಾಗಿ ಸಾಧುಗಳನ್ನಾಗಿರಿಸುವನು. ಇಲ್ಲದಿದ್ದರೆ ನೀವು ಹೀಗೆ ನಮ್ಮ ಬಳಿ ಮಾತಾಡಲಾಗುತ್ತಿರಲಿಲ್ಲವೆಂದರು. ಇದನ್ನು ಕೇಳಿದ ಪ್ರಯಾಣಿಸಿದ ಪ್ರಯಾಣಿಕ ಆಶ್ಚರ್ಯಪಟ್ಟನು. ಕಟ್ಟಳೆ, ಕಾನೂನು, ಸಮಾಜ, ಸೆರೆಮನೆಗಳು ಮಾರ್ಪಡಿಸಲಾರದವರನ್ನು ಕರ್ತನು ಒಂದು ಕ್ಷಣದಲ್ಲಿ ಮಾರ್ಪಡಿಸುವನು.

**ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೋ, ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು (2 ಕೊರಿ. 5:17).**

## ನಿಮ್ಮ ಚಿಂತನೆಗಾಗಿ ನಿಜವಾದ ಕ್ರೈಸ್ತನು ಯಾರು?

* ಪರಲೋಕ ಸ್ವಾಸ್ಥ್ಯಕ್ಕಾಗಿ ಕರೆಯಲ್ಪಟ್ಟ ಭಕ್ತನಾಗಿರಬೇಕು (ಇಬ್ರಿ. 3:1).
* ದುರಾಶೆಯಿಂದುಂಟಾಗುವ ಕೆಟ್ಟತನಕ್ಕೆ ತಪ್ಪಿಸಿಕೊಂಡು ದೈವ ಸ್ವಭಾವದಲ್ಲಿ ಪಾಲನ್ನು ಹೊಂದುವವರಾಗಬೇಕು (2 ಪೇತ್ರ. 1:4).
* ದೈವ ಸ್ವಭಾವದಲ್ಲುಂಟಾಗುವ ಭಾಗ್ಯಕ್ಕೆ ಕರೆಯಲ್ಪಟ್ಟವರಂತೆ ಶುದ್ಧರಾಗಿಯೂ ನೀತಿವಂತರಾಗಿಯೂ ನಿರ್ದೋಷಿಗಳಾಗಿಯೂ ನಡೆದುಕೊಳ್ಳಬೇಕು (1 ಥೆಸ.2:10).
* ಆತನವರಾಗಲು ಕರೆಯಲ್ಪಟ್ಟವರಂತೆ ಉತ್ತಮವಾಗಿ ಉಪಯೋಗಿಸಲ್ಪಡಬೇಕು (2 ತಿಮೋ. 1:5,6).
* ಉತ್ತಮವಾದ ಜವಾಬ್ದಾರಿಕೆಯುಳ್ಳ ಸೇವಕನಂತೆ ಶುದ್ಧ ಹೃದಯ ಒಳ್ಳೇ ಮನಸ್ಸಾಕ್ಷಿ, ನಿಷ್ಕಪಟವಾದ ನಂಬಿಕೆ, ಪ್ರೀತಿಯುಳ್ಳವರಾಗಿರಬೇಕು.
* ಬೆಳಕಿನ ರಾಜ್ಯದಲ್ಲಿ ಭಕ್ತರ ಬಾಧ್ಯತೆಯಲ್ಲಿ ಪಾಲು ಹೊಂದಲು ಯೋಗ್ಯರಾಗಿರಬೇಕು (ಕೊಲೊ. 1:12).
* ಕ್ರಿಸ್ತನ ಬಾಧೆಗಳಿಗೆ ಸಾಕ್ಷಿಯುಳ್ಳವನಾಗಿಯೂ, ಮುಂದೆ ಪ್ರತ್ಯಕ್ಷವಾಗುವ ಪ್ರಭಾವದಲ್ಲಿ ಪಾಲುಗಾರನಾಗಿರಬೇಕು (1 ಪೇತ್ರ. 5:1).
* ಪರಲೋಕ ವಾಸಿಯಂತೆ ಎಲ್ಲಾ ವಿಷಯಗಳಲ್ಲಿ ಆಸೆ ಇಚ್ಛೆಗಳನ್ನು ತೊರೆದವರಾಗಿರಬೇಕು (1 ಕೊರಿ. 9:24,25).
* ಮೊದಲಿನಿಂದ ಹಿಡಿದುಕೊಂಡ ಭರವಸವನ್ನು ಅಂತ್ಯದವರೆಗೂ ದೃಢವಾಗಿ ಹಿಡಿದುಕೊಳ್ಳುವವನಾಗಿರಬೇಕು (ಇಬ್ರಿ. 3:14).

## ನಿಮ್ಮ ಚಿಂತನೆಗಾಗಿ

* ಒಳ್ಳೇದನ್ನು ಮಾಡುವದರಲ್ಲಿ ಮೊದಲಿಗನಾಗಿರು. ಇಲ್ಲವೆಂದರೆ ಕೆಟ್ಟತನಕ್ಕೆ ನೀನು ಅಡಿಯಾಳಾಗಿ ಬದಲಾಗುವಿ.
* ಬಿತ್ತುವ ಬೀಜ ಒಳ್ಳೆಯ ದರ್ಜೆಯದಾಗಿದ್ದರೆ ಸಾಲದು, ಬಿತ್ತುವ ನೆಲವೂ ಬಿತ್ತನೆಗೆ ಯೋಗ್ಯವಾದದ್ದಾಗಿರಬೇಕು.
* ಅಲೆಗಳನ್ನು ಕಂಡು ಅಂಜುವವನು, ಆಳದಲ್ಲಿರುವ ಅಮೂಲ್ಯ ದ್ರವ್ಯವನ್ನು ಹೊಂದಲಾರ.
* ಒಳ್ಳೆದನ್ನು ಮಾಡಿದರೆ ಒಳ್ಳೆಯವನಾಗಿರುವಿ. ಅದನ್ನು ನೀನೇ ಪ್ರಚಾರ ಮಾಡಿದರೆ ಕೆಡುಕನಾಗುವಿ.



## ಪ್ರಾರ್ಥನೆಯ ಮುಖ್ಯತ್ವ

ಕೆಲವು ಸಮಯಗಳಲ್ಲಿ ನಮಗೆ ಪ್ರಾರ್ಥಿಸಲು ಸಮಯವಿಲ್ಲದೆ, ಕೆಲಸಕಾರ್ಯಗಳ ಗೊಂದಲದಲ್ಲಿ ಮುಳುಗಿಹೋಗುತ್ತೇವೆ. ಆದರೆ ಬಹಳ ಅಗತ್ಯವಾದ ವೇಳೆಗಳಲ್ಲಿ ಕೆಲಸಕ್ಕಿಂತಲೂ ಪ್ರಾರ್ಥನೆಗೆ ಮುಖ್ಯತ್ವ ಕೊಡಬೇಕಾದುದು ಅಗತ್ಯವಾಗಿದೆ. ನೀವು ಪ್ರಾರ್ಥನೆಗಾಗಿ ನಿಮ್ಮ ಹೃದಯವನ್ನು ಒಪ್ಪಿಸಿಕೊಡುವಾಗ, ಕರ್ತನು ಬೇರೆ ಎಲ್ಲಾ ಕೆಲಸಗಳನ್ನು ನಿಮಗೆ ಸಾಧಕವಾಗಿ ಮಾಡಿಕೊಡುವನು. ಒಬ್ಬರು ದೂರ ಸ್ಥಳದಲ್ಲಿರುವ ಒಬ್ಬ ಅಧಿಕಾರಿಯನ್ನು ಕಾಣಲು ಬೆಳಿಗ್ಗೆಯೇ ಹೊರಟರು. ಆದರೆ ಕರ್ತನ ಆತ್ಮನು ಅವರನ್ನು ಪ್ರಾರ್ಥನೆಗೆ ಪ್ರೇರಿಸುತ್ತಲೇ ಇದ್ದನು. ವಿಧೇಯನಾದ ಭಕ್ತನು ದೀರ್ಘಕಾಲವನ್ನು ಪ್ರಾರ್ಥನೆಯಲ್ಲಿ ಕಳೆದು ಹೊರಬಂದಾಗ, ಆ ಅಧಿಕಾರಿ ತನ್ನನ್ನು ತನ್ನ ಮನೆಗೆ ಬಂದಿರುವದನ್ನು ಕಂಡರು. ಮಾಡಿಮುಗಿಸಬೇಕಾದ ಕಾರ್ಯಗಳೆಲ್ಲಾ ಸುಲಭವಾಗಿ ಮುಗಿದವು. ಭಕ್ತನಾದ ಮಾರ್ಟಿನ್ ಲೂಥರ್ ನನಗೆ ಇಂದು ಬಹು ಹೆಚ್ಚಾಗಿ ಕೆಲಸಗಳಿವೆ; ಆದ್ದರಿಂದ ನಾನು ಹೆಚ್ಚು ಹೊತ್ತು ಪ್ರಾರ್ಥಿಸಬೇಕು. ಕೊನೆ ಪಕ್ಷ ಮೂರು ತಾಸುಗಳಾದರೂ ನಾನು ಪ್ರಾರ್ಥಿಸಿದರೆ ಮಾತ್ರವೇ ಎಲ್ಲಾ ಕರ್ತವ್ಯವನ್ನು ನಾನು ಮುಗಿಸಬಲ್ಲೆ ಎಂದು ಹೇಳಿದರು.

ಎಡ್‌ವರ್ಡ್ ಬೈಸನ್ ಎಂಬ ಭಕ್ತನು "ನನ್ನ ಉನ್ನತ ವ್ಯಾಸಂಗದ ಸಮಯಗಳಲ್ಲಿ ಹೆಚ್ಚು ಓದಬೇಕಾಗಿದ್ದಾಗಲೂ, ಪರೀಕ್ಷೆ ಸಮಯಗಳಲ್ಲಿ ನನ್ನ ಪ್ರಾರ್ಥನೆಯನ್ನು ನಾನು ಬಿಟ್ಟದ್ದೇ ಇಲ್ಲ. ಅದಕ್ಕಾಗಿ ಕರ್ತನು ನನಗೆ ವಿಶೇಷ ಜ್ಞಾಪಕ ಶಕ್ತಿಯನ್ನೂ, ತಿಳುವಳಿಕೆಯನ್ನೂ ಕೊಟ್ಟನು" ಎಂದಿದ್ದಾರೆ. ದೇವಮಗುವೇ, ನಿನ್ನ ಕೆಲಸ ಕಾರ್ಯಗಳಿಗೆ ಮುಖ್ಯತ್ವ ಕೊಡಲು ಮರೆಯದಿರು. ದೇವರ ರಾಜ್ಯಕ್ಕಾಗಿಯೂ, ನೀತಿಗಾಗಿಯೂ ತವಕ ಪಡಿರಿ. ಇವುಗಳ ಕೂಡ ಅವೆಲ್ಲವೂ ನಿಮಗೆ ದೊರಕುವವು (ಮತ್ತಾ. 6:33).

## ಪೌಲನಂತೆ ಪ್ರಾರ್ಥಿಸಬೇಕು

ಪೌಲನು ಕೊಲೊಸ್ಸೆಯವರಿಗಾಗಿ ಹೋರಾಡಿ ಪ್ರಾರ್ಥಿಸಿದನು ಎಂದು ಕೊಲೊ.2:1,2ರಲ್ಲಿ ಓದುತ್ತೇವೆ. ಎಫ್ರನು ಪ್ರಾರ್ಥನೆ ಮಾಡುವಾಗೆಲ್ಲಾ ನಿಮಗೋಸ್ಕರ ಹೋರಾಡಿ ವಿಜ್ಞಾಪಿಸುತ್ತಾನೆ ಎಂದು ಪೌಲನು ಹೇಳುತ್ತಾನೆ. ಕೊಲೊ. 4:12 ಮುಂದುವರಿದು ಪೌಲನು ನಮ್ಮನ್ನು ಬೇರೆಯವರಿಗಾಗಿ ಪ್ರಾರ್ಥಿಸುವಂತೆ ಹೇಳುತ್ತಾನೆ. ನೀವು ಪವಿತ್ರಾತ್ಮ ಪ್ರೇರಿತರಾಗಿ ಎಲ್ಲಾ ಸಮಯಗಳಲ್ಲಿ ಸಕಲ ವಿಧವಾದ ಪ್ರಾರ್ಥನೆಯಿಂದಲೂ, ವಿಜ್ಞಾಪನೆಯಿಂದಲೂ ದೇವರನ್ನು ಪ್ರಾರ್ಥಿಸಿರಿ. ನಾನು ಬಾಯಿ ತೆರೆಯುವಾಗ ಪೂರ್ವ ಕಾಲದಲ್ಲಿ ಗುಪ್ತವಾಗಿದ್ದ ಸುವಾರ್ತಾ ಸತ್ಯಾರ್ಥವನ್ನು ಭಯವಿಲ್ಲದೆ ತಿಳಿಸುವದಕ್ಕೆ ಬೇಕಾದ ಮಾತನ್ನು ದೇವರು ನನಗೆ ಅನುಗ್ರಹಿಸಬೇಕೆಂದು ಪ್ರಾರ್ಥಿಸಿರಿ (ಎಫೆ. 6:18,20). ಇದನ್ನು ನಾವೂ ಅನುಸರಿಸೋಣವೇ?

# ನಮ್ಮ ದೇಶದ ಸುದ್ದಿಗಳು
## (INDIAN NEWS)

**1. 10ರಲ್ಲಿ 6 ಭಾರತೀಯರು ಪತ್ನಿ ಪೀಡಿತರು :**

ಪ್ರತಿ ಹತ್ತರಲ್ಲಿ ಆರು ಭಾರತೀಯ ಪುರುಷರು ಒಂದಿಲ್ಲೊಂದು ಸಂದರ್ಭದಲ್ಲಿ ತಮ್ಮ ಹೆಂಡತಿ ಅಥವಾ ಸಂಗಾತಿಗಳೊಂದಿಗೆ ಹಿಂಸಾತ್ಮಕವಾಗಿ ನಡೆದುಕೊಂಡಿರುತ್ತಾರೆ ಎಂಬ ಸಂಗತಿಯನ್ನು ಅಧ್ಯಯನ ವರದಿಯೊಂದು ಬಹಿರಂಗಪಡಿಸಿದೆ.

**2. ಬ್ರಹ್ಮಪುತ್ರೆಗೆ ಚೀನಾ ಡ್ಯಾಂ, ಭಾರತಕ್ಕೆ ಪ್ರವಾಹ ಭೀತಿ :**

ಬ್ರಹ್ಮಪುತ್ರ ನದಿಗೆ ಅಡ್ಡವಾಗಿ ಟಿಬೆಟ್‌ನಲ್ಲಿ ಬೃಹತ್ ಜಲವಿದ್ಯುತ್ ಯೋಜನೆಗಾಗಿ ಅಣೆಕಟ್ಟೆ ಕಟ್ಟುತ್ತಿದ್ದ ಚೀನಾ, ಇದನ್ನು ಪೂರ್ತಿಗೊಳಿಸಿರುವುದಾಗಿ ಪ್ರಕಟಿಸಿದೆ. ಇದರಿಂದಾಗಿ ಭಾರತ ಮತ್ತು ಬಾಂಗ್ಲಾದೇಶಗಳಲ್ಲಿ ಪ್ರವಾಹ ಭೀತಿ ಹೆಚ್ಚಾಗಿದೆ.

**3. ಎಚ್‌ಐವಿ ಪ್ರಮಾಣ ಇಳಿಕೆ :**

ಕಳೆದ ಒಂದು ದಶಕದಲ್ಲಿ ದೇಶದಲ್ಲಿ ಹೊಸದಾಗಿ ಎಚ್‌ಐವಿ ಸೋಂಕಿಗೆ ತುತ್ತಾಗುವವರ ಪ್ರಮಾಣ ಶೇ.57ಕ್ಕೆ ತಗ್ಗಿದ್ದು, ಸಾವನ್ನಪ್ಪುವವರ ಸಂಖ್ಯೆ ಶೇ. 25ಕ್ಕೆ ಇಳಿದಿದೆ ಎಂದು ಕೇಂದ್ರ ಆರೋಗ್ಯ ಖಾತೆ ಸಚಿವರು ತಿಳಿಸಿದ್ದಾರೆ.

**4. ರಾಷ್ಟ್ರೀಯ ಹಸಿರು ಪೀಠ ಸೂಚನೆ :**

ಹವಾಮಾನ ಬದಲಾವಣೆಯ ಪರಿಣಾಮಗಳು ಮತ್ತು ಹವಾಮಾನ ಬದಲಾವಣೆಯ ರಾಷ್ಟ್ರೀಯ ಕ್ರಿಯಾ ಯೋಜನೆ (ಎನ್‌ಸಿಪಿಸಿಸಿ) ಅಳವಡಿಕೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತೆಗೆದುಕೊಂಡ ಕ್ರಮಗಳ ಬಗ್ಗೆ ಮಾಹಿತಿ ನೀಡುವಂತೆ ರಾಷ್ಟ್ರೀಯ ಹಸಿರು ಪೀಠ (ಎನ್‌ಜಿಟಿ) ಸೂಚನೆ ನೀಡಿದೆ.

**5. ಗೊತ್ತುವಳಿ ವಿರುದ್ಧ ಭಾರತ ಮತ :**

ಅಣ್ವಸ್ತ್ರ ಪ್ರಸರಣ ನಿಷೇಧ ಒಪ್ಪಂದಕ್ಕೆ (ಎನ್‌ಪಿಟಿ) ಎಲ್ಲಾ ಸದಸ್ಯ ರಾಷ್ಟ್ರಗಳೂ ಸಹಿ ಹಾಕಬೇಕೆಂದು ಒತ್ತಾಯಿಸುವ ಕರಡು ಗೊತ್ತುವಳಿಯ ವಿರುದ್ಧ ಭಾರತ ಮತ ಚಲಾಯಿಸಿದೆ. 'ಅಣ್ವಸ್ತ್ರ ರಹಿತ ದೇಶವಾಗಲು ನಮಗೆ ಒಪ್ಪಿಗೆ ಇಲ್ಲ' ಎಂದು ಭಾರತ ಹೇಳಿದೆ.





# ಹೊರ ದೇಶದ ಸುದ್ದಿಗಳು
## (FOREIGN NEWS)

**1. ಮಂಗಳಯಾನಕ್ಕೆ ಚೀನಾ ಸಿದ್ಧತೆ :**

ಮಂಗಳನ ಮೇಲ್ಮೈನಲ್ಲಿ ನೀರು ಮತ್ತು ಜೀವಿಗಳ ಸುಳಿವಿನ ಸಂಶೋಧನೆಗೆ ರೂಪಿಸಿರುವ ರೋವರ್ ನೌಕೆಯನ್ನು ಚೀನಾ ಅನಾವರಣ ಮಾಡಿದೆ. ಭಾರತದ ಮಂಗಳ ಯಾನವನ್ನು ಸರಿಗಟ್ಟುವ ನಿಟ್ಟಿನಲ್ಲಿ ಚೀನಾ ಈ ಯೋಜನೆ ಆರಂಭಿಸಿದೆ ಎನ್ನಲಾಗಿದೆ.

**2. ಇರಾನ್ ಅಣ್ವಸ್ತ್ರ ವಶಕ್ಕೆ 'ಐಎಸ್' ಸಂಚು :**

ಇಸ್ಲಾಮಿಕ್ ಸ್ಟೇಟ್ (ಐಎಸ್) ಉಗ್ರಗಾಮಿ ಸಂಘಟನೆಯು ಇರಾನ್‌ನ ಪರಮಾಣು ಅಸ್ತ್ರಗಳನ್ನು ಕೈವಶ ಮಾಡಿಕೊಳ್ಳುವ ಯೋಜನೆ ಹೊಂದಿದೆ ಎಂಬ ಆಘಾತಕಾರಿ ಅಂಶ ಬೆಳಕಿಗೆ ಬಂದಿದೆ. ದಾಳಿಯೊಂದರ ಸಂದರ್ಭದಲ್ಲಿ ದೊರೆತ ಉಗ್ರಗಾಮಿ ಸಂಘಟನೆಯ ದಾಖಲೆಯಿಂದ ಈ ಸಂಗತಿ ಬಹಿರಂಗವಾಗಿದೆ.

**3. ವಲಸಿಗರ ಗಡಿಪಾರಿನಿಂದ ರಕ್ಷಣೆ :**

ಅಮೆರಿಕದಲ್ಲಿ ಅಕ್ರಮವಾಗಿ ವಾಸಿಸುತ್ತಿರುವ ಸುಮಾರು 50 ಲಕ್ಷ ವಲಸಿಗರು ಗಡಿಪಾರಾಗುವುದನ್ನು ತಪ್ಪಿಸಲು ಅಧ್ಯಕ್ಷ ಬರಾಕ್ ಒಬಾಮ ಅವರು ಸರ್ಕಾರಿ ಆದೇಶ ಹೊರಡಿಸಲಿದ್ದಾರೆ ಎಂದು ಶ್ವೇತಭವನದ ಮೂಲಗಳು ತಿಳಿಸಿವೆ. ಆದರೆ ಇದು ರಿಪಬ್ಲಿಕ್ ಪಕ್ಷದ ಜೊತೆ ಸಂಘರ್ಷಕ್ಕೆ ಕಾರಣವಾಗಬಹುದು ಎನ್ನಲಾಗಿದೆ.

**4. ದಬ್ಬಾಳಿಕೆ ಬೇಡ : ಪುಟಿನ್‌ಗೆ ಎಚ್ಚರಿಕೆ :**

ಸಣ್ಣ ದೇಶಗಳ ಮೇಲೆ ದಬ್ಬಾಳಿಕೆ ನಡೆಸುವುದನ್ನು ನಿಲ್ಲಿಸುವಂತೆ ಬ್ರಿಟನ್ ಪ್ರಧಾನಿ ಡೇವಿಡ್ ಕ್ಯಾಮರೂನ್ ಅವರು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರಿಗೆ ಎಚ್ಚರಿಕೆ ನೀಡಿದ್ದಾರೆ. 'ಕಳೆದು ಹೋದ ತ್ಸಾರ್‌ಗಿರಿ'ಯನ್ನು ಮರಳಿ ಪ್ರದರ್ಶಿಸಲು ರಾಜ್ಯ ಮುಖಂಡ ಯತ್ನಿಸುತ್ತಿದ್ದಾರೆ ಎಂದು ಆಸ್ಟ್ರೇಲಿಯಾ ಪ್ರಧಾನಿ ಟೋನಿ ಅಬಾಟ್ ಆರೋಪಿಸಿದ್ದಾರೆ.

**5. ಸೂಪರ್‌ನೋವಾದ ಒಡಲು ವಿಶ್ಲೇಷಣೆ :**

ರೇಡಿಯೋ ದೂರದರ್ಶಕಗಳನ್ನು ಬಳಸಿ ದೀರ್ಘಕಾಲ ಸೂಪರ್‌ನೋವಾದ ಒಡಲನ್ನು ವೀಕ್ಷಿಸಿದ್ದ ಆಸ್ಟ್ರೇಲಿಯ ಮತ್ತು ಚಿಲಿ ದೇಶದ ಖಗೋಳ ವಿಜ್ಞಾನಿಗಳು, ಸೂಪರ್ ನೋವಾದಲ್ಲಿ ಉಂಟಾಗುತ್ತಿರುವ ಹೊಸ ವಿದ್ಯಮಾನದ ವಿಶ್ಲೇಷಣೆಗೆ ಪ್ರಯತ್ನಿಸಿದ್ದಾರೆ.

ಜನವರಿ 1

## ನೂತನ ಪ್ರಾರಂಭ!

ಬೆಳಿಗ್ಗೆ : ಆದಿಕಾಂಡ 1,2,3
ಸಂಜೆ : ಮತ್ತಾಯ 1

"ಆ ಕಾಲದಲ್ಲಿ ಯೆಹೋವ ಎಂಬ ಹೆಸರನ್ನು ಹೇಳಿಕೊಂಡು ಆರಾಧಿಸುವದಕ್ಕೆ ಪ್ರಾರಂಭವಾಯಿತು" (ಆದಿ. 4:26).

'ಅನುದಿನದ ಆಹಾರ' ಓದುಗರ ಬಳಗಕ್ಕೆ ನೂತನ ವರ್ಷದ ಶುಭಾಷಯಗಳು. ಈ ವರ್ಷವು ಕರ್ತನನ್ನು ನೀವು ಇನ್ನೂ ಹೆಚ್ಚಾಗಿ ಸಮೀಪಿಸುವ ವರ್ಷವಾಗಿಯೂ ಮತ್ತು ಕರ್ತನು ನಿಮ್ಮನ್ನು ಅಪರಿಮಿತವಾಗಿ ಆಶೀರ್ವದಿಸುವ ವರ್ಷವಾಗಿಯೂ ಇರಲೆಂದು ಹಾರೈಸುತ್ತೇವೆ. "ದೇವರ ಸಮೀಪಕ್ಕೆ ಬನ್ನಿರಿ, ಆಗ ಆತನು ನಿಮ್ಮ ಸಮೀಪಕ್ಕೆ ಬರುವನು" (ಯಾಕೋಬ. 4:8).

ಆದಾಮನ ಕುಮಾರನಾದ ಸೇತನಿಗೆ ಎನೋಷ ಎಂಬ ಮಗನು ಹುಟ್ಟಿದನು. ಆಗ ಒಂದು ನೂತನ ಪ್ರಾರಂಭ ಹುಟ್ಟಿತು. ಜನರು ದೇವರನ್ನು ಹುಡುಕಲು ಆರಾಧಿಸಲು ಪ್ರಾರಂಭಿಸಿದರು. ಅದು ಮೂರನೇ ತಲಾಂತರದ ಪ್ರಾರಂಭಕಾಲ. ಆರಾಧನೆಯ ಅರ್ಥ ಏನಾಗಿದೆ? "ದೇವರೇ, ನೀನು ನಮಗಿಂತಲೂ ಶಕ್ತಿಶಾಲಿ. ನನಗಿಂತಲೂ ದೊಡ್ಡವನು. ಸ್ತುತಿ, ಘನ, ಮಾನ, ಮಹಿಮೆಗೆ ಯೋಗ್ಯನು. ಆದ್ದರಿಂದ ನಿನ್ನನ್ನು ಆರಾಧಿಸುತ್ತೇವೆ" ಎಂದು ಹೇಳಿ ದೇವರ ಮುಂದೆ ಅಡ್ಡಬಿದ್ದರು. ಅನಂತರ ಅಬ್ರಹಾಮನು ದೇವರಿಗೆ ಒಂದು ಯಜ್ಞವೇದಿಯನ್ನು ಕಟ್ಟಿ, ದೇವರನ್ನು ಆರಾಧಿಸಿದನು. ಆ ಯಜ್ಞವೇದಿ ಕಲ್ವಾರಿ ಯಜ್ಞವೇದಿಗೆ ಗುರುತಾಗಿರುವದು (ಆದಿ. 12:8, 13:4). ಆನಂತರ ಅಬ್ರಹಾಮ ಬೇರ್ಷೆಬದಲ್ಲಿ ಪಿಚುಲ ವೃಕ್ಷವನ್ನು ನೆಟ್ಟು ನಿತ್ಯದೇವರಾದ ಯೆಹೋವನ ಹೆಸರನ್ನು ಹೇಳಿಕೊಂಡು ಆರಾಧಿಸಿದನು (ಆದಿ. 21:33). ಪ್ರಿಯರೇ, ಈ ಹೊಸ ವರ್ಷದಲ್ಲಿ ಕರ್ತನಿಗೆ ಅಧಿಕವಾದ ಸಮಯವನ್ನು ಕೊಟ್ಟು ಆತನನ್ನು ಆರಾಧಿಸಿರಿ. ಆರಾಧನೆ ನಿಮ್ಮ ಜೀವಿತದಲ್ಲಿ ಒಂದು ಭಾಗವಾಗಿರಲಿ. ಕರ್ತನನ್ನು ಸ್ತುತಿಸುವ ಸ್ತುತಿ, ಯಾವಾಗಲೂ ನಿಮ್ಮ ಬಾಯಲ್ಲಿರಲಿ. ಆತನನ್ನು ಪೂರ್ಣಹೃದಯದಿಂದ ಪ್ರೀತಿಸಲು ತೀರ್ಮಾನಿಸಿರಿ. ಆತನೇ ಸ್ತುತಿಸ್ತೋತ್ರಗಳಿಗೆ ಪಾತ್ರನಾದಾತನು. ಹಾಗೆ ನೀವು ಕರ್ತನನ್ನು ಆರಾಧಿಸುವಾಗ, ವರುಷ ಪೂರ್ತಿ ಕರ್ತನ ಪ್ರಸನ್ನತೆ ನಿಮ್ಮೊಂದಿಗಿರುವದು.

ದೇವಜನರೇ, ಕರ್ತನಿಗೆ ಅಡ್ಡಬಿದ್ದು ಆರಾಧಿಸಿರಿ. ಆಗ ಸ್ತುತಿಗಳ ಮಧ್ಯದಲ್ಲಿ ವಾಸವಾಗಿರುವಾತನು, ನಿಮ್ಮ ಮಧ್ಯೆ ಇಳಿದುಬರುವನು. ಯಾಕೆಂದರೆ ಇಬ್ಬರು ಮೂವರು ನನ್ನ ಹೆಸರಿನಲ್ಲಿ ಎಲ್ಲಿ ಕೂಡಿ ಬಂದಿರುತ್ತಾರೋ, ಅಲ್ಲಿ ಅವರ ನಡುವೆ ನಾನು ಇದ್ದೇನೆ ಎಂದು ಆತನು ವಾಗ್ದಾನ ಮಾಡಿರುವನಲ್ಲವೇ? (ಮತ್ತಾ. 18:20). ಆರಾಧನೆಯ ಸಮಯದಲ್ಲೆಲ್ಲಾ ಆತನ ಪ್ರಸನ್ನತೆಯನ್ನು ಬಹು ಸಮೀಪವಾಗಿ ಅನುಭವಿಸಲು ಸಾಧ್ಯ.

*ನೆನಪಿಗೆ : ಹಾಗಾದರೆ ಈ ವಿಷಯದಲ್ಲಿ ನಾವು ಏನು ಹೇಳೋಣ? ದೇವರು ನಮ್ಮ ಕಡೆ ಇದ್ದರೆ ನಮ್ಮನ್ನು ಎದುರಿಸುವವರು ಯಾರು? (ರೋಮಾ. 8:31).*



ಜನವರಿ 2

## ದೇವರೊಂದಿಗೆ ನಡೆದವನು!

ಬೆಳಿಗ್ಗೆ : ಆದಿ. 4, 5, 6
ಸಂಜೆ : ಮತ್ತಾಯ 2

"ಮೆತೂಷೆಲಹನು ಹುಟ್ಟಿದ ಮೇಲೆ ಹನೋಕನು ಗಂಡು ಹೆಣ್ಣು ಮಕ್ಕಳನ್ನು ಪಡೆದು ದೇವರ ಅನ್ಯೋನ್ಯತೆಯಲ್ಲಿ ಮುನ್ನೂರು ವರುಷ ಬದುಕಿದನು" (ಆದಿ. 5:22).

ಒಬ್ಬ ಮನುಷ್ಯನು ಸಂಸಾರಸ್ಥನಾದಾಗ್ಯೂ ಸಹಾ, ದೇವರೊಂದಿಗೆ ನಡೆದನು ಎಂಬ ಸಂಗತಿ ನಮ್ಮೊಬ್ಬೊಬ್ಬರನ್ನೂ ಪ್ರೋತ್ಸಾಹ ಪಡಿಸುವದು. ಹನೋಕನು ಹಾಗೆ ಕರ್ತನೊಂದಿಗೆ ಸಂಚರಿಸಿರುವದಾದರೆ ನಾವೂ ಸಹಾ ಕರ್ತನೊಂದಿಗೆ ಸಂಚರಿಸಲು ಸಾಧ್ಯ. ಯಾಕೆಂದರೆ, ನಮ್ಮ ದೇವರು ಪಕ್ಷಪಾತಿಯಲ್ಲ (ಅ.ಕೃ. 10:34).

ಇಂದು ಹಿಂದು ಭಕ್ತರ ಸಿದ್ಧಾಂತ ಏನು? ಪ್ರಪಂಚವನ್ನು ತ್ಯಜಿಸಿ, ಕಾವಿತೊಟ್ಟು, ಸನ್ಯಾಸತ್ವ ತೆಗೆದುಕೊಂಡರೆ ಮಾತ್ರ ದೇವರನ್ನು ಕಾಣಲು ಸಾಧ್ಯ. ಆತನೊಂದಿಗೆ ಇರಲು ಸಾಧ್ಯ ಎಂದು ಭಾವಿಸುವರು. ಕೆಲವು ಕ್ರೈಸ್ತ ಸಭೆಗಳೂ ಕೂಡ ಹೆಂಡತಿಯನ್ನು, ಕುಟುಂಬವನ್ನು "ತ್ಯಜಿಸಿಬಿಡು" ಎಂದು ಸನ್ಯಾಸತ್ವವನ್ನು ಬೋಧಿಸುವದು. ಒಂದು ವೇಳೆ ಕೆಲವರು ದೇವಕೃಪೆಯಿಂದ ಅಂತಹ ಜೀವಿತ ಜೀವಿಸಬಹುದು. ಆದರೆ ದೇವರು ಸೇರಿಸಿದ ಕುಟುಂಬ ದೇವರೊಂದಿಗೆ ನಡೆಯಲು ಒಂದು ತಡೆ ಅಲ್ಲ ಎಂದು ಹನೋಕನು ನಿರೂಪಿಸಿದನು. ಕುಟುಂಬದೊಂದಿಗೆ ಬಾಳಿದ ಹನೋಕನನ್ನು ಕುಟುಂಬವಿಲ್ಲದೆ ಬಾಳಿದ ಎಲೀಯನನ್ನೂ ಕರ್ತನು ಮೇಲಕ್ಕೆ ಒಯ್ಯಲ್ಪಟ್ಟಾಗ ಅವರು ಕಾಣದೆ ಹೋದರು. ಕರ್ತನ ಎರಡನೇ ಬರುವಿಕೆಯಲ್ಲಿ ಎತ್ತಲ್ಪಡುವ ಭಕ್ತರಿಗೆ ಅವರು ಮುಂಗುರುತಾಗಿರುವರು. ನಿಮ್ಮ ಪ್ರಾರ್ಥನೆಯ ವೇಳೆಯನ್ನು ಅಧಿಕಗೊಳಿಸಿ, ಎಡಬಿಡದೆ ದೇವ ಪ್ರಸನ್ನತೆಯಲ್ಲಿ ಕರ್ತನು ಜೊತೆಯಲ್ಲಿರುವನು ಎಂಬ ಭಾವನೆಯನ್ನು ಹೊಂದುವಾಗ, ನೀವು ನಿಶ್ಚಯವಾಗಿಯೇ ಕರ್ತನೊಂದಿಗೆ ಸಂಚರಿಸಲು ಸಾಧ್ಯ, ನಡೆಯಲು ಸಾಧ್ಯ. ನೀವು ಮಲಗಿದರೂ ನಿಮ್ಮ ಶ್ವಾಸ ಹೊರಗೆ ಬರುತ್ತಲೇ ಇರುತ್ತದೆ. ಅದರಂತೆಯೇ ಕರ್ತನೊಂದಿಗೆ ನಡೆಯುವ ಜೀವಿತವನ್ನು ಅಭ್ಯಾಸ ಮಾಡಿಕೊಳ್ಳಿರಿ. ದಾನಿಯೇಲನು ಒಬ್ಬ ಪ್ರಧಾನ ಮಂತ್ರಿಯಾಗಿದ್ದರೂ ಆತನು ಎಡಬಿಡದೆ ಕರ್ತನನ್ನು ಆರಾಧಿಸುತ್ತಲೇ ಇದ್ದನು (ದಾನಿ. 6:20).

ದೇವಜನರೇ, ಈ ನೂತನ ವರ್ಷದಲ್ಲಿ ಹನೋಕನಂತೆ, ಕರ್ತನೊಂದಿಗೆ ನಡೆಯಲು ತೀರ್ಮಾನಿಸಿರಿ. ಕರ್ತನ ಆಶೀರ್ವಾದಕ್ಕೆ ಪಾತ್ರರಾಗಿರಿ.

*ನೆನಪಿಗೆ : ಹನೋಕನು ಮರಣವನ್ನು ಅನುಭವಿಸದೆ ಒಯ್ಯಲ್ಪಟ್ಟದ್ದು ನಂಬಿಕೆಯಿಂದಲೇ (ಇಬ್ರಿ.11:5)*

ಜನವರಿ 3

## ಅಬ್ರಹಾಮನ ಪ್ರಾರ್ಥನೆ!

ಬೆಳಿಗ್ಗೆ : ಆದಿ. 7,8,9
ಸಂಜೆ : ಮತ್ತಾಯ 3

"ನೀನು ನನಗೆ ಸಂತಾನ ಕೊಡಲಿಲ್ಲವಾದ್ದರಿಂದ ನನ್ನ ಮನೆಯಲ್ಲಿ ಹುಟ್ಟಿದವನೇ ನನಗೆ ಬಾಧ್ಯಸ್ಥನಾಗಬೇಕಾಯಿತು" ಅಂದನು (ಆದಿ. 15:3).

ತನ್ನ 75ನೇ ವಯಸ್ಸಿನಲ್ಲಿ ಅಬ್ರಹಾಮನು ಮಾಡಿದ ಈ ಪ್ರಾರ್ಥನೆ ನಮ್ಮ ಆಂತರ್ಯವನ್ನು ಕರಗಿಸುವಂಥದ್ದಾಗಿದೆ. ಆ ಕಾಲದಲ್ಲಿ ಮಕ್ಕಳ ಭಾಗ್ಯ ಒಂದು ದೊಡ್ಡ ಆಶೀರ್ವಾದವಾಗಿ ಎಣಿಸಲ್ಪಟ್ಟಿತ್ತು. ಕರ್ತನನ್ನು ತಿಳಿಯದ ಜನರಿಗೂ ಮಕ್ಕಳ ಭಾಗ್ಯವಿರುವಾಗ, ಕರ್ತನನ್ನು ಪ್ರೀತಿಸಿ ಆತನನ್ನು ಹಿಂಬಾಲಿಸಿ ಬಂದ ತನಗೆ ಒಂದು ಮಗು ಇಲ್ಲವೇ ಎಂಬ ವೇದನೆ ಅಬ್ರಹಾಮನ ಹೃದಯದಲ್ಲಿತ್ತು. ಆ ಯೋಚನೆ ಕುಟುಂಬವನ್ನು ಅಂಧಕಾರದಲ್ಲಿ ಮುಳುಗಿಸಿತ್ತು.

ಒಂದು ರಾತ್ರಿ ದೇವರು ದರ್ಶನದಲ್ಲಿ "ಅಬ್ರಹಾಮನೇ, ಭಯಪಡಬೇಡ; ನಾನು ನಿನಗೆ ಗುರಾಣಿಯಾಗಿದ್ದೇನೆ; ನಿನಗೋಸ್ಕರ ಅತ್ಯಧಿಕ ಬಹುಮಾನವು ಇಡಲ್ಪಟ್ಟಿದೆ" ಎಂದು ಹೇಳಿದನು (ಆದಿ. 15:1). ಇದು ಒಂದು ಒಳ್ಳೆಯ ವಾಗ್ದಾನವಾಗಿದ್ದರೂ ಸಹಾ, ಅಬ್ರಹಾಮನು ಅದರಲ್ಲಿ ತೃಪ್ತಿಪಡಲಿಲ್ಲ. ಕರ್ತನ ಬಳಿ ಬಾಯಿತೆರೆದು ಕರ್ತನಾದ ಯೆಹೋವನೇ ನೀನು ನನಗೆ ಏನು ಕೊಟ್ಟರೇನು? ನಾನು ಸಂತಾನವಿಲ್ಲದವನಾಗಿ ಹೋಗುವೆನಾದರಿಂದ ನನ್ನ ಆಸ್ತಿಯೆಲ್ಲಾ ದಮಸ್ಕದವನಾದ ಎಲೀಯೆಜರನ ಪಾಲಾಗುವದಲ್ಲಾ ಅಂದನು (ಆದಿ. 15:2). ಇಂದಿಗೂ ಸಹ, ನಿಮ್ಮ ಜೀವಿತದಲ್ಲಿ ಯಾವದೋ ಒಂದು ಅಗತ್ಯತೆ ಇರಬಹುದು. ಯಾವದೋ ಒಂದು ಸಮಸ್ಯೆ ಇರಬಹುದು. ಯಾವದೇ ಸಮಸ್ಯೆ ನಿಮ್ಮನ್ನು ಮುಳ್ಳಿನಂತೆ ಚುಚ್ಚುತ್ತಿದ್ದರೂ, ಇಂದು ಕರ್ತನ ಬಳಿ ಮನಸ್ಸುಬಿಚ್ಚಿ ಹೇಳಿರಿ. ಕರ್ತನು ನಿಮ್ಮ ಪ್ರಾರ್ಥನೆಯನ್ನು ಕೇಳುವವನು ಮಾತ್ರವಲ್ಲ, ಪ್ರಾರ್ಥನೆಗೆ ಉತ್ತರ ಕೊಡುವಾತನಾಗಿರುವನು. ಅಬ್ರಹಾಮನು ತನಗೆ ಸಂತಾನ ಬೇಕೆಂದು ಕೇಳಿದಾಗ, ಕರ್ತನು ಮೂರು ವಿಧವಾದ ಸಂತತಿಯನ್ನು ಅಬ್ರಹಾಮನಿಗೆ ವಾಗ್ದಾನ ಮಾಡಿದನು 1. ಭೂಮಿಯ ಧೂಳಿನಂತಹ ಸಂತತಿ, ಅದು ಅಬ್ರಹಾಮನಿಗೆ ಹಾಗರಳಲ್ಲಿ ಹುಟ್ಟಿದ ಇಷ್ಮಾಯೇಲನ ಸಂತತಿ, 2. ಸಮುದ್ರದಂಡೆಯ ಮರಳಿನಂತಹ ಸಂತತಿ, ಅದು ಅಬ್ರಹಾಮನಿಗೆ ಸಾರಳಲ್ಲಿ ಹುಟ್ಟಿದ ಇಸಾಕನ ಸಂತತಿ, 3. ಆಕಾಶ ನಕ್ಷತ್ರದಂಥ ಸಂತತಿ, ಅದು ಅಬ್ರಹಾಮನ ಕುಮಾರನಾದ ದಾವೀದನ ಮಗನಾದ ಯೇಸುಕ್ರಿಸ್ತನ ಸಂತತಿ (ಮತ್ತಾ. 1:1). ನಾವು ಅನ್ಯಜನರಾದಾಗ್ಯೂ, ರಕ್ಷಣೆ ಹೊಂದಿದಾಗ ಕ್ರಿಸ್ತನ ಸಂತತಿಯಾಗಿರುವೆವು.

ದೇವಜನರೇ, ಒಂದು ಮಗುವಿಗಾಗಿ ಪ್ರಾರ್ಥಿಸಿದ ಅಬ್ರಹಾಮನನ್ನು ಕರ್ತನು ಎಷ್ಟಾಗಿ ಆಶೀರ್ವದಿಸಿದನು ನೋಡಿ. ಅದರಂತೆಯೇ ನಿಮ್ಮ ಪ್ರಾರ್ಥನೆಯನ್ನೂ ಕೇಳಿ ನಿಮ್ಮನ್ನು ಆಶೀರ್ವದಿಸೇ ಆಶೀರ್ವದಿಸುವನು.

*ನೆನಪಿಗೆ : ನಾನು ದಾವೀದವಂಶವೆಂಬ ಬುಡದಿಂದ ಹುಟ್ಟಿದ ಚಿಗುರೂ, ಅವನ ಸಂತತಿಯೂ, ಉದಯ ಸೂಚಕವಾದ ಪ್ರಕಾಶವುಳ್ಳ ನಕ್ಷತ್ರವೂ ಆಗಿದ್ದೇನೆ (ಪ್ರಕ. 22:16).*



ಜನವರಿ 4

## ಪ್ರಲಾಪದ ಪ್ರಾರ್ಥನೆ!

ಬೆಳಿಗ್ಗೆ : ಆದಿ. 10,11,12
ಸಂಜೆ : ಮತ್ತಾಯ 4

"ನೀನು ಗರ್ಭಿಣಿಯಾಗಿದ್ದೀಯಷ್ಟೆ; ನಿನಗೆ ಮಗನು ಹುಟ್ಟುವನು, ಯೆಹೋವನು ನಿನ್ನ ಕಷ್ಟದ ಕೂಗಿಗೆ ಕಿವಿಗೊಟ್ಟದ್ದರಿಂದ ಆ ಮಗನಿಗೆ ಇಷ್ಮಾಯೇಲ್ ಎಂದು ಹೆಸರಿಡಬೇಕು" (ಆದಿ.16:11).

ಕರ್ತನು ಪ್ರಾರ್ಥನೆಯನ್ನು ಕೇಳುವಾತನು ಮಾತ್ರವಲ್ಲ, ನಿಟ್ಟುಸಿರನ್ನು ನೋಡುವಾತನು. ಕಷ್ಟದ ಕೂಗಿಗೆ ಉತ್ತರ ನೀಡುವಾತನಾಗಿರುವನು. ಹಾಗರಳೆಂಬ ತನ್ನ ದಾಸಿಯನ್ನು ತನ್ನ ಗಂಡನಾದ ಅಬ್ರಹಾಮನಿಗೆ ಹೆಂಡತಿಯಾಗಿ ಕೊಟ್ಟ ಸಾರಳು, ಹಾಗರಳು ಗರ್ಭಿಣಿಯಾಗಿ ಅವಳನ್ನು ತಾತ್ಸಾರ ಮಾಡಿದಾಗ ಸಾರಳು ಅವಳನ್ನು ಕಠಿಣವಾಗಿ ನಡೆಸಿಕೊಂಡಳು. ಆಗ ಹಾಗರಳು ಮನೆಯನ್ನು ಬಿಟ್ಟು ಓಡಿಹೋದಳು (ಆದಿ. 16:4–6).

ಕೆಲವು ಮನೆಗಳಲ್ಲಿ ಕೆಲಸದವರನ್ನು ಯಜಮಾನರು ಕಠಿಣವಾಗಿ ನಡೆಸಿಕೊಳ್ಳುವಾಗ ಅವರು ಆಂತರ್ಯದಲ್ಲಿ ನೊಂದುಕೊಳ್ಳುತ್ತಾರೆ. ನಿಟ್ಟುಸಿರುಬಿಡುವರು. ದೇವರೇ, ದಾಸನಾದ ನನಗೆ ನೀನಲ್ಲದೆ ಬೇರೆ ದಿಕ್ಕು ಯಾರಿದ್ದಾರೆ! ನೀನೇ ನನಗೆ ನ್ಯಾಯತೀರಿಸಬೇಕು ಎಂದು ಹಲುಬುತ್ತಾರೆ. ಹಾಗರಳು ದಾಸಿಯಾಗಿದ್ದರೂ ಅಬ್ರಹಾಮನ ಸಂತಾನ ಅವಳಲ್ಲಿ ಬೆಳೆಯುತ್ತಿತ್ತು. ಅವಳ ನಿಟ್ಟುಸಿರನ್ನು ಕರ್ತನು ಕಂಡನು, ಕೇಳಿದನು. ಅವಳಿಗೆ ಒಂದು ಗಂಡುಮಗುವನ್ನು ದಯಪಾಲಿಸಿದನು. ಮತ್ತೊಂದೆಡೆ ಶಾಪವಾಗಿ ಅಬ್ರಹಾಮನ ಸಂತತಿಯಾದ ಇಸ್ರಾಯೇಲ್ಯರು 430 ವರುಷಗಳು ಹಾಗರಳ ದೇಶವಾದ ಐಗುಪ್ತ್ಯದಲ್ಲಿ ದಾಸರಾಗಿರಬೇಕಾಯಿತು. ಆ ಶಾಪ ಯೇಸುಕ್ರಿಸ್ತನ ಕಾಲದವರೆಗೆ ಮುಂದುವರೆಯಿತು (ಮತ್ತಾ. 2:13–15). ಆಂತರ್ಯದಲ್ಲಿ ಸಹಿಸಲಾಗದ ಕಹಿ ಉಂಟಾಗುವಾಗ, ಅಡಗಿಸಲಾಗದ ಪ್ರಲಾಪವಾಗಿ ಮಾರ್ಪಡುವದು. ಅಧಿಕವಾಗಿ ಪ್ರಲಾಪಿಸಿದ ಭಕ್ತನಾದ ಯೋಬನು "ಆತ್ಮವೇದನೆಯಿಂದ ಮಾತಾಡುವೆನು. ಮನೋವ್ಯಥೆಯಿಂದ ಪ್ರಲಾಪಿಸುವೆನು" (ಯೋಬ. 7:11) ಎಂದು ಹೇಳುತ್ತಾನೆ.

ದೇವಜನರೇ, ನಿಮ್ಮ ನಡವಳಿಕೆ, ನಿಮ್ಮ ಕೆಲಸಗಾರರೊಂದಿಗೆ ಹೇಗಿರುವದು? ಮಾತ್ರವಲ್ಲ, ನಿಮ್ಮ ಮನೆಗೆ ಬಂದ ಸೊಸೆಯೊಂದಿಗಿನ ನಡಾವಳಿ ಯಾವ ರೀತಿಯದು? ಇಂದು ನಮ್ಮನ್ನು ನಾವು ಸ್ವಲ್ಪ ಪರಿಶೀಲಿಸಿಕೊಳ್ಳೋಣ. ಪ್ರಿಯರೇ, ಯಾರನ್ನೂ ಮನೋವ್ಯಥೆಗೆ ಈಡುಮಾಡದಿರಿ. ಅವರಿಗೆ ಸಮಾಧಾನ ಹೇಳಿ. ಆದರಣೆ ನೀಡಿರಿ. ಕರ್ತನು ಮನನೊಂದವರ ಕೂಗನ್ನು ಕೇಳುವಾತನು. ಉತ್ತರಿಸುವಾತನು ಎಂಬುದನ್ನು ಮರೆಯದಿರಿ.

*ನೆನಪಿಗೆ : "ಇಷ್ಮಾಯೇಲನಿದ್ದಾನಲ್ಲಾ ಅವನೇ ನಿನ್ನ ದಯೆ ಹೊಂದಿ ಬಾಳಲಿ" ಎಂದು ಅಬ್ರಹಾಮನು ಹೇಳಿದನು (ಆದಿ. 17:18).*

## ಜನವರಿ 5 ಪೌಳಿಯಲ್ಲಿ ನಿಂತ ಅಬ್ರಹಾಮನು!

ಬೆಳಿಗ್ಗೆ : ಆದಿ. 13,14,15
ಸಂಜೆ : ಮತ್ತಾಯ 5:1–26

"ಆಗ ಅಬ್ರಹಾಮನು ಹತ್ತಿರ ಬಂದು ನೀನು ದುಷ್ಟರ ಸಂಗಡ ನೀತಿವಂತರನ್ನೂ ನಾಶಮಾಡುವಿಯಾ? ಒಂದು ವೇಳೆ ಪಟ್ಟಣದೊಳಗೆ ಐವತ್ತು ಮಂದಿ ನೀತಿವಂತರಿದ್ದರೂ ಆ ಸ್ಥಳವನ್ನು ಉಳಿಸದೆ ನಾಶಮಾಡುವಿಯಾ?" (ಆದಿ. 18:23,24).

ಸತ್ಯವೇದದಲ್ಲಿ ಕಂಡುಬರುವ ಪ್ರಾರ್ಥನೆಗಳಲ್ಲಿ ಅಬ್ರಹಾಮನ ಗೋಳಾಟದ ಪ್ರಾರ್ಥನೆ ಬಹುಮುಖ್ಯವಾದದು. ಅಬ್ರಹಾಮನು ತನ್ನ ತಮ್ಮನ ಮಗನಾದ ಲೋಟನಿಗಾಗಿ ಪ್ರಾರ್ಥಿಸಿದನೆಂದೂ, ಬೇರೆ ಕೆಲವರು, ಸೊದೋಮ ಗೊಮೋರ ಪಟ್ಟಣವು ರಕ್ಷಿಸಲ್ಪಡುವಂತೆ ಪ್ರಾರ್ಥಿಸಿದನೆಂದು ಭಾವಿಸಬಹುದು. ಆದರೆ ನಿಜವಾಗಿ ಅಬ್ರಹಾಮನು ನೀತಿವಂತರಿಗಾಗಿಯೇ ಗೋಳಾಡಿದನು.

"ದುಷ್ಟರೊಂದಿಗೆ ನೀತಿವಂತರನ್ನೂ ಸಂಹರಿಸುವದು ನಿನಗೆ ದೂರವಾಗಿರಲಿ. ನೀತಿವಂತರನ್ನೂ, ದುಷ್ಟರನ್ನೂ ಬೇಧ ಮಾಡದೆ ದುಷ್ಟರ ಸಂಗಡ ನೀತಿವಂತರನ್ನು ಸಂಹರಿಸುವದು ನಿನ್ನಿಂದ ಎಂದಿಗೂ ಆಗಬಾರದು" ಎಂಬುದೇ ಅಬ್ರಹಾಮನ ಇಷ್ಟವಾಗಿತ್ತು. ನ್ಯಾಯತೀರ್ಪನ್ನು ನೀಡುವದರಲ್ಲಿ ಕರ್ತನ ಆಂತರ್ಯದಲ್ಲಿ ಒಂದು ಸ್ಥಿರವಾದ ಸ್ಪಷ್ಟವಾದ ರೀತಿ ನೀತಿ ಇದ್ದಿತು. ಒಂದು ಪಟ್ಟಣದಲ್ಲಿ ಐವತ್ತು ಮಂದಿ ನೀತಿವಂತರಿದ್ದರೆ ಅದರ ನಿಮಿತ್ತ ಆ ಸ್ಥಳದಲ್ಲಿ ರಕ್ಷಣೆಯ ಉಜ್ಜೀವನ ಉಂಟಾಗುವದು. ಹತ್ತು ಮಂದಿ ನೀತಿವಂತರಿದ್ದರೆ ಅದನ್ನು ಅಳಿಸುವದಿಲ್ಲ. ದೇವರ ನ್ಯಾಯತೀರ್ಪಿಗೆ ತಪ್ಪಿಸುವದು ಒಬ್ಬನೇ ಒಬ್ಬ ನೀತಿವಂತನಿದ್ದರೆ, ಲೋಟನ ಕುಟುಂಬದಂತೆ ಅವರು ಹೊರಕ್ಕೆ ತರಲ್ಪಟ್ಟು, ಪಟ್ಟಣವು ನಾಶವಾಗಿ ಹೋಗುವದು. ಆತನು ಎಂದಿಗೂ ನೀತಿವಂತರನ್ನು ದುಷ್ಟರೊಂದಿಗೆ ಸಂಹರಿಸುವದಿಲ್ಲ. ಪರಿಶುದ್ಧ ಜನರನ್ನು ಪಾಪಿಗಳೊಂದಿಗೆ ನಾಶಪಡಿಸುವಾತನಲ್ಲ. ಸೊದೋಮಿನಲ್ಲಿ ವಾಸವಾಗಿದ್ದ ಒಬ್ಬನೇ ಒಬ್ಬ ನೀತಿವಂತನು ಲೋಟನು. ಆದರೆ ಅವನು ಕರ್ತನಿಗಾಗಿ ನೀತಿವಂತರನ್ನು ಎಬ್ಬಿಸಲಿಲ್ಲ. ದೇವಭಯದ ಕುರಿತು ಪ್ರಸಂಗಿಸಲಿಲ್ಲ. "ಆ ನೀತಿವಂತನು ಅವರ ನಡುವೆ ಇದ್ದುಕೊಂಡು ಅವರ ಅನ್ಯಾಯಕೃತ್ಯಗಳನ್ನು ನೋಡುತ್ತಾ ಕೇಳುತ್ತಾ ಅವುಗಳ ನಿಮಿತ್ತ ದಿನೇ ದಿನೇ ತನ್ನ ನೀತಿಯುಳ್ಳ ಆತ್ಮದಲ್ಲಿ ಬಹಳವಾಗಿ ವ್ಯಥೆಗೊಂಡನು" ಎಂದು ಅಪೊ. ಪೇತ್ರನು ಬರೆಯುತ್ತಾನೆ (2 ಪೇತ್ರ 2:8).

ದೇವಜನರೇ, ಇಂದು ಎಲ್ಲೆಲ್ಲೂ ದುಷ್ಕೃತ್ಯಗಳು ತಲೆ ಎತ್ತಿ ನಿಂತಿರುವವು. ಹೊಸ ಒಡಂಬಡಿಕೆಯ ಕಾಲದಲ್ಲಿರುವ ನಾವು ದುಷ್ಟರನ್ನು ಸಂಹರಿಸೆಂದು ಪ್ರಾರ್ಥಿಸಲಾಗದು. ಕಾರಣ, ಕರ್ತನ ಸುವಾರ್ತೆ, ಆತನ ರಕ್ತ ಪಾಪಿಗಳನ್ನು ರಕ್ಷಿಸುವದು. ದುಷ್ಟರನ್ನು ನೀತಿವಂತರನ್ನಾಗಿಸುವದು. ಆದ್ದರಿಂದ ಸುವಾರ್ತೆ ಸಾರಿ. ಅವರಿಗಾಗಿ ಪ್ರಾರ್ಥಿಸುವದು ನಮ್ಮ ಕರ್ತವ್ಯವಾಗಿದೆ.

*ನೆನಪಿಗೆ:ಧರ್ಮಾತ್ಮನಾದ ನನ್ನ ಸೇವಕನು ತನ್ನ ಜ್ಞಾನದ ಮೂಲಕ ಬಹುಜನರನ್ನು ಧರ್ಮಮಾರ್ಗಕ್ಕೆ ತರುವನು; ಅವರ ಅಪರಾಧಗಳನ್ನು ಹೊತ್ತುಕೊಂಡು ಹೋಗುವನು (ಯೆಶಾಯ.53:11).*



## ಜನವರಿ 6 ಪ್ರಾರ್ಥಿಸಲು ತಕ್ಕ ಸಮಯ!

ಬೆಳಿಗ್ಗೆ : ಆದಿ. 16,17
ಸಂಜೆ : ಮತ್ತಾ. 5:27–48

"ಅರುಣೋದಯದಲ್ಲಿ ಎದ್ದು ಮೊರೆಯಿಟ್ಟೆನು; ನಿನ್ನ ವಾಕ್ಯವನ್ನು ನಿರೀಕ್ಷಿಸಿಕೊಂಡಿದ್ದೇನೆ" (ಕೀರ್ತ. 119:147).

ಈ ಭೂಮಿಯಲ್ಲಿ ಬಾಳುವ ನಮಗೆ ಸಿಕ್ಕಿರುವ ಬಹು ದೊಡ್ಡ ಭಾಗ್ಯ ಕರ್ತನೊಂದಿಗೆ ಪ್ರಾರ್ಥನೆಯಲ್ಲಿ ಸಂಭಾಷಿಸಿ ಸಂತೋಷಿಸುವದಾಗಿದೆ. ಭೂಮಿಗೆ ಸಂಬಂಧಪಟ್ಟ ನಾವು ಪರಲೋಕದೊಂದಿಗೆ ಐಕ್ಯಗೊಳ್ಳುವದು, ಕರ್ತನು ಕೊಟ್ಟಿರುವ ಭಾಗ್ಯಗಳಲ್ಲಿ ಒಂದು. ಒಬ್ಬ ವಿಶ್ವಾಸಿ, ಹಲವು ರೀತಿಯಲ್ಲಿ ಪ್ರಾರ್ಥಿಸಬಹುದು. ವೈಯಕ್ತಿಕ ಪ್ರಾರ್ಥನೆ ಉಂಟು, ಕುಟುಂಬ ಪ್ರಾರ್ಥನೆ ಉಂಟು, ಗುಂಪಾಗಿ ಸೇರಿ ಮಾಡುವ ಪ್ರಾರ್ಥನೆ ಉಂಟು, ಸಭೆಯಾಗಿ ಕೂಡಿ ಪ್ರಾರ್ಥಿಸುವ ಪ್ರಾರ್ಥನೆ ಉಂಟು.

ಆದರೆ ಒಬ್ಬ ಮನುಷ್ಯನ ಆತ್ಮೀಕ ಜೀವಿತ ಅವನ ವೈಯಕ್ತಿಕ ಪ್ರಾರ್ಥನೆಯಿಂದ ಮಾತ್ರ ಕಟ್ಟಿ ಎಬ್ಬಿಸುವಂಥದ್ದು. ವೈಯಕ್ತಿಕ ಪ್ರಾರ್ಥನೆಯೇ ಕ್ರೈಸ್ತ ಜೀವಿತಕ್ಕೆ ತಳಹದಿ. ಅದು ಮರದ ತಾಯಿ ಬೇರಿನಂತಿರುವದು. ಒಂದು ಮಗು ತಂದೆಯೊಂದಿಗೆ ಮಾತನಾಡುವಂತೆ ನೀವು ತನ್ನ ಬಳಿ ಮಾತನಾಡಬೇಕೆಂದು ಕರ್ತನು ನಿರೀಕ್ಷಿಸುವನು. ಅನೇಕ ಭಕ್ತರು, ವೈಯಕ್ತಿಕ ಪ್ರಾರ್ಥನೆಗಾಗಿ, ಹೊತ್ತಾರೆ ಸಮಯವನ್ನು ಆರಿಸಿಕೊಂಡರು. ಕರ್ತನನ್ನು ಹಾಡಿ ಸ್ತುತಿಸಲು ಆತನ ವಾಕ್ಯಗಳನ್ನು ಧ್ಯಾನಿಸಲು, ಬಿನ್ನಹಗಳನ್ನು ಕರ್ತನ ಮುಂದೆ ಇಡಲು ಹೊತ್ತಾರೆ ಸಮಯ ತಕ್ಕದ್ದಾಗಿದೆ. ಆದ್ದರಿಂದಲೇ ದಾವೀದನು, "ಅರುಣೋದಯದಲ್ಲಿ ಎದ್ದು ಮೊರೆಯಿಟ್ಟೆನು; ನಿನ್ನ ವಾಕ್ಯವನ್ನು ನಿರೀಕ್ಷಿಸಿಕೊಂಡಿದ್ದೇನೆ" ಎಂದು ಹೇಳಿದನು (ಕೀರ್ತ. 119:147). ಹೊತ್ತಾರೆ ಸಮಯ ಒಂದು ವೇಳೆ ತಪ್ಪಿಹೋದರೆ, ಚಿಂತಿಸದಿರಿ. ನಂತರ ಬೆಳಗಿನ ಹೊತ್ತು ಬರುವದು. ಯೆಹೋವನೇ ಉದಯಕಾಲದಲ್ಲಿಯೇ ಪ್ರಾರ್ಥನೆಯನ್ನು ಸಮರ್ಪಿಸಿ ಸದುತ್ತರವನ್ನು ಎದುರುನೋಡುತ್ತಿರುವೆನು" ಎಂದು ದಾವೀದನು ಹೇಳುತ್ತಾನೆ (ಕೀರ್ತ. 5:3) ಮಾತ್ರವಲ್ಲ, "ತ್ರಿಕಾಲದಲ್ಲಿಯೂ ಹಂಬಲಿಸುತ್ತಾ ಮೊರೆಯಿಡುವೆನು" ಎಂದು ಹೇಳುತ್ತಾನೆ (ಕೀರ್ತ. 55:17).

ದೇವಜನರೇ, ಇದು ಅವಸರದ ಕಾಲವಾಗಿದೆ. ಆದರೆ, ಪ್ರಾರ್ಥಿಸುವದರಲ್ಲಿ ಅವಸರ ಪಡದಿರಿ. ಕರ್ತನಿಗಾಗಿ ಸ್ವಲ್ಪ ಸಮಯವನ್ನು ಪ್ರತ್ಯೇಕಿಸಿರಿ. ಪ್ರಾರ್ಥನೆಗೆ ಸಮಯವನ್ನು ಕಾದಿರಿಸಿರಿ. ಅದು ಹೊತ್ತಾರೆಯಾಗಿರಬಹುದು, ಮಧ್ಯಾಹ್ನವಾಗಿರಬಹುದು, ರಾತ್ರಿಯಾಗಿರಬಹುದು ತಪ್ಪದೇ ಪ್ರಾರ್ಥಿಸಿರಿ.

*ನೆನಪಿಗೆ : ಯೆಹೋವನ ನಾಮವು ಮೂಡಣಿಂದ ಪಡುವಣವರೆಗೂ ಸ್ತುತಿಹೊಂದಲಿ (ಕೀರ್ತನೆ.113:3).*

ಜನವರಿ 7

## ಮೊರೆಯಿಡುವ ಪ್ರಾರ್ಥನೆ!

ಬೆಳಿಗ್ಗೆ : ಆದಿ. 18, 19
ಸಂಜೆ : ಮತ್ತಾಯ 6:1–18

“ಯೆಹೋವನಿಗೆ ಮೊರೆಯಿಡುವವರು ಯಥಾರ್ಥವಾಗಿ ಮೊರೆಯಿಡುವವದಾದರೆ ಆತನು ಹತ್ತಿರವಾಗಿಯೇ ಇದ್ದಾನೆ” (ಕೀರ್ತ. 145:18).

ಒಬ್ಬ ದೇವಭಕ್ತರು, ಪ್ರಾರ್ಥನೆಯ ಕುರಿತು ಹೇಳುವದೇನೆಂದರೆ, ಅತಿ ವೇಗವಾದ ದೂರವಾಣಿ ಸಾಧನವೆಂದರೆ, ಪ್ರಾರ್ಥನೆಯಾಗಿದೆ ಎಂದು. ಹೌದು, ಅದು ಕ್ಷಣಮಾತ್ರದಲ್ಲಿ ಆಕಾಶದ ನಕ್ಷತ್ರಗಳನ್ನು ದಾಟಿ, ಸೂರ್ಯ ಚಂದ್ರರನ್ನು ದಾಟಿ, ಪರಲೋಕದಲ್ಲಿರುವ ದೇವಾಧಿದೇವನ ಸಿಂಹಾಸನಕ್ಕೆ ಹೋಗಿ ಮುಟ್ಟುವದು, ದೇವದೂತರು ಹಾರುವ ವೇಗಕ್ಕಿಂತಲೂ ಅತಿವೇಗವಾಗಿ ಪ್ರಾರ್ಥನೆಯು ಪರಲೋಕವನ್ನು ಮುಟ್ಟುವದು. ಪ್ರಾರ್ಥನೆಯು ಮನುಷ್ಯನನ್ನೂ, ದೇವರನ್ನೂ ಒಂದುಗೂಡಿಸುವ ಪ್ರೀತಿಯ ಸೇತುವೆಯಾಗಿದೆ. ಉನ್ನತಲೋಕಕ್ಕೆ ಏರಿಹೋಗುವ ಏಣಿಯಾಗಿದೆ.

ಇ.ಎಂ.ಪಾಂಡ್ಸ್ ಎಂಬ ಭಕ್ತರು “ನಮ್ಮ ಆತ್ಮ ಆಸಕ್ತಿಯಿಂದ ಮೊರೆಯಿಡುವ ಬೇಡಿಕೆಯೇ ಪ್ರಾರ್ಥನೆ” ಎಂದು ಹೇಳುವರು. ಬಾರ್ತಿಮಾಯನೆಂಬ ಒಬ್ಬ ಕುರುಡನನ್ನು ಕುರಿತು ಮಾರ್ಕನ ಸುವಾರ್ತೆಯಲ್ಲಿ ಓದುತ್ತೇವೆ. ಯೇಸುಕ್ರಿಸ್ತನು ಪ್ರಪಂಚದಲ್ಲಿದ್ದ ಆ ದಿನಗಳಲ್ಲಿ ಅವನು ಕರ್ತನನ್ನು ಕಣ್ಣಾರೆ ಕಾಣಲಾಗದ ಕುರುಡನಾಗಿದ್ದನು. ಯೇಸುಕ್ರಿಸ್ತನು ತನ್ನ ಪಕ್ಕದಲ್ಲೇ ನಡೆದುಹೋಗುತ್ತಿರುವ ಸುದ್ದಿಯನ್ನು ಕೇಳಿದೊಡನೆಯೇ “ದಾವೀದನ ಕುಮಾರನೇ ಯೇಸುವೇ, ನನ್ನನ್ನು ಕರುಣಿಸು” ಎಂದು ಕೂಗಿಕೊಳ್ಳಲು ಪ್ರಾರಂಭಿಸಿದನು. ಅನೇಕರು ಅವನನ್ನು ಸುಮ್ಮನಿರುವಂತೆ ಗದರಿಸಿದರು. ಆದರೆ ಅವನಾದರೋ “ದಾವೀದ ಕುಮಾರನೇ ನನ್ನನ್ನು ಕರುಣಿಸು ಎಂದು ಮತ್ತಷ್ಟು ಕೂಗಿಕೊಂಡನು” (ಮಾರ್ಕ. 10:47,48). ಕೂಗಿದಂಥ ಆ ಪ್ರಾರ್ಥನೆ ಯೇಸುಕ್ರಿಸ್ತನನ್ನು ನಿಲ್ಲಿಸಿಬಿಟ್ಟಿತು. ಒಬ್ಬ ಸಾಧಾರಣ ಬಡ ಮನುಷ್ಯನ ಪ್ರಾರ್ಥನೆ ಕೇಳಿದ ಕರ್ತನು ಅವನಿಗೆ ದೃಷ್ಟಿಯನ್ನು ನೀಡಿ ಆಶೀರ್ವದಿಸಿದನು (ಮಾರ್ಕ. 10:52).

ದೇವಜನರೇ, ನೀವು ಕರ್ತನನ್ನು ಹೃದಯಾಂತರಾಳದಿಂದ ಕೂಗಿ ಕರೆಯುವಾಗ, ನಿಶ್ಚಯವಾಗಿ ಆತನು ನಿಮ್ಮ ಮೊರೆಗೆ ಕಿವಿಗೊಡುವನು. ಯಥಾರ್ಥ ಹೃದಯದಿಂದ ಮಾಡಿದ ಪ್ರಾರ್ಥನೆಗೆ ಕರ್ತನ ಸದುತ್ತರ ತಪ್ಪುವದೇ ಇಲ್ಲ.

*ನೆನಪಿಗೆ : ಅವನು ಮೊರೆಯಿಡುವ ಬಡವರನ್ನೂ, ದಿಕ್ಕಿಲ್ಲದೆ ಕುಗ್ಗಿದವರನ್ನೂ ಉದ್ಧರಿಸುವನು (ಕೀರ್ತನೆ 72:12).*



ಜನವರಿ 8

## ಸುರಿಯಲ್ಪಟ್ಟ ಕಣ್ಣೀರು!

ಬೆಳಿಗ್ಗೆ : ಆದಿ. 20,21,22
ಸಂಜೆ : ಮತ್ತಾ. 6:19–34

“ಯೇಸು ಕಣ್ಣೀರು ಬಿಟ್ಟನು” (ಯೋಹಾನ 11:35).

ಪ್ರಾರ್ಥನೆಗಳಲ್ಲೆಲ್ಲಾ ಬಹು ಶಕ್ತಿಯುತವಾದ ಪ್ರಾರ್ಥನೆ ಕಣ್ಣೀರಿನ ಪ್ರಾರ್ಥನೆಯಾಗಿದೆ. ಆ ಪ್ರಾರ್ಥನೆಯನ್ನು ಕರ್ತನು ಎಂದಿಗೂ ತಿರಸ್ಕರಿಸುವದಿಲ್ಲ. ಕಣ್ಣೀರಿನ ಪ್ರಾರ್ಥನೆ ಕರ್ತನ ಆಂತರ್ಯವನ್ನು ಕರಗಿಸುವದು. ಆತನು ಕೂಡಲೇ ತನ್ನ ಪ್ರೀತಿಯ ಕರಗಳಿಂದ ಕಣ್ಣೀರನ್ನು ಒರೆಸುವನು. ಅದನ್ನು ಆನಂದ ಬಾಷ್ಪವಾಗಿ ಮಾರ್ಪಡಿಸುವನು.

ಯೇಸುಕ್ರಿಸ್ತನು, ತನ್ನ ಸ್ನೇಹಿತನಾದ ಲಾಜರನು ಮರಣಹೊಂದಿದಾಗ ಸಮಾಧಿಯ ಬಳಿ ಕಣ್ಣೀರು ಸುರಿಸಿದನು (ಯೋಹಾ. 11:35). ಆತನ ಕಣ್ಣೀರನ್ನು ನೋಡಿ, ಅಲ್ಲಿದ್ದ ಯೆಹೂದ್ಯರು ಆಹಾ, ಈತನು ಅವನ ಮೇಲೆ ಎಷ್ಟೋ ಮಮತೆ ಇಟ್ಟಿದ್ದನು ಅಂದರು (ಯೋಹಾ. 11:36). ಆತನು ಕಣ್ಣೀರು ಸುರಿಸಿದ ಕಾರಣ ಆತನಲ್ಲಿದ್ದ ಅಪರಿಮಿತವಾದ ಪ್ರೀತಿ, ಆತನು ಅಳುವದರೊಂದಿಗೆ ನಿಂತುಬಿಡಲಿಲ್ಲ. ಲಾಜರನನ್ನು ಜೀವದಿಂದ ಎಬ್ಬಿಸಿದನು. “ಅಳುವವರ ಸಂಗಡ ಅಳಿರಿ” (ರೋಮಾ.12:15) ಎಂದು ಸತ್ಯವೇದ ಹೇಳುತ್ತದೆ. ನೀವು ಅಳುವಾಗ, ನಿಮ್ಮೊಂದಿಗೆ ಸೇರಿ ಅಳಲು ಕ್ರಿಸ್ತನು ಅತಿ ಕನಿಕರವುಳ್ಳಾತನಾಗಿರುವನು. ಡಾ. ಕ್ಲಿಫರ್ಡ್‌ಕುಮಾರ್‌ರವರು “ನನಗಾಗಿ ಅಳುವ ನನ್ನ ಯೇಸು ಒಳ್ಳೆಯವನೇ, ಕಷ್ಟಗಳಲ್ಲಿ ನನ್ನ ಸಹಾಯ ಆತನೇ, ಕಣ್ಣೀರೆಲ್ಲವನ್ನೂ ಒರೆಸುವನು” ಎಂದು ಹಾಡುವಾಗ, ನಮ್ಮ ಆಂತರ್ಯ ಕರಗಿಹೋಗುವದು. ಯೇಸುಕ್ರಿಸ್ತನ ಸ್ವಭಾವಗಳಲ್ಲಿ ಆತನ ಪ್ರೀತಿ, ಕನಿಕರ ನಮ್ಮ ಆಂತರ್ಯವನ್ನು ಮುಟ್ಟುವದು. ಆತನು ಪ್ರತಿಬಾರಿಯೂ ಅದ್ಭುತಗಳನ್ನು ಮಾಡುವಾಗ, ಕನಿಕರಪಟ್ಟು ಮಾಡಿದನು. ಕುಷ್ಠರೋಗಿಯನ್ನು ನೋಡಿ ಕನಿಕರ ಪಟ್ಟನು, ವ್ಯಾಧಿವುಳ್ಳವರನ್ನು ನೋಡಿ ಕನಿಕರ ಪಟ್ಟನು. ಕುರುಬನಿಲ್ಲದ ಕುರಿಗಳಂತಿದ್ದ ಜನರನ್ನು ನೋಡಿ ಕನಿಕರ ಪಟ್ಟನು. ಯೇಸುಕ್ರಿಸ್ತನ ಪ್ರಾರ್ಥನೆ ಸಾಧಾರಣವಾದದ್ದಾಗಿರಲಿಲ್ಲ. ಆತನು ಗೆತ್ಸೇಮನೆ ತೋಟದಲ್ಲಿ ಹೇಗೆ ಪ್ರಾರ್ಥಿಸಿದನೆಂಬುದನ್ನು ಗಮನಿಸಿರಿ. “ಆತನು ಮನೋವ್ಯಥೆಯುಳ್ಳವನಾಗಿ ಇನ್ನೂ ಆಸಕ್ತಿಯಿಂದ ಪ್ರಾರ್ಥಿಸುತ್ತಿರಲಾಗಿ ಆತನ ಬೆವರು ಭೂಮಿಗೆ ಬೀಳುತ್ತಿರುವ ರಕ್ತದ ದೊಡ್ಡ ಹನಿಗಳಂತಿತ್ತು” (ಲೂಕ. 22:44) ಎಂದು ಸತ್ಯವೇದದಲ್ಲಿ ಓದುತ್ತೇವೆ.

ದೇವಮಕ್ಕಳೇ, ಜಜ್ಜಿದ ಹೃದಯದಿಂದ ಕಣ್ಣೀರಿನೊಂದಿಗೆ ಪ್ರಾರ್ಥಿಸಿರಿ. ನಿಮ್ಮ ಎಲ್ಲಾ ದುಃಖ ಸಂಕಟಗಳಲ್ಲಿ ವ್ಯಾಧಿಗಳಲ್ಲಿ ಭಾಗಿಯಾಗುವ ಕರ್ತನು ಮನಮರುಗಿ ನಿಮ್ಮ ಪ್ರಾರ್ಥನೆಯನ್ನು ಆಲಿಸಿ, ಸದುತ್ತರವನ್ನು ನೀಡುವನು.

*ನೆನಪಿಗೆ : “ನಮಗಿರುವ ಮಹಾಯಾಜಕನು ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪವಿಲ್ಲದವನಲ್ಲ. ಆತನು ಸರ್ವವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು, ಪಾಪ ಮಾತ್ರ ಮಾಡಲಿಲ್ಲ” (ಇಬ್ರಿ. 4:15).*

ಜನವರಿ 9

## ಎಲ್ಲಾ ಸಮಯಗಳಲ್ಲಿ!

ಬೆಳಿಗ್ಗೆ : ಆದಿ. 23,24
ಸಂಜೆ : ಮತ್ತಾಯ 7

"ನೀವು ಪವಿತ್ರಾತ್ಮಪ್ರೇರಿತರಾಗಿ ಎಲ್ಲಾ ಸಮಯಗಳಲ್ಲಿ ಸಕಲವಿಧವಾದ ಪ್ರಾರ್ಥನೆಯಿಂದಲೂ ವಿಜ್ಞಾಪನೆಯಿಂದಲೂ ದೇವರನ್ನು ಪ್ರಾರ್ಥಿಸಿರಿ. ಇದರಲ್ಲಿ ಪೂರ್ಣ ಸ್ಥಿರಚಿತ್ತರಾಗಿದ್ದು ದೇವಜನರೆಲ್ಲರ ವಿಷಯದಲ್ಲಿ ವಿಜ್ಞಾಪನೆ ಮಾಡುತ್ತಾ ಎಚ್ಚರವಾಗಿರ್ರಿ (ಎಫೆ. 6:18).

ನೀವು ಯಾವ ಸಮಯದಲ್ಲಿಯಾದರೂ ಕರ್ತನ ಸಮ್ಮುಖಕ್ಕೆ ಬರಲು ಸಾಧ್ಯ. ಅದಕ್ಕೆ ಹಗಲು, ರಾತ್ರಿ ಎಂಬ ನಿರ್ಬಂಧವಿಲ್ಲ. ಯಾವಾಗಬೇಕಾದರೂ ಕರ್ತನ ಕೃಪಾಸನದ ಬಳಿ ನೀವು ಬರಬಹುದು. ವಿಜ್ಞಾಪನೆ, ಬಿನ್ನಹಗಳನ್ನು ಮಾಡಬಹುದು. ನಿಮ್ಮ ಪ್ರಾರ್ಥನೆಯನ್ನು ಕೇಳಲು ಆತನು ಕುತೂಹಲದಿಂದಿರುವನು. ಆತನು ತೂಕಡಿಸುವದೂ ಇಲ್ಲ ನಿದ್ರಿಸುವದೂ ಇಲ್ಲ.

ಅಪೊ. ಪೌಲನು, "ಯಾವಾಗಲೂ ಸಂತೋಷಿಸಿರಿ, ಎಡಬಿಡದೆ ಪ್ರಾರ್ಥನೆ ಮಾಡಿರಿ; ಎಲ್ಲಾದರಲ್ಲಿಯೂ ಕೃತಜ್ಞತಾ ಸ್ತುತಿಮಾಡಿರಿ" ಎಂದು ಹೇಳುತ್ತಾನೆ (1 ಥೆಸ. 5:16–17,18). ಎಡಬಿಡದೆ ಹೇಗೆ ಪ್ರಾರ್ಥಿಸಲು ಸಾಧ್ಯ? ಎಂದು ನೀವು ಕೇಳಬಹುದು. ನಿಮ್ಮ ಹೃದಯ ಎಡಬಿಡದೆ ಬಡಿಯುತ್ತಲೇ ಇರುವದಲ್ಲವೇ? ನೀವು ಎಚ್ಚರವಾಗಿದ್ದರೂ, ಮಲಗಿದ್ದರೂ ನೀವು ಉಸಿರಾಡುತ್ತಲೇ ಇರುವಿರಲ್ಲವೇ! ಆದ್ದರಿಂದ ನಿಮ್ಮ ಹೃದಯದ ಬಡಿತದೊಂದಿಗೆ ಶ್ವಾಸದೊಂದಿಗೆ ಯೇಸು ಎಂಬ ನಾಮವನನ್ನು ಬೆಸೆದುಬಿಡಿ. ನನ್ನ ಹೃದಯ ತುಡಿತವೆಲ್ಲಾ ನಿನ್ನಲ್ಲಿಯೇ ಏಕೀಭವಿಸಿದೆ ಎಂದು ಹೇಳಿರಿ. ಪ್ರವಾದಿಯಾದ ದಾನಿಯೇಲನು ದಿನಕ್ಕೆ ಮೂರಾವರ್ತಿ ಪ್ರಾರ್ಥಿಸುತ್ತಿದ್ದನೆಂದು ಅವನ ವಿರೋಧಿಗಳು ಕಂಡರು. ಆದರೆ ಅರಸನೋ ದಾನಿಯೇಲನು ಎಡಬಿಡದೆ ಪ್ರಾರ್ಥಿಸುವದನ್ನು ಕಂಡನು. ಅಷ್ಟೊಂದು ಜವಾಬ್ದಾರಿಯುಳ್ಳ ದಾನಿಯೇಲನಿಂದ ಎಡಬಿಡದೆ ಆರಾಧಿಸಲು ಸಾಧ್ಯವಾಯಿತೆಂದರೆ ನಿಮಗೂ ಎಡಬಿಡದೆ ಪ್ರಾರ್ಥಿಸಲು ಸಾಧ್ಯವಿಲ್ಲವೇ? ಬೆಳಿಗ್ಗೆ ಎದ್ದಕೂಡಲೇ ಈ ಒಂದು ಒಳ್ಳೆಯ ದಿನವನ್ನು ನೀಡಿದ್ದಕ್ಕಾಗಿ ಸ್ತೋತ್ರ. ಈ ದಿನವೆಲ್ಲಾ ನೀನು ನನ್ನೊಂದಿಗೆ ಇದ್ದು ನನ್ನನ್ನು ನಡಿಸು ಎಂದು ಹೇಳಿರಿ. ಹಲ್ಲುಜ್ಜುವಾಗ, ಸ್ನಾನ ಮಾಡುವಾಗ "ದೇವರೇ, ನನ್ನ ಶರೀರ ಶುಚಿಗೊಂಡಂತೆ, ನನ್ನ ಆತ್ಮವನ್ನು ಶುದ್ಧೀಕರಿಸು" ಎಂದು ಪ್ರಾರ್ಥಿಸಿರಿ. ವಸ್ತ್ರಗಳನ್ನು ಧರಿಸುವಾಗ "ಕರ್ತನೇ ನಿನ್ನ ರಕ್ಷಣೆಯೆಂಬ, ನೀತಿಯೆಂಬ ವಸ್ತ್ರಗಳನ್ನು ತೊಡಿಸು" ಎಂದು ಪ್ರಾರ್ಥಿಸಿರಿ. ಊಟ ಮಾಡುವಾಗ ಕರ್ತನೇ ಶರೀರಕ್ಕೆ ಬೇಕಾದ ಆಹಾರ ನೀಡಿದಂತೆ, ಆತ್ಮಕ್ಕೆ ನಿನ್ನ ವಾಕ್ಯವೆಂಬ ಆಹಾರ ನೀಡಿ ಬಲಗೊಳಿಸು" ಎಂದು ಪ್ರಾರ್ಥಿಸಿರಿ.

ದೇವಜನರೇ, ನಿಮ್ಮ ಆಂತರ್ಯದ ಯಜ್ಞವೇದಿಯಲ್ಲಿ ಕರ್ತನ ಮೇಲಿನ ಪ್ರೀತಿಯ ಅಗ್ನಿ ಉರಿಯುತ್ತಲೇ ಇರಲಿ. ನೀವು ಆತನ ದೇವಾಲಯ, ಪವಿತ್ರಾತ್ಮನನ್ನು ನಂದಿಸಬೇಡಿರಿ (1 ಥೆಸ.5:19).

*ನೆನಪಿಗೆ : ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ. ಇದೇ ನಿಮ್ಮ ವಿವೇಕ ಪೂರ್ವಕವಾದ ಆರಾಧನೆಯು (ರೋಮಾ. 12:1).*



ಜನವರಿ 10

## ಎಡಬಿಡದ ಧ್ಯಾನ!

ಬೆಳಿಗ್ಗೆ : ಆದಿ. 25, 26
ಸಂಜೆ : ಮತ್ತಾಯ 8:1–17

"ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದ ಪಡುವವನಾಗಿ ಅದನ್ನೇ ಹಗಲಿರುಳು ಧ್ಯಾನಿಸುತ್ತಿರುವನೋ ಅವನು ಎಷ್ಟೋ ಧನ್ಯನು" (ಕೀರ್ತ. 1:2).

ದಾವೀದನು ಒಬ್ಬ ಧ್ಯಾನ ಪುರುಷನು. ಕರ್ತನು ಕೊಟ್ಟ ಸತ್ಯವೇದದ ಮೇಲೆ ಅಪರಿಮಿತವಾದ ಪ್ರೀತಿಯನ್ನಿಟ್ಟಿದ್ದನು. ಸತ್ಯವೇದವನ್ನು ಧ್ಯಾನಿಸುವದರಿಂದ ಭಾಗ್ಯಕರವಾದ ಜೀವಿತ ನಡೆಸಬಹುದು ಎಂಬುದನ್ನು ತನ್ನ ಅನುಭವದಿಂದ ತಿಳಿದವನಾಗಿದ್ದನು. ಆತನು ಹೇಳುತ್ತಾನೆ "ನಿನ್ನ ಧರ್ಮಶಾಸ್ತ್ರವು ನನಗೆ ಎಷ್ಟೋ ಪ್ರಿಯವಾಗಿದೆ; ದಿನವೆಲ್ಲಾ ಅದೇ ನನ್ನ ಧ್ಯಾನ" (ಕೀರ್ತನೆ 119:97) ಎಂದು.

ಸತ್ಯವೇದವನ್ನು ಓದುವದು ನಮ್ಮ ಕರ್ತವ್ಯ. ದೇವರು ತನ್ನ ಮಹತ್ವಗಳನ್ನು ನಮಗೆ ಬರೆದುಕೊಟ್ಟಿರುವನು. ಅದನ್ನು ನಾವೂ ಎಂದೂ ಅಸಡ್ಡೆ ಮಾಡಬಾರದು. ದೇವರ ವಾಕ್ಯಗಳು ಆತ್ಮವಾಗಿಯೂ ಜೀವವಾಗಿಯೂ ಇರುವವು (ಯೋಹಾನ 6:63). ಅದನ್ನು ಓದಿ ಧ್ಯಾನಿಸುವಾಗ ಅದು ನಿಮ್ಮ ಆಂತರ್ಯದಲ್ಲಿ ಅಗ್ನಿಯನ್ನು ಹತ್ತಿಸಿ ಉರಿಸುವದು. ಅಪೊ. ಪೇತ್ರನು ಕೊರ್ನೇಲ್ಯನ ಮನೆಯಲ್ಲಿ ದೇವರ ವಾಕ್ಯವನ್ನು ಪ್ರಸಂಗಿಸಿದನು. ಅದರಲ್ಲಿ ಆತ್ಮವಿತ್ತು, ಜೀವವಿತ್ತು. ಕೇಳುತ್ತಿದ್ದವರೆಲ್ಲರ ಮೇಲೆ ಪವಿತ್ರಾತ್ಮನು ಇಳಿದುಬಂದನು ಎಂದು ಅ.ಕೃ. 10:44ರಲ್ಲಿ ಓದುತ್ತೇವೆ. ನಾನು ಸತ್ಯವೇದವನ್ನು ಹಲವು ಸಾರಿ ಓದಿ ಧ್ಯಾನಿಸಿದ್ದರೂ ಈಗಲೂ ಯೆಶಾಯನು ಬರೆದ ಪ್ರವಾದನಾ ಗ್ರಂಥವು ನನಗೆ ಅಧಿಕವಾದ ವಾಗ್ದಾನಗಳನ್ನು ಕೊಡುವದಾಗಿಯೂ, ನನ್ನನ್ನು ಬಲದಿಂದ ತುಂಬಿಸುವಂಥದ್ದಾಗಿಯೂ ಇರುವದು. ಪ್ರಾರ್ಥನೆ ಎಷ್ಟು ಮುಖ್ಯವೋ, ಅದರಂತೆ ಸತ್ಯವೇದ ಧ್ಯಾನವೂ ಅಷ್ಟೇ ಮುಖ್ಯವಾದದ್ದು. ಅದು ಇಬ್ಬಾಯಿಕತ್ತಿಯಾಗಿರುವದು (ಇಬ್ರಿ. 4:12). ಅದೇ ವೇಳೆಯಲ್ಲಿ ಅಗ್ನಿಜ್ವಾಲೆಯಾಗಿಯೂ ಆಗಿರುವದು (ಯೆರೆ. 20:9). ನೀವು ಸತ್ಯವೇದವನ್ನು ಓದುವಾಗ, ಏನೋ ಒಂದು ನಿರ್ದಿಷ್ಟವಾದ ವಾಕ್ಯದ ಮೂಲಕ ಕರ್ತನು ನಿಮ್ಮೊಂದಿಗೆ ಮಾತನಾಡುವದಾದರೆ, ಆ ವಾಕ್ಯವನ್ನು ಹಿಡಿದುಕೊಳ್ಳಿರಿ. ದಿನವೆಲ್ಲಾ ಅದನ್ನು ಕುರಿತು ಧ್ಯಾನಿಸಿರಿ. ಸತ್ಯವೇದದ ರಹಸ್ಯಗಳನ್ನು ಆ ವಾಕ್ಯದ ಮೂಲಕ ಬೋಧಿಸುವನು. ಪ್ರಾರ್ಥನೆಯ ವೇಳೆಯಲ್ಲಿ ನೀವು ಕರ್ತನೊಂದಿಗೆ ಮಾತನಾಡುವಿರಿ. ಆದರೆ ಧ್ಯಾನದ ಸಮಯದಲ್ಲಿ ಕರ್ತನು ನಿಮ್ಮೊಂದಿಗೆ ಮಾತನಾಡುವನು.

ದೇವಜನರೇ, ಸತ್ಯವೇದವನ್ನು ಪ್ರೀತಿಸಿ ಓದಿರಿ. ಓದಿದ್ದನ್ನು ಧ್ಯಾನಿಸಿರಿ. ಜೀವಿತದಲ್ಲಿ ಅಭ್ಯಾಸ ಮಾಡಿ ಉಪಯೋಗಿಸಿರಿ.

*ನೆನಪಿಗೆ : "ಹಳೇ ದಿನಗಳನ್ನು ನೆನಸಿಕೊಳ್ಳುತ್ತೇನೆ; ನಿನ್ನ ಎಲ್ಲಾ ಕಾರ್ಯಗಳನ್ನು ಸ್ಮರಿಸುತ್ತೇನೆ" (ಕೀರ್ತನೆ 143:5).*

ಜನವರಿ 11

## ಪ್ರಾರ್ಥನಾ ಜೀವಿತ!

ಬೆಳಿಗ್ಗೆ : ಆದಿ. 27, 28
ಸಂಜೆ : ಮತ್ತಾ. 8:18–34

"ಬೆಳಿಗ್ಗೆ ಸಿದ್ಧವಾಗಿದ್ದು ಸೀನಾಯಿ ಬೆಟ್ಟವನ್ನು ಹತ್ತಿ ಅಲ್ಲಿ ಬೆಟ್ಟದ ತುದಿಯಲ್ಲಿ ನನ್ನ ಸನ್ನಿಧಿಯಲ್ಲಿ ನಿಂತಿರಬೇಕು" (ವಿಮೋ. 34:2).

ನಸುಕಿನಲ್ಲಿ ಇಲ್ಲವೇ ಹೊತ್ತಾರೆ ಎಂಬುದು ನಾಲ್ಕು ಗಂಟೆಯಿಂದ ಆರುಗಂಟೆಯ ನಡುವಿರುವ ಸಮಯವಾಗಿದೆ. ಎಂದು ವೇದಪಂಡಿತರು ಹೇಳುವರು. ಆ ಸಮಯವೇ ಕರ್ತನನ್ನು ಸ್ತುತಿಸಿ, ಆನಂದಿಸುವ ಸಮಯ. ಸೂರ್ಯನು ಹುಟ್ಟುವದಕ್ಕೆ ಮುಂಚೆ ಹಕ್ಕಿಗಳ ಕಲರವ ಕಿವಿಗಳಲ್ಲಿ ಬೀಳುವದಕ್ಕೆ ಮೊದಲು ಕರ್ತನ ಪಾದದಲ್ಲಿ ಕುಳಿತು ಆತನನ್ನು ಸ್ತುತಿಸುವದೇ ಭಕ್ತರ ಅನುಭವ. ಆ ಸಮಯದಲ್ಲಿ ಸಿದ್ಧತೆಯೊಡನೆ ಕರ್ತನ ಸಮ್ಮುಖದಲ್ಲಿ ಹೋಗಿ ನಿಲ್ಲಬೇಕು.

ನಾವು ಒಬ್ಬ ಅಧಿಕಾರಿಯನ್ನು ನೋಡುವದಕ್ಕೋ, ಅಥವಾ ಬೇರೆ ಯಾವದಾದರೂ ಕೆಲಸಕ್ಕೆ ಹೋಗುವ ಮೊದಲು ನಮ್ಮನ್ನು ಸಿದ್ಧಪಡಿಸಿಕೊಂಡು ಹೋಗುತ್ತೇವಲ್ಲವೇ! ಆದರೆ ದೇವಾದಿ ದೇವನಾದ ಕರ್ತನ ಸನ್ನಿಧಿಗೆ ಹೋಗಲು ನಾವು ಇನ್ನೂ ಹೆಚ್ಚಿನ ಸಿದ್ಧತೆ ಮಾಡಿಕೊಳ್ಳುವದು ಅತಿ ಮುಖ್ಯವಾದದ್ದು. ಹೊತ್ತಾರೆಯಲ್ಲಿ ಕರ್ತನ ಸಮ್ಮುಖದಲ್ಲಿ ಹೋಗಿ ನಿಲ್ಲುವ ಮೊದಲು ಹಿಂದಿನ ರಾತ್ರಿಯೇ ನಿಮ್ಮನ್ನು ಸಿದ್ಧಪಡಿಸಿಕೊಳ್ಳಿರಿ. ಯಾವ ಯಾವ ಹಾಡುಗಳನ್ನು ಹಾಡಿಸ್ತುತಿಸಬಹುದು, ಯಾವ ಯಾವ ಮನವಿಗಳಿಗಾಗಿ ಪ್ರಾರ್ಥಿಸಬೇಕು ಎಂಬುದೆಲ್ಲವನ್ನೂ ಸಿದ್ಧಪಡಿಸಿಕೊಳ್ಳಿರಿ. ರಾತ್ರಿಯ ಊಟವನ್ನು ಮಿತಗೊಳಿಸಿ ಬೇಗನೆ ಹಾಸಿಗೆಗೆ ಹೋಗಿರಿ. ಆಗ ಹೊತ್ತಾರೆಯಲ್ಲಿ ಚೈತನ್ಯದಿಂದ ಕೂಡಿದವರಾಗಿ ಎದ್ದು ದೇವರ ಸನ್ನಿಧಿಗೆ ಹೋಗಲು ಸಾಧ್ಯವಾಗುವದು. ಹೊತ್ತಾರೆ ಎದ್ದು ಹಲ್ಲುಜ್ಜಿ ಮುಖ ತೊಳೆದು ರಾಜಾಧಿರಾಜನ ಸಮ್ಮುಖಕ್ಕೆ ಹೋಗುತ್ತಿರುವೆನು ಎಂಬ ಭಾವನೆಯಿಂದ ಕೂಡಿದವರಾಗಿ ಆತನ ಸನ್ನಿಧಿಗೆ ಹೋಗಿರಿ. ಮಾತ್ರವಲ್ಲ, ಒಳ್ಳೆಯ ಮನಸ್ಸಾಕ್ಷಿಯಿಂದ ಕೂಡಿದವರಾಗಿ ಆತನ ಸನ್ನಿಧಿಗೆ ಬನ್ನಿರಿ. ನೀನು ನನ್ನ ಹೃದಯವನ್ನು ಪರೀಕ್ಷಿಸಿದರೂ, ರಾತ್ರಿ ವೇಳೆ ವಿಚಾರಿಸಿದರೂ ನನ್ನನ್ನು ಪುಟಕ್ಕೆ ಹಾಕಿ ಶೋಧಿಸಿದರೂ ಯಾವ ದುರಾಲೋಚನೆಯಾದರೂ ನನ್ನಲ್ಲಿ ದೊರೆಯುವದಿಲ್ಲ. ನನ್ನ ಬಾಯಲ್ಲಿಯೂ ತಪ್ಪಿಲ್ಲ" (ಕೀರ್ತ.17:3) ಎಂದು ಕೀರ್ತನೆಗಾರನು ಹೇಳುವಂತೆ ನಿಮ್ಮ ಅಂತರ್ಯವು ಶುದ್ಧವಾಗಿರಲಿ.

ದೇವಜನರೇ, ಪ್ರತಿದಿನ ಹೊತ್ತಾರೆ ವೇಳೆಯಲ್ಲಿಯೂ ಕರ್ತನ ಕೃಪೆ, ಕಾರುಣ್ಯ, ನೂತನವಾದದ್ದು. ಆತನ ಕರುಣೆಗೆ ಕೊನೆಯೇ ಇಲ್ಲ. ಅವು ದಿನದಿನವು ಹೊಸದಾಗಿ ಒದಗುತ್ತವೆ. (ಪ್ರಲಾಪ. 3:22,23)

*ನೆನಪಿಗೆ : ಯಾವ ಸಂಬಂಧವಾಗಿಯೂ ಚಿಂತೆ ಮಾಡದೆ ಸರ್ವ ವಿಷಯದಲ್ಲಿ ದೇವರ ಮುಂದೆ ಕೃತಜ್ಞತಾಸ್ತುತಿಯನ್ನೂ, ಪ್ರಾರ್ಥನೆ, ವಿಜ್ಞಾಪನೆಗಳನ್ನೂ ಮಾಡುತ್ತಾ ನಿಮಗೆ ಬೇಕಾದದ್ದನ್ನು ತಿಳಿಯಪಡಿಸಿರಿ (ಫಿಲಿ. 4:6).*



ಜನವರಿ 12

## ಏಕಮನಸ್ಸಿನ ಪ್ರಾರ್ಥನೆ!

ಬೆಳಿಗ್ಗೆ : ಆದಿ. 29, 30
ಸಂಜೆ : ಮತ್ತಾ. 9:1–17

"ಇವರೆಲ್ಲರು ಏಕಮನಸ್ಸಾಗಿ ದೇವರ ಪ್ರಾರ್ಥನೆಯಲ್ಲಿ ನಿರತರಾಗಿದ್ದರು" (ಅ.ಕೃ. 1:14).

ಏಕ ಮನಸ್ಸಿನ ಪ್ರಾರ್ಥನೆ ಬಹು ಶಕ್ತಿಯುತವಾದದ್ದು. ಯೇಸುಕ್ರಿಸ್ತನು ಪರಲೋಕಕ್ಕೆ ಏರಿಹೋದ ಮೇಲೆ ಆತನ ಶಿಷ್ಯರಲ್ಲಿ ನೂರ ಇಪ್ಪತ್ತು ಮಂದಿ, ಏಕ ಮನಸ್ಸಿನಿಂದ ಒಂದು ಕಡೆ ಕೂಡಿಬಂದರು. ಕ್ರಿಸ್ತನು ಪರಲೋಕಕ್ಕೆ ಹೋದ ದಿನದಿಂದ ಹತ್ತುದಿನಗಳು, ಅಂದರೆ ಪಂಚಾಶತ್ತಮ ದಿನ ಬರುವವರೆಗೂ ಅವರು ಯೆರೂಸಲೇಮಿನಲ್ಲಿರುವ ಮೇಲುಪ್ಪರಿಗೆಯಲ್ಲಿ ಕೂಡಿ, ಉಪವಾಸ ಮಾಡಿ ಪ್ರಾರ್ಥಿಸುತ್ತಲೇ ಇದ್ದರು. ಆ ಪ್ರಾರ್ಥನೆಯ ಫಲ, ಮಹಾಶಕ್ತಿಯುತವಾದದ್ದು. ತಂದೆಯು ವಾಗ್ದಾನ ಮಾಡಿದ ಪವಿತ್ರಾತ್ಮನು, ಅವರ ಮೇಲೆ ಇಳಿದುಬಂದನು. ಉನ್ನತ ಬಲ ಅವರನ್ನು ಆವರಿಸಿತು.

ಒಬ್ಬನು ಸಾವಿರ ಮಂದಿಯನ್ನು ಸೋಲಿಸುವನು. ಇಬ್ಬರು ಹತ್ತು ಸಾವಿರ ಮಂದಿಯನ್ನು ಸೋಲಿಸುವರು (ಧರ್ಮೋ. 32:30). ಕುಟುಂಬದಲ್ಲಿ ಇಬ್ಬರು ಒಮ್ಮನಸ್ಸಿನಿಂದ ಕೂಡಿದವರಾಗಿರುವದಾದರೆ, ಕರ್ತನು ಅಲ್ಲಿ ಇಳಿದುಬರುವನು. ಯೇಸುಕ್ರಿಸ್ತನು ಹೇಳಿದನು, ನಿಮ್ಮಲ್ಲಿ ಇಬ್ಬರು ತಾವು ಬೇಡಿಕೊಳ್ಳತಕ್ಕ ಯಾವುದಾದರೂ ಒಂದು ಕಾರ್ಯದ ವಿಷಯವಾಗಿ ಭೂಲೋಕದಲ್ಲಿ ಒಂದೇ ಮನಸ್ಸುಳ್ಳವರಾಗಿದ್ದರೆ ಅದು ಪರಲೋಕದಲ್ಲಿರುವ ನನ್ನ ತಂದೆಯಿಂದ ಆಗುವದೆಂದು ನಿಮಗೆ ಹೇಳುತ್ತೇನೆ" ಎಂದು (ಮತ್ತಾ. 18:19). ಹಾಗಾದರೆ ನೀವು ಕುಟುಂಬವಾಗಿ ಒಮ್ಮನಸ್ಸಿನಿಂದ ಪ್ರಾರ್ಥಿಸುವಾಗ ಕರ್ತನು ಎಷ್ಟು ದೊಡ್ಡ ಕಾರ್ಯಗಳನ್ನು ನಿಮ್ಮ ಕುಟುಂಬದಲ್ಲಿ ಮಾಡುವನು! ಸಮಸ್ಯೆಗಳು ಬರುವಾಗ, ಸಮಾಧಾನ ಕೆಡುವಾಗ, ಕುಟುಂಬವಾಗಿ ಉಪವಾಸ ಮಾಡಿ ಪ್ರಾರ್ಥಿಸಿರಿ. ಒಮ್ಮನಸ್ಸಿನಿಂದ ಪ್ರಾರ್ಥಿಸಿರಿ. ಆಗ ಇರುಳಿನ ಅಂಧಕಾರ ಶಕ್ತಿಗಳು ಮುರಿಯಲ್ಪಟ್ಟು ಕರ್ತನು ನಿಮಗೆ ಜಯವನ್ನು ಅನುಗ್ರಹಿಸುವನು. ಇಂದು ಅನೇಕ ಸಭೆಗಳು ಹಲವಾರು ಬೋಧನೆಗಳಿಂದ ಒಡೆದು ನಿಂತಿರುವವು. ಬಿಟ್ಟುಕೊಡುವ ಮನೋಭಾವ ಇಲ್ಲದೆ, ಒಬ್ಬರ ಮೇಲೊಬ್ಬರು ಪಂಥ ಹಾಕುತ್ತಾ, ಹೊಟ್ಟೆ ಕಿಚ್ಚಿನಿಂದ ತುಂಬಿದವುಗಳಾಗಿರುವವು. ನಾವೆಲ್ಲರೂ ಒಬ್ಬನೇ ತಂದೆಯ ಮಕ್ಕಳಾಗಿರುವೆವು. ಒಬ್ಬನೇ ದೇವರು, ಒಂದೇ ರಕ್ತದಿಂದ ತೊಳೆಯಲ್ಪಟ್ಟಿರುವ ದೇವಮಕ್ಕಳಾಗಿರುವೆವು. ಒಂದೇ ಪವಿತ್ರಾತ್ಮನಿಂದ ತುಂಬಲ್ಪಟ್ಟವರಾಗಿರುವೆವು. ಆದ್ದರಿಂದ ಯೇಸುಕ್ರಿಸ್ತನ ಹೆಸರಿನಲ್ಲಿ ಒಂದು ಮನಸ್ಸಿನವರಾಗಿರ್ರಿ. ದೇವಜನರೇ, ನಿಮ್ಮ ಕುಟುಂಬಗಳಲ್ಲಿ ಸಭೆಗಳಲ್ಲಿ ಒಮ್ಮನಸ್ಸಿರಲಿ. ನಿಮಗಾಗಿ ಮಾತ್ರವಲ್ಲ, ದೇಶಕ್ಕಾಗಿಯೂ ಪ್ರಾರ್ಥಿಸಿರಿ.

*ನೆನಪಿಗೆ : "ನಿಮ್ಮೆಲ್ಲರಲ್ಲಿ ಒಂದೇ ಪ್ರೀತಿಯಿರಲಿ, ಅನ್ಯೋನ್ಯ ಭಾವವುಳ್ಳವರೂ ಒಂದೇ ಗುರಿಯಿಟ್ಟುಕೊಂಡವರೂ ಆಗಿರ್ರಿ" (ಫಿಲಿ. 2:2)*

ಜನವರಿ 13

## ಹರ್ಷಿಸುತ್ತಾ!

ಬೆಳಿಗ್ಗೆ : ಆದಿ. 31,32
ಸಂಜೆ : ಮತ್ತಾ. 9:18–38

"ಅಳುತ್ತಾ ಬಿತ್ತುವವರು ಹಾಡುತ್ತಾ ಕೊಯ್ಯುವರು. ದುಃಖಿಸುತ್ತಾ ಬೀಜವನ್ನು ತೆಗೆದುಕೊಂಡು ಹೋಗುವವನು ಹರ್ಷಿಸುತ್ತಾ ಸಿವುಡುಗಳನ್ನು ಹೊತ್ತುಕೊಂಡುಬರುವನು" (ಕೀರ್ತನೆ 126:5,6).

ಈ ವಾಕ್ಯ ಬಹುವಚನದಲ್ಲಿ ಪ್ರಾರಂಭವಾಗಿ ಏಕ ವಚನದಲ್ಲಿ ಮುಕ್ತಾಯವಾಗುವದು. ಬಿತ್ತುವವರು ಸಾವಿರ ಬೀಜಗಳನ್ನು ಒಟ್ಟಾಗಿ ಬಿತ್ತಿದ್ದರೂ, ಕರ್ತನು ಪ್ರತ್ಯೇಕವಾಗಿ ಒಂದೊಂದಾಗಿ ಬೆಳೆಯುವಂತೆ ಮಾಡುವನು. ಆ ಬೀಜದೊಳಗೆ ಇರುವ ಜೀವವನ್ನು ತಟ್ಟಿ ಎಬ್ಬಿಸುವನು. ಅದರ ಬೇರುಗಳು ಭೂಮಿಯೊಳಗೆ ಇಳಿಯುವದು. ಸಸಿಗಳು ಮೇಲೆ ಎದ್ದು ಬರುವದು. ಅದರಂತೆಯೇ ಸಾವಿರಾರು ಜನರ ಮಧ್ಯದಲ್ಲಿ ಒಬ್ಬ ಸುವಾರ್ತಿಕನು ವಾಕ್ಯವೆಂಬ ಬೀಜಗಳನ್ನು ಬಿತ್ತಿದರೂ, ಅದು ಪ್ರತ್ಯೇಕವಾಗಿ ಒಬ್ಬ ಮನುಷ್ಯನ ಆಂತರ್ಯದಲ್ಲಿ ಬಿದ್ದು ಫಲ ನೀಡುವದು.

ನೀವು ಬಿತ್ತಲು ಹೋಗುವಿರಾ? ಬೆಳಗಿನ ವೇಳೆಯಲ್ಲಿ ಹೋಗಿರಿ. ನಿಮ್ಮೊಳಗೆ ನೀವು ಬಿತ್ತಬೇಕಾದ ವಿಶ್ವಾಸವೆಂಬ ಬೀಜಗಳಿರುವವು. ನಿಮ್ಮ ಮಕ್ಕಳ ಆಂತರ್ಯದಲ್ಲಿ ಬಿತ್ತಬೇಕಾದ ವಾಕ್ಯಬೀಜಗಳುಂಟು. ಸೂರ್ಯನು ಹುಟ್ಟಿ ಬಿಸಿಲು ಏರುವ ಮೊದಲೇ ಬಿತ್ತಿಬಿಡಬೇಕು. ಬಿಸಿಲು ಏರಿದ ಮೇಲೆ ಕೆಲಸ ಮಾಡುವದು ಕಠಿಣ. ಭೂಮಿ ಕಾದುಬಿಟ್ಟರೆ ಬಿತ್ತಿದ ಬೀಜ ಒಣಗಿಹೋಗುವದು. ಹೊತ್ತಾರೆಯಲ್ಲಿ ಪ್ರಾರ್ಥಿಸುವದು ಮಾತ್ರವಲ್ಲ, ಅ ಪ್ರಾರ್ಥನೆಯೊಂದಿಗೆ ಕಣ್ಣೀರನ್ನು ಸೇರಿಸಿ ಬಿತ್ತುವದು. ಇನ್ನೂ ಹೆಚ್ಚಿನ ಫಲವನ್ನು ತರುವದು. ಬಿತ್ತುವವರು ಬಿತ್ತಿದ ಮೇಲೆ ವಿಶ್ರಾಂತಿ ತೆಗೆದುಕೊಳ್ಳುವದಿಲ್ಲ. ಅದಕ್ಕೆ ಕಾಲಕಾಲಕ್ಕೆ ನೀರು ಹಾಯಿಸಬೇಕು, ಬಂದ ಸಸಿಯನ್ನು ಗದ್ದೆಯಲ್ಲಿ ನಾಟಬೇಕು, ಕಳೆ ತೆಗೆಯಬೇಕು, ಗೊಬ್ಬರ ಹಾಕಬೇಕು. ಹುಳು ಹುಪ್ಪಟೆಗಳಿಂದ ಕಾಪಾಡಬೇಕು. ಎಷ್ಟೋ ಪ್ರಯಾಸ ಪಟ್ಟನಂತರ, ಕೊಯ್ಲು ಮಾಡಲು ಸಾಧ್ಯ.

ದೇವಜನರೇ, ಯಾರು ಬಿತ್ತಿದರೂ, ಯಾರು ನೀರು ಹಾಯಿಸಿದರೂ, ಬೆಳೆಸುವವನು ಕರ್ತನು ತಾನೇ. ಆತನೇ ಕೊಯ್ಲಿಗೆ ಯಜಮಾನ. ನೀವು ಪ್ರಾರ್ಥನೆಯೊಂದಿಗೆ ಮಕ್ಕಳನ್ನು ಬೆಳೆಸಿ, ವಾಕ್ಯದಂತೆ ಜೀವಿಸುವಂತೆ ಅವರಿಗೆ ಆಲೋಚನೆ ನೀಡಿರಿ. ಅವರು ಒಳ್ಳೆಯವರಾಗಿ, ಉನ್ನತವಾಗಿ, ಒಂದು ಉನ್ನತ ಸ್ಥಿತಿಗೆ ನಡೆಸುವವನು ಕರ್ತನು. ನಿಮ್ಮ ಮಕ್ಕಳೆಲ್ಲರು ನಿಮ್ಮ ಪಂಕ್ತಿಯಲ್ಲಿ ಸುತ್ತಲೂ ಎಣ್ಣೇ ಮರದ ಸಸಿಗಳಂತಿರುವರು. ನಿಮ್ಮ ಮಕ್ಕಳೆಲ್ಲರೂ ಕರ್ತನಿಂದ ಬೋಧಿಸಲ್ಪಟ್ಟು ಶಿಕ್ಷಿತರಾಗಿರುವರು.

*ನೆನಪಿಗೆ : "ನಾನು ಬಹು ನಮ್ರತೆಯಿಂದಲೂ, ಕಣ್ಣೀರಿನಿಂದಲೂ ಕರ್ತನ ಸೇವೆ ಮಾಡುತ್ತಿದ್ದೆನು. ಇದರಲ್ಲಿ ಯೆಹೂದ್ಯರ ಒಳಸಂಚುಗಳಿಂದ ಸಂಭವಿಸಿದ ಕಷ್ಟಗಳನ್ನು ಸಹಿಸುತ್ತಿದ್ದೆನು (ಅ.ಕೃ.20:19).*



ಜನವರಿ 14

## ಆಸಕ್ತಿಯುಳ್ಳ ಪ್ರಾರ್ಥನೆ!

ಬೆಳಿಗ್ಗೆ : ಆದಿ. 33,34,35
ಸಂಜೆ : ಮತ್ತಾ. 10:1–23

"ಎಲೀಯನು ನಮ್ಮಂಥ ಸ್ವಭಾವವುಳ್ಳವನಾಗಿದ್ದನು. ಅವನು ಮಳೆ ಬರಬಾರದೆಂದು ಬಹಳವಾಗಿ ಪ್ರಾರ್ಥಿಸಲು ಮೂರುವರುಷ ಆರು ತಿಂಗಳವರೆಗೂ ಮಳೆ ಬೀಳಲಿಲ್ಲ" (ಯಾಕೋ.5:17).

ಇಂದು ಅನೇಕ ವಿಶ್ವಾಸಿಗಳ ಸಮಸ್ಯೆ ಏನು? ಅವರಿಂದ ಆಸಕ್ತಿಯಿಂದ ಪ್ರಾರ್ಥಿಸಲು ಸಾಧ್ಯವಾಗುತ್ತಿಲ್ಲ. ಮನಸ್ಸನ್ನು ಒಂದೆಡೆ ನಿಲ್ಲಿಸಲು ಆಗುತ್ತಿಲ್ಲ. ಏಕಾಗ್ರತೆ ಇಲ್ಲದೆ ಇರುವದರಿಂದ ಆಸಕ್ತಿಯಿಂದ ಪ್ರಾರ್ಥಿಸಲಾಗುತ್ತಿಲ್ಲ.

ನಿಮಗೆ ಪ್ರಾರ್ಥಿಸಬೇಕೆಂಬ ಆಕಾಂಕ್ಷೆ ಇರಬೇಕು. ಮಾತ್ರವಲ್ಲ, ಪ್ರಾರ್ಥನೆಯಲ್ಲಿ ಒಂದು ಕ್ರಮ, ಉದ್ದೇಶ ಅಗತ್ಯವಾದದ್ದು. ಮೊದಲು ಹತ್ತು ನಿಮಿಷಗಳು ಕರ್ತನನ್ನು ಹಾಡಿ ಸ್ತುತಿಸಬಹುದು. ನಂತರದ ಹತ್ತು ನಿಮಿಷಗಳು ಆತನ ನಾಮವನ್ನೂ, ಆತನು ಮಾಡಿದ ಅದ್ಭುತಗಳನ್ನು ಹೇಳಿ ಹೇಳಿ ಸ್ತುತಿಮಾಡಬಹುದು. ನಂತರ ಕೆಲವು ವಾಗ್ದಾನಗಳನ್ನು ಬಾಧ್ಯವಾಗಿ ಕರ್ತನ ಬಳಿ ಕೇಳಬಹುದು. ಅದರ ನಂತರ ಆಸಕ್ತಿಯಿಂದ ಪ್ರಾರ್ಥಿಸಬೇಕು. ಪ್ರಾರ್ಥನಾ ಪಟ್ಟಿ ಇರುವದಾದರೆ ಇನ್ನೂ ಒಳ್ಳೆಯದು. ಆಸಕ್ತಿಯುಳ್ಳ ಪ್ರಾರ್ಥನೆಗೆ ಎಲೀಯನು ಮಾದರಿಯಾಗಿರುವನು. ಆ ರೀತಿಯಾದ ಪ್ರಾರ್ಥನೆಗೆ ಆತನನ್ನು ಉತ್ಸಾಹಪಡಿಸಿದ್ದು, ಅವನಲ್ಲಿದ್ದ ದೇವರ ಮೇಲಿನ ಭಕ್ತಿ ವೈರಾಗ್ಯವೇ ಆಗಿದೆ. "ದೇವಜನರಾದ ಇಸ್ರಾಯೇಲ್ಯರು ಬಾಳನ ವಿಗ್ರಹಗಳನ್ನು ಆರಾಧಿಸುತ್ತಿರುವರೇ, ಕರ್ತನೇ ಜೀವವುಳ್ಳ ದೇವರೆಂದು ನಿರೂಪಿಸಲೇಬೇಕು" ಎಂಬುದು ಆತನ ಆಂತರ್ಯದ ಬಯಕೆ ಮತ್ತು ಉದ್ದೇಶವಾಗಿತ್ತು. ಜನರಿಗೆ ಯಾವ ಕೊರತೆಯೂ ಇಲ್ಲದೇ ಇದ್ದರೆ, ಅವರು ಕರ್ತನನ್ನು ಹುಡುಕುವದಿಲ್ಲ. ಮಳೆಬಾರದೆ ಕ್ಷಾಮ ಒದಗಿ, ನೀರಿಲ್ಲದೇ ಹೋದಲ್ಲಿ, ಕರ್ತನನ್ನು ಹುಡುಕಲು ತಮ್ಮನ್ನು ತಗ್ಗಿಸಿಕೊಳ್ಳುವರು ಎಂದು ತಿಳಿದು ಆಸಕ್ತಿಯಿಂದ ಪ್ರಾರ್ಥಿಸಲು ಪ್ರಾರಂಭಿಸಿದನು. ಆತನು ಹೇಳಿದಂತೆ ಮೂರುವರೆ ವರ್ಷಗಳು ಮಳೆ ಬಾರದೆ ಹೋಗಿ ಇಸ್ರಾಯೇಲ್ ಜನರು ಕಂಗಾಲಾದರು. ಅವರನ್ನೂ ಬಾಳನ ಪೂಜಾರಿಗಳನ್ನೂ ಕರ್ಮೆಲ್ ಬೆಟ್ಟದಲ್ಲಿ ಸೇರಿಸಿ ಎಲೀಯನು ದೇವರ ಬಳಿ ಆಸಕ್ತಿಯಿಂದ ಪ್ರಾರ್ಥಿಸಲು ಆಕಾಶದಿಂದ ಅಗ್ನಿ ಇಳಿದುಬಂದು ಯಜ್ಞವೇದಿಯನ್ನು ದಹಿಸಿಬಿಟ್ಟಿತು. ಆಗ ಇಸ್ರಾಯೇಲ್ಯರು "ಕರ್ತನೇ ದೇವರು ಕರ್ತನೇ ದೇವರು" ಎಂದು ಮೊಳಗಿದರು. ಪುನಃ ಕರ್ತನ ಬಳಿಗೆ ಹಿಂದಿರುಗಿ ಬಂದರು.

ದೇವಜನರೇ, ಯಾವಾಗಲೂ ನೀವು ಆಸಕ್ತಿಯಿಂದ ಪ್ರಾರ್ಥಿಸಿರಿ. ಉತ್ತರ ಸಿಗುವವರೆಗೂ ಪ್ರಾರ್ಥಿಸಿರಿ.

*ನೆನಪಿಗೆ : "ನಾನು ಆತ್ಮದಿಂದ ಪ್ರಾರ್ಥಿಸುವೆನು, ಬುದ್ಧಿಯಿಂದಲೂ ಪ್ರಾರ್ಥಿಸುವೆನು; ಆತ್ಮದಿಂದ ಹಾಡುವೆನು, ಬುದ್ಧಿಯಿಂದಲೂ ಹಾಡುವೆನು" (1 ಕೊರಿಂಥ. 14:15).*

ಜನವರಿ 15

## ಅಧಿಕಾರದಿಂದ ಪ್ರಾರ್ಥಿಸಿರಿ!

ಬೆಳಿಗ್ಗೆ : ಆದಿ. 36,37,38
ಸಂಜೆ : ಮತ್ತಾ. 10:24–42

"ಆಗ ಯೇಸು ಹತ್ತಿರ ಬಂದು – ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ" ಅಂದನು (ಮತ್ತಾಯ. 28:18).

ನೀವು ದೇವರ ಮಕ್ಕಳಾಗಿರುವದಾದರೆ, ಕರ್ತನ ಬಳಿ ಬಾಧ್ಯತೆಯಿಂದ ಕೇಳಲು ಸಾಧ್ಯವಾಗುವದು. ದೆವ್ವಗಳಿಗೆ ಅಧಿಕಾರದಿಂದ ಆಜ್ಞಾಪಿಸಿ ಓಡಿಸಬಹುದು. ನೀವು ಬಲವಾಗಿ ಪ್ರಾರ್ಥಿಸಲು ಪ್ರಾರಂಭಿಸುವ ಮೊದಲು, ಕರ್ತನು ನಿಮಗೆ ಕೊಟ್ಟಿರುವ ಅಧಿಕಾರವೇನೆಂಬುದನ್ನು ತಿಳಿದುಕೊಳ್ಳಿರಿ.

ಕರ್ತನು ನಿಮಗೆ ಏಳು ಅಧಿಕಾರಗಳನ್ನು ಕೊಟ್ಟಿರುವನು. ಮೊದಲನೆಯದು, ದೇವರ ಮಕ್ಕಳಾಗುವ ಅಧಿಕಾರ (ಯೋಹಾನ. 1:12). ಆತನು ವಾಗ್ದಾನ ಮಾಡಿ ಹೇಳುತ್ತಾನೆ "ನಾನು ನಿಮಗೆ ತಂದೆಯಾಗಿರುವೆನು, ನೀವು ನನಗೆ ಕುಮಾರ ಕುಮಾರಿಯರು ಆಗಿರುವಿರೆಂದು" (2ಕೊರಿಂ.6:18). ಆದ್ದರಿಂದ ನೀವು ಅಧಿಕಾರದೊಂದಿಗೆ ಕೇಳಿರಿ. ಅಧಿಕಾರವುಳ್ಳವರಾಗಿ ಬಾಳಿರಿ. ಎರಡನೆಯದಾಗಿ, ಅಶುದ್ಧಾತ್ಮಗಳನ್ನು ಓಡಿಸುವ ಅಧಿಕಾರ ನಿಮಗುಂಟು. ಮೂರನೆಯದಾಗಿ ವ್ಯಾಧಿಗಳನ್ನು ಗುಣಪಡಿಸುವ ಅಧಿಕಾರ ನಿಮಗುಂಟು. ನಾಲ್ಕನೆಯದಾಗಿ ಅಶುದ್ಧಾತ್ಮಗಳ ಕ್ರಿಯೆಗಳನ್ನು ಕಟ್ಟಿಹಾಕುವ ಅಧಿಕಾರ ನಿಮಗುಂಟು. ಐದನೆಯದಾಗಿ ಕಟ್ಟಲ್ಪಟ್ಟ ಕಟ್ಟುಗಳನ್ನು ಬಿಚ್ಚುವ ಅಧಿಕಾರ ನಿಮಗುಂಟು. ಆರನೆಯದಾಗಿ ಪ್ರಕೃತಿಯ ಮೇಲೆ ಅಧಿಕಾರ, ಏಳನೆಯದಾಗಿ ಮರಣದ ಮೇಲೆ ಅಧಿಕಾರ. ಸತ್ತವರನ್ನು ಬದುಕಿಸಿರಿ (ಮತ್ತಾ. 10:8) ಎಂದು ಕ್ರಿಸ್ತನು ಹೇಳುವನು. ಈ ಎಲ್ಲಾ ಅಧಿಕಾರಗಳನ್ನು ನೀವು ಯೇಸುಕ್ರಿಸ್ತನ ಹೆಸರಿನಲ್ಲಿ ಮಹಿಮೆಯಾಗಿ ಉಪಯೋಗಿಸಿರಿ. ದೇವರು ಆತನನ್ನು (ಯೇಸುಕ್ರಿಸ್ತ) ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ. ಆದುದರಿಂದ ಸ್ವರ್ಗ ಮರ್ತ್ಯ ಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಆತನನ್ನು ಒಡೆಯನೆಂದು ಪ್ರತಿಜ್ಞೆ ಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು" (ಫಿಲಿ. 2:9–11) ಎಂದು ಸತ್ಯವೇದ ಹೇಳುತ್ತದೆ.

ದೇವಜನರೇ, ಅಧಿಕಾರವುಳ್ಳವರಾಗಿ ಬಾಳಿರಿ. ಅಧಿಕಾರವುಳ್ಳವರಾಗಿ ಪ್ರಾರ್ಥಿಸಿರಿ. ಅಧಿಕಾರವುಳ್ಳವರಾಗಿ ಆಶುದ್ಧಾತ್ಮಕ್ಕೆ ಆಜ್ಞಾಪಿಸುವಾಗ, ಅವನು ಬಿಟ್ಟುಹೋಗಲೇಬೇಕು. ಆಗ ಕರ್ತನು ನಿಮ್ಮಲ್ಲಿ ಮಹಿಮೆ ಹೊಂದುವನು.

*ನೆನಪಿಗೆ : ನಾನು ಜಯಹೊಂದಿ ನನ್ನ ತಂದೆಯೊಡನೆ ಸಿಂಹಾಸನದಲ್ಲಿ ಕುಳಿತುಕೊಂಡೆನು. ಹಾಗೆಯೇ ಜಯಹೊಂದುವವನನ್ನು ನನ್ನೊಡನೆ ಸಿಂಹಾಸನದಲ್ಲಿ ಕುಳಿತುಕೊಳ್ಳುವಂತೆ ಮಾಡುವೆನು (ಪ್ರಕ. 3:21).*



ಜನವರಿ 16

## ಕಣ್ಣೀರಿನ ತಗ್ಗು!

ಬೆಳಿಗ್ಗೆ : ಆದಿ. 39, 40
ಸಂಜೆ : ಮತ್ತಾ. 11

"ಕಣ್ಣೀರಿನ ತಗ್ಗನ್ನು ದಾಟುವಾಗ, ಅಲ್ಲಿ ಒರತೆಗಳನ್ನು ತೋಡಿ ನೀರಿನ ಸ್ಥಳವಾಗಮಾಡುತ್ತಾರೆ. ಮುಂಗಾರು ಮಳೆಯು ಅದನ್ನು ಸಮೃದ್ಧಿಗೊಳಿಸುತ್ತದೆ" (ಕೀರ್ತನೆ. 84:6).

ಇಸ್ರಾಯೇಲ್ ದೇಶ ಬೆಟ್ಟಗಳೂ ತಗ್ಗುಗಳೂ ಇರುವ ದೇಶ. ಅಲ್ಲಿರುವ ಕಿದ್ರೋನ್ ಹಳ್ಳವನ್ನು ಕಣ್ಣೀರಿನ ತಗ್ಗು ಎಂದು ಕರೆಯುವರು. ಬೇಡದ ಕಸವನ್ನು ಅಲ್ಲಿ ಹಾಕಿ ಬೆಂಕಿ ಹಚ್ಚಿ ಉರಿಸುವಾಗ, ಅದರಿಂದ ಬರುವ ಹೊಗೆ ಕಣ್ಣುಗಳಲ್ಲಿ ನೀರು ತರಿಸುವದು. ಇನ್ನು ಕೆಲವರು ಕಣ್ಣೀರಿನ ತಗ್ಗು ಎಂಬುದು "ದಾಹದ ತಗ್ಗು" ಎಂದು ಒಂದು ಸ್ಥಳವನ್ನು ಸೂಚಿಸುವರು. ಅದು ಸಂಕಷ್ಟದ ತಗ್ಗು ಅಲ್ಲಿ ಮುಳ್ಳುಗಿಡಗಳು ಹೇರಳವಾಗಿ ಬೆಳೆಯುವದರಿಂದ ಅದು ಒಂದು "ಶಾಪದ ತಗ್ಗು" ಎಂದು ಹೇಳುವರು.

ನಮ್ಮ ಈ ಪ್ರಪಂಚದ ಜೀವಿತದಲ್ಲೂ, ಆತ್ಮೀಕ ಜೀವಿತದಲ್ಲೂ ಏರುಪೇರುಗಳು ಬಂದೇ ಬರುವವು. ಕೆಲವು ದಿನಗಳು, ಬೆಟ್ಟದ ತುದಿಯಲ್ಲಿ ದೇವಪ್ರಸನ್ನತೆಯಲ್ಲಿ ಆನಂದಿಸುತ್ತೇವೆ. ಕೆಲವು ವೇಳೆಗಳಲ್ಲಿ ಪಾತಾಳದಲ್ಲಿ ಇರುವಂಥ ಸ್ಥಿತಿಯಲ್ಲಿರುತ್ತೇವೆ. ಸಂತೋಷವೂ, ದುಃಖವೂ ಒಂದರ ಹಿಂದೆ ಒಂದರಂತೆ ಬರುವವು. ಜೀವನದಲ್ಲಿ ಕಣ್ಣೀರಿನ ತಗ್ಗನ್ನು ದಾಟುವಂಥ ಪರಿಸ್ಥಿತಿ ಒದಗಿದಾಗ, ಧೈರ್ಯಗೆಟ್ಟು ಸೋತುಹೋಗದಿರಿ. ಕರ್ತನ ಕೃಪೆಯೊಂದಿಗೆ ಕಣ್ಣೀರಿನ ತಗ್ಗಿನಲ್ಲಿ ನಡೆದುಹೋಗುವಾಗ, ಅಲ್ಲಿ ಕರ್ತನು, ನಿಮಗಾಗಿ ಒಂದು ನೀರಿನ ಬುಗ್ಗೆಯನ್ನು ಸಿದ್ಧಪಡಿಸಿ ಇಟ್ಟಿರುವದನ್ನು ಕಾಣುವಿರಿ. "ನೀವು ರಕ್ಷಣೆಯೆಂಬ ಬಾವಿಗಳಿಂದ ನೀರನ್ನು ಉಲ್ಲಾಸದೊಡನೆ ಸೇದುವಿರಿ" (ಯೆಶಾ.12:3) ಎಂಬುದು ಕರ್ತನ ವಾಗ್ದಾನವಾಗಿದೆ. ಕಹಿಯಾದ ಮಾರಾವನ್ನು ಇಸ್ರಾಯೇಲ್ಯರು ದಾಟಿಹೋದ ಮೇಲೆ ಎಲೀಮಿಗೆ ಬಂದರು. ಅಲ್ಲಿ ಹನ್ನೆರಡು ನೀರಿನ ಬುಗ್ಗೆಗಳೂ, ಎಪ್ಪತ್ತು ಖರ್ಜೂರದ ಮರಗಳಿದ್ದವು. ಎಷ್ಟೊಂದು ಸಂತೋಷ! ಯೇಸುಕ್ರಿಸ್ತನು ಕಣ್ಣೀರಿನ ತಗ್ಗಿನಂತಿದ್ದ ಗೆತ್ಸೇಮನೆ ತೋಟವನ್ನೂ, ಕಲ್ವಾರಿ ಶಿಲುಬೆಯನ್ನು ದಾಟಿಹೋಗಲೇಬೇಕಿತ್ತು. ಆಗ ಅನೇಕ ಜನರನ್ನು ದೇವಮಹಿಮೆಯೊಳಗೆ ಸೇರಿಸುವ ಸಂತೋಷದ ನೀರಿನ ಬುಗ್ಗೆಯನ್ನು ಆತನು ಕಂಡನು (ಇಬ್ರಿ.2:10).

ದೇವಜನರೇ, ನಿಮ್ಮ ಕಣ್ಣುಗಳು ನೀರಿನ ಬುಗ್ಗೆಗಳನ್ನೂ, ಮಳೆಯನ್ನೂ ನಿರೀಕ್ಷಿಸಲಿ. ಆ ಮಳೆ ಪವಿತ್ರಾತ್ಮನ ಮುಂಗಾರಿನ ಮಳೆ ಮನುಷ್ಯರೆಲ್ಲರ ಮೇಲೆ ಇಳಿದುಬರುವ ಮಳೆ. ಅದು ಕೃಪೆಯ ಆತ್ಮವನ್ನೂ ವಿಜ್ಞಾಪಿಸುವ ಆತ್ಮವನ್ನೂ ನಿಮ್ಮೊಳಗೆ ತಂದು ಪ್ರಾರ್ಥನೆಯ ಆತ್ಮದಿಂದ ತುಂಬುವದು.

*ನೆನಪಿಗೆ : "ನೀವು ತಂಪಾದ ತೋಟಕ್ಕೂ ನೀರಿಗೆ ಮೋಸವಿಲ್ಲದ ಬುಗ್ಗೆಗೂ ಸಮಾನವಾಗುವಿರಿ" (ಯೆಶಾ. 58:11).*

ಜನವರಿ 17

## ಮೂರು ವೇಳೆ ಪ್ರಾರ್ಥನೆ!

ಬೆಳಿಗ್ಗೆ : ಆದಿ. 41, 42
ಸಂಜೆ : ಮತ್ತಾ. 12:1–21

“ದಾನಿಯೇಲನೋ, ತನ್ನ ಮಹಡಿಯ ಕೋಣೆಯಲ್ಲಿ ಯಥಾಪ್ರಕಾರ ದಿನಕ್ಕೆ ಮೂರಾವರ್ತಿ ಮೊಣಕಾಲೂರಿ ತನ್ನ ದೇವರಿಗೆ ಪ್ರಾರ್ಥನೆ ಮಾಡಿ ಸ್ತೋತ್ರ ಸಲ್ಲಿಸಿದನು” (ದಾನಿ. 6:10).

ದಾನಿಯೇಲನು, ಬ್ಯಾಬಿಲೋನ್ ದೇಶದಲ್ಲಿ ಬಹುದೊಡ್ಡ ಪದವಿಯಲ್ಲಿದ್ದರೂ, ತನಗೆ ನಿರ್ದಿಷ್ಟವಾದ ಪ್ರಾರ್ಥನಾ ವೇಳೆಯನ್ನು ಇರಿಸಿಕೊಂಡಿದ್ದನು. ಅದನ್ನು ಕ್ರಮವಾಗಿ ಅನುಸರಿಸುತ್ತಾ ಬಂದನು. ರಾಜನನ್ನು ಹೊರತು ಬೇರೆ ಯಾವ ದೇವರಿಗೇ ಆಗಲಿ ಮನುಷ್ಯನಿಗಾಗಲಿ ಪ್ರಾರ್ಥನೆ ವಿಜ್ಞಾಪನೆಗಳನ್ನು ಮಾಡಬಾರದೆಂದು ರಾಜಾಜ್ಞೆ ಬ್ಯಾಬಿಲೋನಿನಲ್ಲಿ ಬಂದರೂ ಸಹ ಆತನು ಕರ್ತನನ್ನೇ ಪ್ರಾರ್ಥಿಸುವದನ್ನು ಮುಂದುವರೆಸಿದನು.

ದಾನಿಯೇಲನು ದಿನಕ್ಕೆ ಮೂರಾವರ್ತಿ ಪ್ರಾರ್ಥಿಸಲು ಕಾರಣವೇನು? ಇಸ್ರಾಯೇಲ್ಯರ ಮೂಲಪಿತೃಗಳಾದ ಅಬ್ರಹಾಮ, ಇಸಾಕ, ಯಾಕೋಬರು. ಇವರಲ್ಲಿ ಅಬ್ರಹಾಮನ ಪ್ರಾರ್ಥನಾ ವೇಳೆ ಬೆಳಗಿನ ಸಮಯ (ಆದಿ. 19:27). ಇಸಾಕನ ಧ್ಯಾನದ ವೇಳೆ ಸಂಜೆಯ ಸಮಯ (ಆದಿ.24:63). ಯಾಕೋಬನು ಕರ್ತನೊಂದಿಗೆ ಹೋರಾಡಿ ಪ್ರಾರ್ಥಿಸಿದ್ದು ರಾತ್ರಿಯ ಸಮಯ (ಆದಿ.32:24). ಆದ್ದರಿಂದ, ದಾನಿಯೇಲನು ಮೂಲಪಿತೃಗಳ ಪ್ರಾರ್ಥನಾ ಸಮಯಗಳನ್ನು ತನ್ನ ಪ್ರಾರ್ಥನಾ ಸಮಯವನ್ನಾಗಿಸಿಕೊಂಡು ಮೂಲಪಿತೃಗಳ ಆಶೀರ್ವಾದಗಳಿಗೆ ಬಾಧ್ಯಸ್ಥನಾದನು. ದಾವೀದನ ರಾಜ್ಯಭಾರ ನಡೆಸುವದರಲ್ಲಿ ಅಷ್ಟೊಂದು ಜವಾಬ್ದಾರಿ ಇದ್ದರೂ ಆತನೂ ದಿನಕ್ಕೆ ಮೂರಾವರ್ತಿ ಪ್ರಾರ್ಥಿಸುತ್ತಾ ಬಂದನು. ಅಷ್ಟೊಂದು ಜವಾಬ್ದಾರಿ ಉಳ್ಳವನಿಗೆ ದಿನಕ್ಕೆ ಮೂರು ವೇಳೆ ಪ್ರಾರ್ಥಿಸಲು ಸಾಧ್ಯವಿರುವಾಗ ಸಾಮಾನ್ಯರಾದ ನಾವು ಸಮಯವಿಲ್ಲವೆಂದು ಹೇಗೆ ನೆವ ಹೇಳಲು ಸಾಧ್ಯ? ದಾವೀದನು ತನ್ನ ಅನುಭವದಿಂದ ತ್ರಿಕಾಲದಲ್ಲಿಯೂ ಹಂಬಲಿಸುತ್ತಾ ಮೊರೆಯಿಡುವೆನು (ಕೀರ್ತ. 55:17) ಎಂದು ಹೇಳುತ್ತಾನೆ. ಯೇಸುಕ್ರಿಸ್ತನೂ ಸಹ ದಿನಕ್ಕೆ ಮೂರು ವೇಳೆ ಪ್ರಾರ್ಥಿಸುತ್ತಿದ್ದನು. ಆತನು ಮುಂಜಾನೆ ಇನ್ನು ಮೊಬ್ಬಿರುವಾಗ ಪ್ರಾರ್ಥಿಸಿದನು (ಮಾರ್ಕ.1:35). ರಾತ್ರಿಯಲ್ಲೂ ಪ್ರಾರ್ಥಿಸಿದನು (ಲೂಕ. 6:12). ಮಧ್ಯಾಹ್ನದಲ್ಲೂ ಪ್ರಾರ್ಥಿಸಿದನು. ದಿನವೆಲ್ಲಾ ಸೇವೆಯಲ್ಲಿ ಆತನು ತೊಡಗಿದ್ದರೂ ಪ್ರಾರ್ಥನೆಯನ್ನು ಕ್ರಮವಾಗಿ ಮಾಡುತ್ತಿದ್ದನು.

ದೇವಮಕ್ಕಳೇ, ನಿಮಗೆ ಒಂದು ನಿರ್ದಿಷ್ಟವಾದ ಪ್ರಾರ್ಥನಾ ವೇಳೆಯನ್ನು ಗೊತ್ತುಪಡಿಸಿಕೊಳ್ಳಿರಿ. ಕ್ರಮವಾಗಿ ಪ್ರಾರ್ಥಿಸಿರಿ.

*ನೆನಪಿಗೆ : ದೇವರೇ, ನೀನೇ ನನ್ನ ದೇವರು; ನಾನು ನಿನ್ನ ದರ್ಶನವನ್ನು ಕುತೂಹಲದಿಂದ ಎದುರುನೋಡುತ್ತೇನೆ. ನೀರಿಲ್ಲದೆ ಒಣಗಿದ ಭೂಮಿಯಲ್ಲಿದ್ದವನು, ನೀರಿಗಾಗಿಯೊ ಎಂಬಂತೆ ನನ್ನ ಆತ್ಮವು ನಿನಗಾಗಿ ಆತುರಗೊಳ್ಳುತ್ತದೆ (ಕೀರ್ತ. 63:1).*



ಜನವರಿ 18

## ಪ್ರಾರ್ಥನೆಗೆ ತಡೆಗಳು!

ಬೆಳಿಗ್ಗೆ : ಆದಿ. 43,44,45
ಸಂಜೆ : ಮತ್ತಾ. 12:22–50

“ಸ್ವಲ್ಪವೂ ಸಂದೇಹ ಪಡದೆ ನಂಬಿಕೆಯಿಟ್ಟು ಕೇಳಿಕೊಳ್ಳಬೇಕು. ಸಂದೇಹ ಪಡುವವನೋ ಗಾಳಿಯಿಂದ ಬಡಿಯಲ್ಪಟ್ಟ ಸಮುದ್ರದ ತೆರೆಯಂತೆ ಅಲೆಯುತ್ತಿರುವನು. ಆ ಮನುಷ್ಯನು ತಾನು ಕರ್ತನಿಂದ ಏನಾದರೂ ಹೊಂದುವೆನೆಂದು ಭಾವಿಸದೆ ಇರಲಿ” (ಯಾಕೋಬ 1:6,7).

ಒಂದು ಕೆರೆಯಲ್ಲಿ ನೀರು ಪೂರ್ಣವಾಗಿ ತುಂಬಿತ್ತು. ಆದರೆ ಪಕ್ಕದಲ್ಲಿದ್ದ ಗದ್ದೆಯಲ್ಲಿದ್ದ ಪೈರುಗಳೆಲ್ಲಾ ನೀರಿಲ್ಲದೆ ಬಾಡಿಹೋಗಿದ್ದವು. ಅದಕ್ಕೆ ಕಾರಣವನ್ನು ತಿಳಿಯಲು ಒಬ್ಬರು ಕೆರೆಯೊಳಗೆ ಧುಮುಕಿ ಆಳಕ್ಕೆ ಈಜುತ್ತಾ ಹೋದರು. ಕೊನೆಯಲ್ಲಿ ನೀರು ಕೆರೆಯಿಂದ ಕಾಲುವೆಗೆ ಹೋಗುವ ದ್ವಾರ ಚಿಂದಿ ಬಟ್ಟೆಗಳು, ಮರದ ಎಲೆಗಳು ಹೋಗಿ ಮುಚ್ಚಿಹೋಗಿರುವದನ್ನು ಕಂಡರು. ಅವುಗಳನ್ನು ತೆಗೆದ ಮೇಲೆ ನೀರು ಕಾಲುವೆಯೊಳಗೆ ಸರಾಗವಾಗಿ ಹರಿಯಲಾರಂಭಿಸಿತು. ಗದ್ದೆಯೊಳಗೆ ನೀರು ಹಾದುಹೋಯಿತು.

ಆ ಕೆರೆ ನೀರಿನಿಂದ ತುಂಬಿ ಇದ್ದಂತೆ, ಕರ್ತನ ಬಳಿ ಹೇರಳವಾದ ಆಶೀರ್ವಾದಗಳೂ, ವಾಗ್ದಾನಗಳೂ, ಬಲ ಮಹಿಮೆಯೂ ತುಂಬಿರುವದು. ಅವುಗಳನ್ನು ನೀವು ಪ್ರಾರ್ಥನೆ ಎಂಬ ಕಾಲುವೆಯ ಮೂಲಕವಾಗಿ ನಿಮ್ಮ ಜೀವಿತಕ್ಕೂ ಇತರರಿಗೂ ತರಲು ಸಾಧ್ಯ. ಆದರೆ, ಅದಕ್ಕೆ ಮೊದಲು ಪ್ರಾರ್ಥನಾ ತಡೆಗಳನ್ನು ಹೋಗಲಾಡಿಸುವಂತೆ ನೀವು ದೃಢವಾದ ತೀರ್ಮಾನ ತೆಗೆದುಕೊಳ್ಳಬೇಕು. ಪ್ರತಿಯೊಬ್ಬರ ಪ್ರಾರ್ಥನೆಯನ್ನೂ ದೇವರು ಕೇಳುವಾತನಾಗಿದ್ದಾನೆ. ಸೈತಾನನಿಗೆ ನಿಮ್ಮ ಪ್ರಾರ್ಥನೆಯನ್ನು ತಡೆಯಲು ಸಾಧ್ಯವಿಲ್ಲ. ನೀವು ಕರ್ತನ ಮಕ್ಕಳಾಗಿರುವಿರಿ. ಆದರೆ ನಿಮ್ಮೊಳಗಿನ ಅಪನಂಬಿಕೆ, ಸಂದೇಹ, ಸೋಮಾರಿತನ ಪ್ರಾರ್ಥನೆಯನ್ನು ತಡೆದು ಬಿಡುವದು. ಆದ್ದರಿಂದ ನೀವು ಪ್ರಾರ್ಥಿಸುವಾಗ, ಸಂದೇಹದೊಂದಿಗೆ ಪ್ರಾರ್ಥಿಸದೆ; ನಂಬಿಕೆಯಿಂದ ಪ್ರಾರ್ಥಿಸಬೇಕು. ಅಪನಂಬಿಕೆಯನ್ನು ದೇವರು ಸಹಿಸುವದಿಲ್ಲ. ದೇವರ ಬಳಿಗೆ ಬರುವವನು ದೇವರು ಇದ್ದಾನೆ ಮತ್ತು ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವದು ಅವಶ್ಯ (ಇಬ್ರಿ. 11:6).

ದೇವಜನರೇ, ನೀವು ನಂಬಿಕೆಯಿಂದ ಪ್ರಾರ್ಥನೆಯಲ್ಲಿ ಏನೇನು ಬೇಡಿಕೊಳ್ಳುವಿರೋ, ಅವೆಲ್ಲವನ್ನೂ ಪಡೆಯುವಿರಿ (ಮಾರ್ಕ. 11:24) ಎಂದು ಕರ್ತನು ಹೇಳಿರುವನು. “ನಂಬಿಕೆಯಿಂದ ಪ್ರಾರ್ಥಿಸಿರಿ. ನಿಮ್ಮೊಳಗೆ ನಂಬಿಕೆ ಹೆಚ್ಚಬೇಕಾದರೆ ಸತ್ಯವೇದವನ್ನು ದಾಹದಿಂದ ಓದಿರಿ. ಕೇಳಿರಿ, ಕೊಡಲ್ಪಡುವದು. ತಟ್ಟಿರಿ, ತೆರೆಯಲ್ಪಡುವದು. ಹುಡುಕಿರಿ, ಸಿಗುವದು.” (ಮತ್ತಾ. 7:7).

*ನೆನಪಿಗೆ : “ನನ್ನ ದ್ವಾರಗಳ ಬಳಿಯಲ್ಲಿ ಪ್ರತಿದಿನವೂ ಕಾಯುತ್ತಾ ಬಾಗಿಲಿನ ನಿಲವುಗಳ ಹತ್ತಿರ ಜಾಗರೂಕನಾಗಿ ನನ್ನ ಮಾತುಗಳನ್ನು ಕೇಳುವವನು ಭಾಗ್ಯವಂತನು” (ಜ್ಞಾನೋ. 8:34).*

ಜನವರಿ 19

## ಉತ್ಸಾಹದ ಆತ್ಮ!

ಬೆಳಿಗ್ಗೆ : ಆದಿ. 46,47,48
ಸಂಜೆ : ಮತ್ತಾ. 13:1–30

"ನಿನ್ನ ರಕ್ಷಣಾನಂದವನ್ನು ನಾನು ತಿರುಗಿ ಅನುಭವಿಸುವಂತೆ ಮಾಡು; ನನ್ನಲ್ಲಿ ಸಿದ್ಧ ಮನಸ್ಸನ್ನು ಹುಟ್ಟಿಸಿ ನನಗೆ ಆಧಾರನಾಗು" (ಕೀರ್ತ. 51:12).

ದೇವಮಕ್ಕಳಿಗೆ ದೇವಸಮ್ಮುಖಕ್ಕೆ ಬರುವಾಗ ಉತ್ಸಾಹದ ಅಥವಾ ಚೈತನ್ಯದ ಆತ್ಮ ಅಗತ್ಯವಾದದ್ದು. ಕರ್ತನಿಗೆ ಕಾಣಿಕೆ ಕೊಡುವದರಲ್ಲಾಗಲಿ, ದೇವ ಸೇವೆ ಮಾಡುವದರಲ್ಲಾಗಲಿ, ಪೂರ್ಣಬಲದಿಂದ ಉತ್ಸಾಹದಿಂದ ಮಾಡಬೇಕು. ಅದರಂತೆಯೇ ಉತ್ಸಾಹದಿಂದ ಪ್ರಾರ್ಥಿಸಿರಿ.

ಉತ್ಸಾಹವನ್ನು ಕಳೆದುಕೊಳ್ಳುವಂತೆ ಮಾಡುವದು ಪಾಪವೂ, ಅಕ್ರಮವೂ ಆಗಿದೆ. ಇದರ ಫಲವಾಗಿ ಮನಸ್ಸಾಕ್ಷಿ ಬಾಧಿಸುವದರಿಂದ, ಆತ್ಮೀಕ ಜೀವಿತದಲ್ಲಿ ಉತ್ಸಾಹ ಕಳೆದುಕೊಂಡು ಗಾಳಿ ಹೋದ ಬಲೂನಿನಂತೆ ಕಾಣಲ್ಪಡುವರು. ಪಾಪವನ್ನು ತೊರೆದು ದೇವ ಪ್ರೀತಿಯಿಂದ ತುಂಬುವಾಗ, ಕಳೆದುಕೊಂಡ ಉತ್ಸಾಹವನ್ನು ಪುನಃ ಪಡೆಯಲು ಸಾಧ್ಯ. ಕೆಲವು ವಯಸ್ಸಾದವರ ಉತ್ಸಾಹ ನಮ್ಮ ಆಂತರ್ಯವನ್ನು ಮುಟ್ಟುವದು. ಭಕ್ತನಾದ ಕಾಲೇಬನು 85 ವರ್ಷದವನಾಗಿದ್ದರೂ ಬಯಲು ಸೀಮೆಯಲ್ಲಿ ವಿಶ್ರಾಂತಿ ತೆಗೆದುಕೊಳ್ಳಲು ಬಯಸಲಿಲ್ಲ. ಅವನು ಯೆಹೋಶುವನನ್ನು ನೋಡಿ "ಈಗ ನಾನು ಎಂಬತ್ತೈದು ವರುಷದವನಾಗಿದ್ದೇನೆ, ಮೋಶೆಯು ನನ್ನನ್ನು ಕಳುಹಿಸಿದಾಗ ನನಗೆಷ್ಟು ಬಲವಿತ್ತೋ ಈಗಲೂ ಅಷ್ಟೇ ಬಲವಿದೆ. ಯುದ್ಧ ಮಾಡುವದಕ್ಕೂ, ವಿಶೇಷ ಕಾರ್ಯಗಳನ್ನು ನಿರ್ವಹಿಸುವದಕ್ಕೂ ನನಗೆ ಮೊದಲಿನಂತೆಯೇ ಶಕ್ತಿಯಿರುತ್ತದೆ. ಆದ್ದರಿಂದ ಯೆಹೋವನು ಆ ದಿನದಲ್ಲಿ ಸೂಚಿಸಿದಂಥ ಪರ್ವತ ಪ್ರದೇಶವನ್ನು ನನಗೆ ಕೊಡು. ಯೆಹೋವನು ಅವರೆಲ್ಲರನ್ನೂ ಓಡಿಸಲು ತನ್ನ ಮಾತಿಗನುಸಾರವಾಗಿ ಸಹಾಯ ಮಾಡುವನು" ಅಂದನು (ಯೆಹೋಶುವ 14:10–12). ಹಾಗೆಯೇ ಕಾಲೇಬನು ಹೆಬ್ರೋನನ್ನು ತನ್ನ ಸ್ವಾಸ್ತ್ಯವಾಗಿ ಪಡೆದುಕೊಂಡನು.

ದೇವಜನರೇ, ವಯಸ್ಸಾಗಿ ಹೋಯಿತೆಂದು ನಿಮ್ಮ ಪ್ರಾರ್ಥನೆಯು ಕಡಿಮೆಯಾಗದಿರಲಿ. ನೀವು ಉತ್ಸಾಹದ ಆತ್ಮದಿಂದ ಪ್ರಾರ್ಥಿಸಿದರೆ ನೀವು ಇರುವ ಸ್ಥಳ ದೇಶಗಳು ಕದಲುವವು. ಹನ್ನಳು ತನಗೆ 84 ವರುಷಗಳಾದಾಗಲೂ ಉತ್ಸಾಹದಿಂದ ಪ್ರಾರ್ಥಿಸಿ ಆರಾಧನೆ ಮಾಡುತ್ತಿದ್ದಳು (ಲೂಕ. 2:36–37). ಸೇವೆಯಲ್ಲಿ ನಿಮಗೆ ಉತ್ಸಾಹ ಅಗತ್ಯ. ದೇವರು ನಿಮಗೆ ಕೊಟ್ಟ ಮಂದೆಯನ್ನು ಕಾಯಿರಿ. ಬಲಾತ್ಕಾರದಿಂದಲ್ಲ, ದೇವರ ಚಿತ್ತಾನುಸಾರ, ಮನಃಪೂರ್ವಕವಾಗಿ ಮೇಲ್ವಿಚಾರಣೆ ಮಾಡಿರಿ (1 ಪೇತ್ರ. 5:2). ನಿಮ್ಮಲ್ಲಿ ಉತ್ಸಾಹ ಕಡಿಮೆಯಾಗಿದೆಯೆಂದು ತಿಳಿಯುವಾಗ, ಕರ್ತನು ನಿಮಗೆ ಕೊಟ್ಟಿರುವ ಅಭಿಷೇಕವನ್ನು ಆತ್ಮನ ವರಗಳನ್ನು ತಟ್ಟಿ ಎಬ್ಬಿಸಿರಿ. ಜೀವಂತಸಾಕ್ಷಿಗಳನ್ನು ಕೇಳಿರಿ. ನಿಮ್ಮನ್ನು ಚೈತನ್ಯಗೊಳಿಸುವ ಸೇವಕರಿಂದ ಅನ್ಯೋನ್ಯತೆ ಪಡೆಯಿರಿ.

*ನೆನಪಿಗೆ : "ಶೋಧನೆಗೆ ಒಳಗಾಗದಂತೆ ಎಚ್ಚರವಾಗಿದ್ದು ಪ್ರಾರ್ಥಿಸಿರಿ. ಮನಸ್ಸು ಸಿದ್ಧವಾಗಿದೆ ಸರಿ, ಆದರೆ ದೇಹಕ್ಕೆ ಬಲ ಸಾಲದು" ಅಂದನು (ಮತ್ತಾ. 26:41).*



ಜನವರಿ 20

## ಪ್ರಾರ್ಥನೆಯಲ್ಲಿ ಏಳು ಭಾಗಗಳು!

ಬೆಳಿಗ್ಗೆ : ಆದಿ. 49, 50
ಸಂಜೆ : ಮತ್ತಾ. 13:31–58

"ಸೊಲೊಮೋನನು ಪ್ರಾರ್ಥಿಸುವದನ್ನು ಮುಗಿಸಿದ ಕೂಡಲೆ ಆಕಾಶದಿಂದ ಬೆಂಕಿಬಿದ್ದಿತು. ಯೆಹೋವನ ತೇಜಸ್ಸು ಆಲಯವನ್ನು ತುಂಬಿಕೊಂಡಿತು" (2 ಪೂ.ವೃ. 7:1).

ಸತ್ಯವೇದದಲ್ಲಿರುವ ಉತ್ತಮವಾದ ಪ್ರಾರ್ಥನೆಗಳಲ್ಲಿ ಸೊಲೊಮೋನನು ಮಾಡಿದ ಪ್ರಾರ್ಥನೆಯೂ ಒಂದು. ಅವನು ಪ್ರಾರ್ಥಿಸುವದನ್ನು ಮುಗಿಸಿದ ಕೂಡಲೆ ಒಂದು ಕಡೆ ಅಗ್ನಿಯೂ ಇನ್ನೊಂದೆಡೆ ಯೆಹೋವನ ತೇಜಸ್ಸು ಆಲಯವನ್ನು ತುಂಬಿಕೊಂಡಿತು. ಇಲ್ಲಿ ಸೊಲೊಮೋನನು ಪ್ರಾರ್ಥಿಸಿದ ಏಳು ಮುಖ್ಯವಾದ ಭಾಗಗಳನ್ನು ಕಾಣಬಹುದು.

1. ಅವರು ಒಟ್ಟಾಗಿ ತುತೂರಿಗಳನ್ನು ಊದುತ್ತಾ ಕರ್ತನನ್ನು ಸ್ತುತಿಸಿದರು (2 ಪೂ.ವೃ.5:13). ಸ್ತುತಿಯೊಂದಿಗೆ ದೇವಾಲಯದ ಪ್ರತಿಷ್ಠೆ ಪ್ರಾರಂಭವಾಯಿತು. ಯಾವಾಗಲೂ ನೀವು ಕರ್ತನ ಸನ್ನಿಧಾನಕ್ಕೆ ಬರುವಾಗ ಕೃತಜ್ಞತಾಸ್ತುತಿಯೊಡನೆ ಆತನ ಮಂದಿರ ದ್ವಾರಗಳಿಗೂ, ಕೀರ್ತನೆಯೊಡನೆ ಆತನ ಅಂಗಳಗಳಿಗೂ ಬನ್ನಿರಿ (ಕೀರ್ತ. 100:4). 2. ಸೊಲೊಮೋನನು ಪ್ರಾರ್ಥಿಸುವದಕ್ಕೆ ಮೊದಲು ಅಲ್ಲಿ ನೆರೆದು ಬಂದಿದ್ದ ಇಸ್ರಾಯೇಲ್ ಸಮೂಹದವರನ್ನು ಆಶೀರ್ವದಿಸಿದನು (2 ಪೂ.ವೃ. 6:3). ಕರ್ತನು ಮನುಷ್ಯನನ್ನು ಸೃಷ್ಟಿಸಿದ ಕೂಡಲೆ ಮಾಡಿದ ಮೊದಲ ಕಾರ್ಯ ಮನುಷ್ಯನನ್ನು ಆಶೀರ್ವದಿಸಿದ್ದು (ಆದಿ.1:28). ನೀವು ಇತರರ ಮೇಲೆ ಕಹಿಯ ಭಾವನೆ, ಕೋಪ, ದ್ವೇಷದಿಂದ ಕೂಡಿದವರಾಗಿರುವದಾದರೆ ನಿಮ್ಮಿಂದ ಆಸಕ್ತಿಯಿಂದ ಪ್ರಾರ್ಥಿಸಲಾಗದು. ಇತರರನ್ನು ಆಶೀರ್ವದಿಸಲೂ ಸಾಧ್ಯವಾಗದು. 3.ಇಸ್ರಾಯೇಲ್ ದೇವರಾದ ಯೆಹೋವನಿಗೆ ಸ್ತೋತ್ರ (2 ಪೂ.ವೃ. 6:4) ಅಂದನು. ಸ್ತುತಿಸುವದು ಬೇರೆ, ಸ್ತೋತ್ರ ಮಾಡುವದು ಬೇರೆ. ಸ್ತುತಿಸುವದೆಂದರೆ ಕರ್ತನ ಗುಣಾತಿಶಯಗಳನ್ನು ಹೇಳಿ ಆರಾಧಿಸುವದು. ಸ್ತೋತ್ರವೆಂದರೆ ಆತನು ಮಾಡಿದ ಎಲ್ಲಾ ಉಪಕಾರಗಳನ್ನು ನೆನಸಿ ವಂದಿಸುವದು. ಆತನು ಮಾಡಿದ ಉಪಕಾರಗಳಿಗಾಗಿ ವಂದಿಸಿರಿ.

4. ಎಲ್ಲರ ಮುಂದೆ ಯಜ್ಞವೇದಿಯ ಬಳಿ ನಿಂತು ತನ್ನ ಕೈಗಳನ್ನು ಎತ್ತಿದನು" (2 ಪೂ.ವೃ.6:12). ಕೈಗಳನ್ನೆತ್ತುವದು ದೇವರ ಮುಂದೆ ಶರಣಾಗುವದನ್ನು ತಗ್ಗಿಸಿಕೊಳ್ಳುವದನ್ನು ಸೂಚಿಸುವದು. ಪ್ರಿಯರೇ, ತಾಳ್ಮೆಯುಳ್ಳವರಿಗೆ ದೀನತೆಯುಳ್ಳವರಿಗೆ ಕರ್ತನು ಕೃಪೆ ತೋರಿಸುವನು. 5. ಇಸ್ರಾಯೇಲ್ಯರಿಗಾಗಿ ಗೋಳಾಡಿ ಪ್ರಾರ್ಥಿಸಿದ್ದನ್ನು 2 ಪೂ.ವೃ. 6ನೇ ಅಧ್ಯಾಯದಲ್ಲಿ ನೋಡುತ್ತೇವೆ. ಇತರರಿಗಾಗಿ ಪ್ರಾರ್ಥಿಸಿರಿ. ಆಗ ನಿಮ್ಮ ಕಷ್ಟಗಳು ಪರಿಹಾರವಾಗುವವು. 6. ಸೊಲೊಮೋನನ ಪ್ರಾರ್ಥನೆಯ ಬಿನ್ನಹಗಳು ಆಂತರ್ಯವನ್ನು ಮುಟ್ಟುವಂತಿದೆ. ಒಳ್ಳೆಯ ಮನಸ್ಸಿನಿಂದ ಪ್ರಾರ್ಥಿಸಿರಿ. 7. ಸೊಲೊಮೋನನು ಕರ್ತನ ವಾಗ್ದಾನವನ್ನು ಹಿಡಿದು ಪ್ರಾರ್ಥಿಸಿದನು (2 ಪೂ.ವೃ. 6:42). ಕರ್ತನ ಬಳಿ ಸೊಲೊಮೋನನು ಮಾಡಿದ ಪ್ರಾರ್ಥನೆ ನಿಮಗೆ ಮಾದರಿಯಾಗಿರಲಿ.

*ನೆನಪಿಗೆ : "ಯೆಹೋವನು ಒಳ್ಳೆಯವನು. ಆತನ ಕೃಪೆಯು ಶಾಶ್ವತವಾಗಿರುವದು ಎಂದು ಕೃತಜ್ಞತಾಸ್ತುತಿ ಮಾಡುವವರ ಸ್ವರವೂ ಕೇಳಿಸಿದೊಡನೆ ಮೇಘವು ಯೆಹೋವನ ಆಲಯದಲ್ಲಿ ತುಂಬಿಕೊಂಡಿತು (2 ಪೂ.ವೃ. 5:13).*

ಜನವರಿ 21

## ಒಮ್ಮನಸ್ಸಿನ ಪ್ರಾರ್ಥನೆ!

ಬೆಳಿಗ್ಗೆ : ವಿಮೋ. 1,2,3
ಸಂಜೆ : ಮತ್ತಾ. 14:1–21

"ನಾನಾದರೋ ನಿಮಗೋಸ್ಕರವಾಗಿ ಯೆಹೋವನನ್ನು ಪ್ರಾರ್ಥಿಸುತ್ತಾ ಆತನ ಉತ್ತಮ ನೀತಿಮಾರ್ಗವನ್ನು ನಿಮಗೆ ತೋರಿಸಿಕೊಡುವದನ್ನು ಬಿಡುವದೇ ಇಲ್ಲ. ಬಿಟ್ಟರೆ ಆತನ ದೃಷ್ಟಿಯಲ್ಲಿ ಪಾಪಿಯಾಗಿರುವೆನು" (1 ಸಮು. 12:23).

"ವಿಜ್ಞಾಪನೆ ಮಾಡದೇ ಇರುವದು ಪಾಪ" ಎಂದು ಪ್ರವಾದಿಯಾದ ಸಮುವೇಲನು, ನಿರ್ದಿಷ್ಟವಾಗಿ ಹೇಳುತ್ತಾನೆ. ನಿಮ್ಮ ಆಸಕ್ತಿಯಿಂದ ಕೂಡಿದ ಪ್ರಾರ್ಥನೆ ಪಾಪವನ್ನು, ಶೋಧನೆಯನ್ನು ಹೊಡೆದೋಡಿಸುವದು. ಆದರೆ ಪ್ರಾರ್ಥನೆ ಮಾಡುವದನ್ನು ಬಿಟ್ಟುಬಿಟ್ಟರೆಂದರೆ, ಅವು ಹೆಚ್ಚುತ್ತಾ ಹೋಗುವದು. ನೀವು ಸೋಲುಗಳನ್ನು ದಾಟಿ ಹೋದ ದಿನಗಳ ನಿಮ್ಮ ಪ್ರಾರ್ಥನಾ ಜೀವಿತದ ಕುರಿತು ಸ್ವಲ್ಪ ಚಿಂತಿಸಿನೋಡಿರಿ. ಪ್ರಾರ್ಥನೆ ಎಂಬುದು ಪ್ರತಿಯೊಬ್ಬ ದೇವಮಕ್ಕಳ ಕರ್ತವ್ಯವಾಗಿರಬೇಕು.

ಪ್ರಾರ್ಥನೆ ಎಂಬುದು ಒಬ್ಬ ವಿಶ್ವಾಸಿಗೆ ಶ್ವಾಸದಂತಿರುವದು. ಉಸಿರಾಡುವದು ನಿಂತುಹೋದರೆ ಏನಾಗುವದೆಂದು ನಿಮಗೇ ತಿಳಿದಿರುವದು. ಅದರಂತೆಯೇ ಪ್ರಾರ್ಥಿಸುವದನ್ನು ಮರೆತಾಗ ಒಳಗಿರುವ ಆತ್ಮ ಬಲಹೀನವಾಗಿ ಕೊನೆಗೆ ಸತ್ತುಹೋಗುವದು. ಸಾರ್ದಿಸ್ ಸಭೆಯಲ್ಲಿ ಪ್ರಾರ್ಥನೆಯ ಕೊರತೆಯಿಂದ ಆತ್ಮೀಕ ಮರಣ ಉಂಟಾಯಿತು. ಕರ್ತನು ಆ ಸಭೆಯನ್ನು ದುಃಖದಿಂದ ನೋಡುತ್ತಾ "ಜೀವಿಸುವವನು ಎಂದು ನಿನಗೆ ಹೆಸರಿದ್ದರೂ, ಸತ್ತವನಾಗಿದ್ದೀ ಎಂದು ಬಲ್ಲೆನು" (ಪ್ರಕ. 3:1). ಆದ್ದರಿಂದ ಪ್ರಿಯರೇ, ಎಚ್ಚರವಾಗಿದ್ದು ಸಾಯುವ ಹಾಗಿರುವವುಗಳನ್ನು ದೃಢಪಡಿಸು (ಪ್ರಕ. 3:2). ಎಲ್ಲಿಂದ ಬಿದ್ದೀಯೋ ಅದನ್ನು ನಿಮ್ಮ ಸ್ಮರಣೆಗೆ ತಂದುಕೊಂಡು ದೇವರ ಕಡೆಗೆ ತಿರುಗಿಕೋ. ನೀನು ಮೊದಲು ಮಾಡುತ್ತಿದ್ದ ಕೃತ್ಯಗಳನ್ನು ಮಾಡು (ಪ್ರಕ.2:5) ಎಂದು ಕರ್ತನು ಎಚ್ಚರಿಸುತ್ತಾನೆ. ಪ್ರಪ್ರಥಮವಾಗಿ ವಿಜ್ಞಾಪನಾ ಪ್ರಾರ್ಥನೆಯನ್ನು ಮಾಡಿದವನು, ಮೂಲಪಿತೃವಾದ ಅಬ್ರಹಾಮನು. ಕೂಡಲೇ ಕರ್ತನು ಅವನ ವಿಜ್ಞಾಪನೆಗೆ ಉತ್ತರ ಕೊಟ್ಟನು. ಅಬ್ರಹಾಮನು ದೇವರಿಗೆ "ಇಷ್ಮಾಯೇಲನಿದ್ದಾನಲ್ಲಾ, ಅವನೇ ನಿನ್ನ ದಯೆ ಹೊಂದಿ ಬಾಳಲಿ ಎನ್ನಲು ದೇವರು ಇಷ್ಮಾಯೇಲನ ವಿಷಯದಲ್ಲಿ ನೀನು ಮಾಡಿದ ಬಿನ್ನಹವನ್ನು ಕಿವಿಗೊಟ್ಟು ಕೇಳಿದ್ದೇನೆ" ಎಂದು ವಾಗ್ದಾನ ಮಾಡಿದನು (ಆದಿ. 17:18,20).

ದೇವಜನರೇ, ಪ್ರಾರ್ಥನೆ ನಿಮ್ಮ ಉಸಿರಾಗಿರಲಿ, ನೀವು ಹಲವು ಕಾರ್ಯಗಳಿಗಾಗಿ ದೇವರಿಗೆ ವಿಜ್ಞಾಪನೆ ಮಾಡಿದರೂ ನಿಮ್ಮ ಮಕ್ಕಳಿಗಾಗಿ ಪ್ರಾರ್ಥಿಸುವದನ್ನು ಮರೆಯದಿರಿ. ನಿಮ್ಮ ವಿಜ್ಞಾಪನೆಗಳಿಗೆ ನಿಶ್ಚಯವಾಗಿ ಕರ್ತನು ಉತ್ತರಿಸುವನು.

*ನೆನಪಿಗೆ : ನನ್ನ ದೇವರೇ, ಕಟಾಕ್ಷವಿಟ್ಟು ಈ ಸ್ಥಳದಲ್ಲಿ ಮಾಡುವ ಪ್ರಾರ್ಥನೆಗೆ ಕಿವಿಗೊಡು (2ಪೂ.ವೃ. 6:40).*



ಜನವರಿ 22

## ಯೇಸುವಿನ ಪ್ರಾರ್ಥನಾ ಜೀವಿತ!

ಬೆಳಿಗ್ಗೆ : ವಿಮೋ. 4,5,6
ಸಂಜೆ : ಮತ್ತಾ. 14:22–36

"ನಾವು ಪ್ರತಿಜ್ಞೆ ಮಾಡಿ ಒಪ್ಪಿಕೊಂಡಿರುವ ದೇವ ಪ್ರೇಷಿತನೂ, ಮಹಾ ಯಾಜಕನೂ ಆಗಿರುವ ಯೇಸುವನ್ನು ಲಕ್ಷ್ಯವಿಟ್ಟು ಯೋಚಿಸಿರಿ" (ಇಬ್ರಿ. 3:1).

ಯೇಸುಕ್ರಿಸ್ತನು ನಮ್ಮ ಆತ್ಮೀಯ ಜೀವಿತಕ್ಕೆ ಮಾದರಿಯಾದಾತನು. "ನೀವು ತನ್ನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕೆಂದು ಮಾದರಿಯನ್ನು ತೋರಿಸಿ ಹೋದನು" (1 ಪೇತ್ರ 2:21) ಎಂದು. ಅಪೊ. ಪೇತ್ರನು ತನ್ನ ಪತ್ರಿಕೆಯಲ್ಲಿ ಬರೆಯುತ್ತಾನೆ. ಪರಿಶುದ್ಧ ಜೀವಿತಕ್ಕೆ ಪ್ರೀತಿಗೆ, ಕನಿಕರಕ್ಕೆ, ತಾಳ್ಮೆಗೆ ಶಾಂತತೆಗೆ ಆತನೇ ಮಾದರಿ. ಮಾತ್ರವಲ್ಲ ಪ್ರಾರ್ಥಿಸಲು ಸೇವೆ ಮಾಡಲು ಆತನೇ ಮಾದರಿಯಾಗಿರುವನು. ಆತನನ್ನು ಗಮನವಿಟ್ಟು ನೋಡಿರಿ.

ಯೇಸುಕ್ರಿಸ್ತನು, ತಂದೆಯೊಂದಿಗೆ ಎಡಬಿಡದೆ ನಡೆಯುವಾತನಾಗಿಯೂ, ಯಾವಾಗಲೂ ಪ್ರಾರ್ಥಿಸುವಾತನಾಗಿಯೂ ಇದ್ದನು. "ಯೇಸು ಸಹ ದೀಕ್ಷಾ ಸ್ನಾನ ಮಾಡಿಸಿಕೊಂಡು ಪ್ರಾರ್ಥನೆ ಮಾಡುತ್ತಿರುವಲ್ಲಿ ಆಕಾಶವು ತೆರೆಯಿತು." ಎಂದು ಲೂಕ 3:21ರಲ್ಲಿ ಓದುತ್ತೇವೆ. ಆತನು ಯಾವದಕ್ಕಾಗಿ ಪ್ರಾರ್ಥನೆ ಮಾಡಿದನು ಎಂಬ ವಿವರಣೆ ನಮಗೆ ಸತ್ಯವೇದದಲ್ಲಿ ಕಾಣದಿದ್ದರೂ, ಆತನ ಪ್ರಾರ್ಥನೆ, ನಿರ್ದಿಷ್ಟವುಳ್ಳದ್ದಾಗಿಯೂ, ಆಸಕ್ತಿಯಿಂದ ಕೂಡಿದ್ದಾಗಿಯೂ ಇದ್ದಿರಬೇಕು. ಆದ್ದರಿಂದಲೇ ಅಷ್ಟೊಂದು ಮಹಿಮೆಯಾದ ಕಾರ್ಯ ನಡೆಯಿತು. ಲೂಕ. 3:22ರಲ್ಲಿ "ಪವಿತ್ರಾತ್ಮನು ದೇಹಾಕಾರವಾಗಿ ಪಾರಿವಾಳದ ಹಾಗೆ ಆತನ ಮೇಲೆ ಇಳಿದುಬಂದನು. ಆಗ ನೀನು ಪ್ರಿಯನಾಗಿರುವ ನನ್ನ ಮಗನು, ನಿನ್ನನ್ನು ನಾನು ಮೆಚ್ಚಿದ್ದೇನೆ ಎಂದು ದೈವವಾಣಿಯಾಯಿತು" ಎಂದು ಬರೆಯಲ್ಪಟ್ಟಿದೆ. ಯೇಸುಕ್ರಿಸ್ತನು "ಮುಂಜಾನೆ ಮೊಬ್ಬಿರುವಾಗಲೇ ಎದ್ದು ಹೊರಟು ಅಡವಿಯ ಸ್ಥಳಕ್ಕೆ ಹೋಗಿ ಪ್ರಾರ್ಥಿಸುತ್ತಿದ್ದನು" (ಮಾರ್ಕ. 1:35) ಎಂದೂ, "ಆತನು ಪ್ರಾರ್ಥನೆ ಮಾಡುವದಕ್ಕಾಗಿ ಬೆಟ್ಟಕ್ಕೆ ಹೋಗಿ ರಾತ್ರಿಯನ್ನೆಲ್ಲಾ ಪ್ರಾರ್ಥನೆಯಲ್ಲೇ ಕಳೆದನು" (ಲೂಕ. 6:12) ಎಂದು ಸತ್ಯವೇದ ಹೇಳುತ್ತದೆ. ಆತನು ತಂದೆ ದೇವರೊಂದಿಗೆ ಏಕಾಂಗಿಯಾಗಿರಲು ಬಯಸುತ್ತಿದ್ದನು.

ದೇವಮಕ್ಕಳೇ, ನಿಮ್ಮ ಆತ್ಮೀಕ ಹಾಗೂ ಲೌಕೀಕ ಜೀವಿತಕ್ಕೆ ಕ್ರಿಸ್ತನೇ ಮಾದರಿಯಾಗಿರಲಿ. ಆತನ ಪ್ರಾರ್ಥನಾ ಜೀವಿತವನ್ನೇ ಹಿಂಬಾಲಿಸಿರಿ. "ನನ್ನನ್ನು ಪ್ರೀತಿಸುವವರನ್ನು ನಾನು ಪ್ರೀತಿಸುತ್ತೇನೆ, ಆತುರದಿಂದ ಹುಡುಕುವವರು ನನ್ನನ್ನು ಕಂಡುಕೊಳ್ಳುವರು" ಎಂದು ಸತ್ಯವೇದ ಹೇಳುತ್ತದೆ (ಜ್ಞಾನೋ. 8:17).

*ನೆನಪಿಗೆ : "ಅದರಂತೆ, ಯೇಸು ಕೂಡ ಸ್ವಂತ ರಕ್ತದಿಂದ ತನ್ನ ಜನರನ್ನು ಪವಿತ್ರ ಪಡಿಸುವದಕ್ಕೋಸ್ಕರ ಪಟ್ಟಣದ ಹೊರಗೆ ಸತ್ತನು" (ಇಬ್ರಿ. 13:12).*

ಜನವರಿ 23

## ಜೋಡಿಸಿದ ಕರಗಳು!

ಬೆಳಿಗ್ಗೆ : ವಿಮೋ. 7,8
ಸಂಜೆ : ಮತ್ತಾ. 15:1–20

“ಬೇಸರಗೊಳ್ಳದೆ ಪ್ರಾರ್ಥನೆ ಮಾಡಿರಿ” (ರೋಮಾ. 12:12).

ಜೋಡಿಸಿದ ಕರಗಳೂ, ಊರಿದ ಮೊಳಕಾಲುಗಳೂ, ಪ್ರಾರ್ಥನೆಯ ಚಿಹ್ನೆಗಳಾಗಿವೆ. ಜೋಡಿಸಿದ ಕರಗಳು ಭಯಭಕ್ತಿಯನ್ನು ತೋರಿಸುವದು. ಕರ್ತನ ಮುಂಭಾಗದಲ್ಲಿ ಊರುವ ಮೊಣಕಾಲುಗಳು, ಆತ್ಮೀಕ ಬಲವನ್ನು ತುಂಬುವದು. ಸಾಧಾರಣವಾಗಿ ನಮ್ಮ ದೇಶದ ಸಂಸ್ಕೃತಿಯಂತೆ, ಮನೆಗೆ ಬರುವ ಅತಿಥಿಗಳನ್ನು ಎರಡು ಕೈ ಜೋಡಿಸಿ ವಂದನೆ, ಸ್ವಾಗತ ಎಂದು ಹೇಳಿ ಬರಮಾಡಿಕೊಳ್ಳುತ್ತೇವೆ. ಹಾಗೆ ಬರಮಾಡಿಕೊಳ್ಳುವಾಗ ಅತಿಥಿಗಳೂ ನಮ್ಮ ಪ್ರೀತಿಯಲ್ಲಿ ತೊಯ್ದುಹೋಗುವರು. ನಿಮ್ಮ ಪ್ರೀತಿ, ಅನುಗ್ರಹ ಮುಂದೆಯೂ ನಮಗೆ ಅಗತ್ಯ ಎಂಬುದನ್ನು ಪರೋಕ್ಷವಾಗಿ ತಿಳಿಯಪಡಿಸುವರು.

ಸ್ಪರ್ಜನ್ ಎಂಬ ಭಕ್ತರು ‘ಪ್ರಾರ್ಥನೆ’ ಎಂಬುದು ಸರ್ವಶಕ್ತನ ನಾಡಿಗಳನ್ನು ಮಿಡಿಯುವಂತೆ ಮಾಡುವ ಸಣ್ಣ ನರವೆಂದು ಹೇಳುತ್ತಾರೆ. ಪ್ರಾರ್ಥನೆಯ ವೇಳೆಗಳಲ್ಲಿ ನಾವು ಕರ್ತನ ಮುಂದೆ ನಿಂತು ಆತನ ಪ್ರೀತಿಯ ಹೊನ್ನಿನ ಮುಖವನ್ನು ನೋಡಿ ಆನಂದಿಸುತ್ತೇವೆ. ಪ್ರಾರ್ಥನೆಯ ಸಮಯದಲ್ಲಿ ನಾವು ನಮ್ಮ ಹೃದಯವನ್ನು ಹೊಯ್ದು ಪ್ರಾರ್ಥಿಸುವಾಗ, ಕರ್ತನ ಆಂತರ್ಯವೂ ನಮ್ಮ ಆಂತರ್ಯವು ಒಂದಾಗಿ ಬೆಸೆಯುವದು. ಆಗ ಕರ್ತನ ಪ್ರಸನ್ನತೆಯೊಳಗೆ ಪ್ರವೇಶಿಸುವೆವು. ಅರಸನಾದ ಸೊಲೊಮೋನನು ಅಭಿಷೇಕಿಸಲ್ಪಟ್ಟು ಕರ್ತನಿಗಾಗಿ ದೇವಾಲಯವನ್ನು ಕಟ್ಟಿದಾಗ, ಕರ್ತನ ಯಜ್ಞವೇದಿಯ ಮುಂದೆ ತನ್ನ ಕರಗಳನ್ನು ಆಕಾಶದ ಕಡೆಗೆ ಎತ್ತಿ ಮೊಳಕಾಲೂರಿ ಪ್ರಾರ್ಥಿಸಿದನು (1 ಅರ. 8:54, 2 ಪೂ.ವೃ. 6:13). ಮೊಣಕಾಲೂರುವದು ಕರ್ತನ ಮುಂದೆ ತನ್ನನ್ನು ತಗ್ಗಿಸಿಕೊಂಡು ಅಡ್ಡಬೀಳುವದಕ್ಕೆ ಗುರುತಾಗಿದೆ. ಕರ್ತನು ಆ ಪ್ರಾರ್ಥನೆಯನ್ನು ಘನಪಡಿಸಿದನು. ಸೊಲೊಮೋನನು ಪ್ರಾರ್ಥಿಸುವದನ್ನು ಮುಗಿಸಿದ ಕೂಡಲೆ, ಆಕಾಶದಿಂದ ಬೆಂಕಿ ಬಿದ್ದು ಸರ್ವಾಂಗ ಹೋಮ ದ್ರವ್ಯಗಳನ್ನೂ ಯಜ್ಞಮಾಂಸವನ್ನೂ ದಹಿಸಿಬಿಟ್ಟಿತು. ಯೆಹೋವನ ತೇಜಸ್ಸು ಆಲಯದಲ್ಲಿ ತುಂಬಿಕೊಂಡಿತು (2 ಪೂ.ವೃ. 7:1).

ದೇವಜನರೇ, ಕರ್ತನ ಮುಂದೆ ಪ್ರಾರ್ಥನೆಗೆ ಬರುವಾಗ ಬಯಭಕ್ತಿಯೊಂದಿಗೆ ಬನ್ನಿರಿ. ಕರಗಳನ್ನು ಜೋಡಿಸಿ ನಿಮ್ಮನ್ನು ಅಡಿಯವರೆಗೆ ತಗ್ಗಿಸಿಕೊಂಡು ಪ್ರಾರ್ಥಿಸಿರಿ. ನಿಶ್ಚಯವಾಗಿ ಕರ್ತನ ಪ್ರಸನ್ನತೆ ನಿಮ್ಮ ಆಂತರ್ಯವನ್ನು ತುಂಬುವದು.

*ನೆನಪಿಗೆ : ಜೋಲುಬಿದ್ದ ಕೈಗಳನ್ನೂ, ನಡುಗುವ ಮೊಣಕಾಲುಗಳನ್ನೂ, ಬಲಗೊಳಿಸಿರಿ (ಯೆಶಾ.35:3).*



ಜನವರಿ 24

## ವಿಜ್ಞಾಪನೆಯನ್ನು ಕೇಳಿದೆ!

ಬೆಳಿಗ್ಗೆ : ವಿಮೋ. 9.10,11
ಸಂಜೆ : ಮತ್ತಾ. 15:21–39

“ನಾನು ನಿನ್ನ ಪ್ರಾರ್ಥನೆಯನ್ನು ಕೇಳಿದ್ದೇನೆ, ನಿನ್ನ ಕಣ್ಣೀರನ್ನು ನೋಡಿದ್ದೇನೆ; ನಿನ್ನ ಆಯುಷ್ಯಕ್ಕೆ ಹದಿನೈದು ವರುಷಗಳನ್ನು ಕೂಡಿಸುತ್ತೇನೆ” (ಯೆಶಾ. 38:5).

ಬಿನ್ನಹದ ಅಥವಾ ವಿಜ್ಞಾಪನೆಯ ಪ್ರಾರ್ಥನೆ ಎಂಬುದು, ಹಳೆಯ ಒಡಂಬಡಿಕೆಯಲ್ಲಿ ಧೂಪವರ್ಗಕ್ಕೆ ಸೇರಿದಂಥ ರಕ್ತಬೋಳಕ್ಕೆ ಗುರುತಾಗಿದೆ. ರಕ್ತ ಬೋಳದ ಮರವನ್ನು ಹರಿತವಾದ ಆಯುಧದಿಂದ ಗೀರುವಾಗ ಅದರೊಳಗಿಂದ ಸುವಾಸನೆಯುಳ್ಳ ಹಾಲಿನಂಥ ಬಿಳಿಯ ದ್ರವ ಸುರಿಯುವದು. ಅದನ್ನು ಕಾಯಿಸಿಗಟ್ಟಿ ಮಾಡಿ ಪುಡಿ ಮಾಡಿ ಸುವಾಸನೆ ಬೀರುವ ಧೂಪವಾಗಿ ದೇವಸಮ್ಮುಖದಲ್ಲಿ ಅರ್ಪಿಸಲಾಗುತ್ತಿತ್ತು. ಇದು ಬಿನ್ನಹಕ್ಕೆ ಗುರುತಾಗಿದೆ. ಇದಕ್ಕೆ ಒಳ್ಳೆಯ ಉದಾಹರಣೆ ಅರಸನಾದ ಹಿಜ್ಕೀಯನ ಬಿನ್ನಹ.

ಪ್ರವಾದಿಯಾದ ಯೆಶಾಯನು, ಅರಸನಾದ ಹಿಜ್ಕೀಯನ ಬಳಿಗೆ ಬಂದು ನಿನ್ನ ಕುಟುಂಬದ ಕಾರ್ಯಗಳನ್ನು ವ್ಯವಸ್ಥೆ ಮಾಡು, ನಿನ್ನ ಮರಣದ ಗಳಿಗೆ ಸಮೀಪಸಿದೆ ಎಂದು ಕರ್ತನ ಸಂದೇಶವನ್ನು ತಿಳಿಸಿದಾಗ, ಆ ಮಾತು ಅರಸನ ಹೃದಯವನ್ನು ಹರಿತವಾದ ಕತ್ತಿಯಿಂದ ತಿವಿದಂತಿತ್ತು. ಆಗ ಅವನ ವಯಸ್ಸು ನಲ್ವತ್ತು ವರ್ಷ ಮಾತ್ರ ಇದ್ದಿರಬಹುದೆಂದು ವೇದ ಪಂಡಿತರು ಹೇಳುವರು. ಅವನು ಜಜ್ಜಿದ ಹೃದಯದಿಂದ “ಯೆಹೋವನೇ, ನಾನು ನಂಬಿಗಸ್ತನಾಗಿಯೂ, ಯಥಾರ್ಥಚಿತ್ತನಾಗಿಯೂ ನಿನಗೆ ನಡೆದುಕೊಂಡು ನಿನ್ನ ದೃಷ್ಟಿಯಲ್ಲಿ ಒಳ್ಳೆಯವನಾಗಿದ್ದದ್ದನ್ನು ನೆನಪು ಮಾಡಿಕೋ” ಎಂದು ಪ್ರಾರ್ಥಿಸಿ ಬಹಳವಾಗಿ ಅತ್ತನು (ಯೆಶಾ. 38:3) ಎಂದು ಸತ್ಯವೇದದಲ್ಲಿ ಓದುತ್ತೇವೆ. ವಿಜ್ಞಾಪನೆ ಎಂದು ಹೇಳುವಾಗ, ಅದು ಒಂದು ಮಗುವಿನಂತೆ ತನ್ನನ್ನು ತಗ್ಗಿಸಿಕೊಂಡು ಅತ್ತು ಅತ್ತು ದೇವರಿಗೆ ತಿಳಿಯಪಡಿಸುವ ಬೇಡಿಕೆಯಾಗಿದೆ. ಹಾಗೆ ಬಿನ್ನವಿಸುವಾಗ ದೇವರ ಆಂತರ್ಯ ಕರಗುವದು. ಆತನು ಆ ವಿಜ್ಞಾಪನಾ ಪ್ರಾರ್ಥನೆಗೆ ನಿಶ್ಚಯವಾಗಿ ಉತ್ತರ ನೀಡುವನು. ನಮ್ಮ ಕರ್ತನಾದ ಯೇಸುಕ್ರಿಸ್ತನು ಇದೇ ರೀತಿ ಪ್ರಾರ್ಥಿಸಿದ್ದನ್ನು ಇಬ್ರಿ. 5:7, ಲೂಕ. 19:41ರಲ್ಲಿ ಓದುತ್ತೇವೆ.

ದೇವಜನರೇ, ನಿಮ್ಮ ಪ್ರಾರ್ಥನೆಯಲ್ಲಿ ಪ್ರಲಾಪವಿರಬಹುದು. ಬೇಡಿಕೆ ಇರಬಹುದು. ಆದರೆ ಕಣ್ಣೀರಿನೊಂದಿಗೆ ದೇವರಿಗೆ ಸಲ್ಲಿಸುವ ಬಿನ್ನಹ ಬಹಳ ಶಕ್ತಿಯುತವಾದದ್ದೂ, ಮಹಿಮೆಯುಳ್ಳದ್ದೂ ಆಗಿದೆ.

*ನೆನಪಿಗೆ : “ನೀವು ಪವಿತ್ರಾತ್ಮ ಪ್ರೇರಿತರಾಗಿ ಎಲ್ಲಾ ಸಮಯಗಳಲ್ಲಿಯೂ ಸಕಲ ವಿಧವಾದ ಪ್ರಾರ್ಥನೆಯಿಂದಲೂ, ವಿಜ್ಞಾಪನೆಯಿಂದಲೂ ದೇವರನ್ನು ಪ್ರಾರ್ಥಿಸಿರಿ” (ಎಫೆ. 6:18).*

## ಜನವರಿ 25 — ಉಪವಾಸ ಮಾಡುವಾಗ!

ಬೆಳಿಗ್ಗೆ : ವಿಮೋ. 12,13
ಸಂಜೆ : ಮತ್ತಾ. 16

"ನೀನು ಉಪವಾಸ ಮಾಡುವಾಗ ತಲೆಗೆ ಎಣ್ಣೆ ಹಚ್ಚಿಕೊಂಡು ಮುಖವನ್ನು ತೊಳೆದುಕೋ" (ಮತ್ತಾ. 6:17).

ಲೋಕರೀತಿಯ ಉಪವಾಸ ನಮ್ಮ ಹೊಟ್ಟೆಗೆ ವಿಶ್ರಾಂತಿ ಕೊಡುವದು. ರಾಜಕೀಯ ಪಕ್ಷಗಳು ಉಪವಾಸವನ್ನು ಒಂದು ಆಯುಧವಾಗಿ ಬಳಸಿಕೊಳ್ಳುವರು. ಯೋಗಿಗಳು ತಮ್ಮ ಶಾರೀರಿಕ ಪಾಪಶೋಧನೆಗಳನ್ನು, ಇಚ್ಛೆಗಳನ್ನು ನಿಗ್ರಹಿಸಲು ಸುಖ ಭೋಗಗಳನ್ನು ತೊರೆದು ಉಪವಾಸ ಮಾಡುವರು. ಹಲವು ಪ್ರಾಣಿ ಪಕ್ಷಿಗಳೂ ಆಗಾಗ್ಗೆ ಉಪವಾಸವಿರುವದುಂಟು.

ಹೀಗಿರುವಾಗ ದೇವಮಕ್ಕಳು ಉಪವಾಸ ಮಾಡುವದು ಎಷ್ಟೋ ಅವಶ್ಯವಲ್ಲವೇ? ಯೇಸುಕ್ರಿಸ್ತನು ತನ್ನ ಸೇವೆಯನ್ನು ಪ್ರಾರಂಭಿಸುವದಕ್ಕೆ ಮೊದಲು ಅರಣ್ಯಕ್ಕೆ ಹೋಗಿ ನಲ್ವತ್ತು ದಿನಗಳು ಉಪವಾಸವಿದ್ದು ಪ್ರಾರ್ಥಿಸಿದನೆಂದು ಸತ್ಯವೇದ ತಿಳಿಸುತ್ತದೆ. ಪ್ರತಿಯೊಬ್ಬ ದೇವಮಕ್ಕಳಿಗೂ ಕ್ರಮವಾದ ಉಪವಾಸ ಅಗತ್ಯವಾದದ್ದು. ಅದು ಶರೀರ ಪ್ರಕಾರದ ಭಾಗ್ಯವನ್ನೂ, ಆತ್ಮೀಕ ಆಶೀರ್ವಾದಗಳನ್ನೂ, ನಿತ್ಯತ್ವದ ಭಾಗ್ಯವನ್ನೂ ತಂದುಕೊಡುವದು. ಉಪವಾಸದಲ್ಲಿ ಶರೀರವೂ, ಲೌಕೀಕತೆಯೂ ಜಜ್ಜಲ್ಪಡುವದು. ಅದೇ ವೇಳೆಯಲ್ಲಿ ಆತ್ಮವು ಬಲಗೊಳ್ಳುವದು. ಆತ್ಮದಲ್ಲಿ ದೊಡ್ಡ ಬಿಡುಗಡೆ ಉಂಟಾಗುವದು. ಆತ್ಮದಲ್ಲಿ ದೇವರ ಶಕ್ತಿ ತುಂಬುವದು. ನಿಮ್ಮ ಜೀವಿತದಲ್ಲಿ ಪರಿಶುದ್ಧತೆ ಕಡಿಮೆಯಾಗುವಾಗ, ಕೆಲವು ಪಾಪಗಳು ನಿಮ್ಮನ್ನು ಹಿಂಬಾಲಿಸುವಾಗ ಶುದ್ಧೀಕರಣಕ್ಕಾಗಿ ಉಪವಾಸವಿದ್ದು ಪ್ರಾರ್ಥಿಸಿರಿ. ಕೆಲವು ರೀತಿಯ ಸೈತಾನನ ಹೋರಾಟಗಳು ಉಪವಾಸದಿಂದಲೂ ಪ್ರಾರ್ಥನೆಯಿಂದಲೂ ಮಾತ್ರವಲ್ಲದೆ ಬೇರೆ ಯಾವ ರೀತಿಯಲ್ಲೂ ಹೋಗದು (ಮತ್ತಾ. 17:21). ಇತರರನ್ನು ಹೋರಾಟಕ್ಕೆ ಕರೆದ ಮೇಲೆ ನಾನೇ ಅಯೋಗ್ಯನೆನಿಸಿಕೊಂಡೇನೋ ಎಂಬ ಭಯದಿಂದ ನನ್ನ ಮೈಯನ್ನು ನಿಯಂತ್ರಿಸಿ ಸ್ವಾಧೀನ ಪಡಿಸಿಕೊಳ್ಳುತ್ತೇನೆ (1 ಕೊರಿಂ. 9:27) ಎಂದು ಅಪೊ.ಪೌಲನು ಹೇಳುತ್ತಾನೆ. ಪ್ರಪಂಚದವರ ಮುಂದೆ ಒಂದು ವೇಳೆ ನೀವು ದೇವದೂತರಂತೆ ಕಾಣಬಹುದು. ಕೆಲವರು ಸ್ವನೀತಿಯ ಮೇಲೆ ನಂಬಿಕೆ ಇಟ್ಟು ತಾವು ನೀತಿವಂತರೆಂದು ತೋರ್ಪಡಿಸಿಕೊಳ್ಳಬಹುದು. ಆದರೆ ಅಂತರಂಗದಲ್ಲಿ ನಡೆಯುವ ಪ್ರತಿಯೊಂದು ಕಾರ್ಯವನ್ನೂ ಕರ್ತನು ಅರಿತಿರುವನು.

ದೇವಜನರೇ, ಆದ್ದರಿಂದ ನಿಮ್ಮನ್ನು ನೀವು ನೀತಿವಂತರೆಂದೆಣಿಸದೆ, ದೇವಸಮ್ಮುಖದಲ್ಲಿ ನಿಮ್ಮನ್ನು ತಗ್ಗಿಸಿಕೊಂಡು ಉಪವಾಸ ಮಾಡಿ ಕರ್ತನು ಜಯದ ಜೀವಿತವನ್ನು ನೀಡುವಂತೆ ಪ್ರಾರ್ಥಿಸಿರಿ. ಪರಿಶುದ್ಧತೆ ಹೊಂದಲು ನಿತ್ಯಜೀವ ಪಡೆಯಲು ಉಪವಾಸ ಅಗತ್ಯವಾದದ್ದು.

*ನೆನಪಿಗೆ : ನಾನು ಉಪವಾಸವಿದ್ದು ಅತ್ತದ್ದೆಲ್ಲಾ ಪರಿಹಾಸ್ಯಕ್ಕೆ ಕಾರಣವಾಯಿತು (ಕೀರ್ತ. 69:10).*



## ಜನವರಿ 26 — ಆರಾಧನೆಯೊಂದಿಗೆ ಉಪವಾಸ ಮಾಡಿರಿ!

ಬೆಳಿಗ್ಗೆ : ವಿಮೋ. 14, 15
ಸಂಜೆ : ಮತ್ತಾ. 17

"ಇವರು ಕರ್ತನನ್ನು ಸೇವಿಸುತ್ತಾ ಉಪವಾಸ ಮಾಡುತ್ತಾ ಇದ್ದಾಗ ಪವಿತ್ರಾತ್ಮನು ನಾನು ಬಾರ್ನಬ ಸೌಲರನ್ನು ಕರೆದ ಕೆಲಸಕ್ಕಾಗಿ ಅವರನ್ನು ಪ್ರತ್ಯೇಕಿಸಿರಿ ಎಂದು ಹೇಳಿದನು (ಅ.ಕೃ.13:2).

ಆದಿ ಅಪೊಸ್ತಲರಿಗೆ ಉಪವಾಸವೆಂಬುದು ಆರಾಧನೆಯ ಒಂದು ಭಾಗವೇ ಆಗಿತ್ತು. ಆ ಉಪವಾಸದಲ್ಲಿ ಒಂದು ಉದ್ದೇಶವಿತ್ತು. ಯಾರನ್ನು ಕರ್ತನು ಆರಿಸಿಕೊಂಡಿರುವನು? ಯಾರನ್ನು ಕರ್ತನ ಸೇವೆಗೆಂದು ಪ್ರತ್ಯೇಕಿಸುವದು? ಎಂಬುದಕ್ಕಾಗಿ ಅವರು ಉಪವಾಸವಿದ್ದು ಕರ್ತನ ಮಾರ್ಗ ದರ್ಶನಕ್ಕಾಗಿ ಎದುರುನೋಡುತ್ತಿದ್ದರು.

ಸೇವೆ ಎಂಬುದು ವಿಶೇಷವಾದದ್ದು, ದೇವರಿಂದ ಏರ್ಪಡಿಸಿದ್ದು. ದೇವರ ಚಿತ್ತವಿಲ್ಲದೆ ಒಬ್ಬರನ್ನು ಸೇವೆಗೆ ಪ್ರತಿಷ್ಟೆ ಮಾಡಿದರೆ ಕರ್ತನು ಅದನ್ನು ಮೆಚ್ಚುವದಿಲ್ಲ. ಸೈತಾನನು ಮಧ್ಯೆ ಪ್ರವೇಶಿಸಿಬಿಡುವನು. ದೇವರ ನಡೆಸುವಿಕೆ ಇಲ್ಲದ ಸೇವೆ ಊರ್ಜಿತಗೊಳ್ಳುವದಿಲ್ಲ. ಈ ಸತ್ಯವನ್ನು ಅರಿತ ಆದಿ ಸಭೆಯವರು ಸೇವೆಯಲ್ಲಿ ಮುಖ್ಯವಾದ ತೀರ್ಮಾನಗಳನ್ನು ತೆಗೆದುಕೊಳ್ಳುವಾಗ ಉಪವಾಸದಿಂದ ಪ್ರಾರ್ಥಿಸಿದರು. ಯಾರಾದರೂ ಸರಿ, ಪೂರ್ಣಾವಧಿ ಸೇವೆಗೆ ತಮ್ಮನ್ನು ಅರ್ಪಿಸಿಕೊಡುವದರ ಮೊದಲು ದೇವಸಮ್ಮುಖದಲ್ಲಿ ಕೆಲವು ದಿನಗಳು ಉಪವಾಸವಿದ್ದು ನಿಮ್ಮ ಕರೆಯುವಿಕೆಯನ್ನು ದೃಢಪಡಿಸಿಕೊಳ್ಳಿರಿ. ಕರ್ತನು ವೈಯಕ್ತಿಕವಾಗಿ ನಿಮ್ಮೊಂದಿಗೆ ಮಾತನಾಡಲಿ, ಅದೇ ವೇಳೆಯಲ್ಲಿ ನಿಮ್ಮ ಸಭೆಯವರೂ ನಿಮಗಾಗಿ ಉಪವಾಸವಿದ್ದು ಪ್ರಾರ್ಥಿಸಲಿ. ಹಾಗೆ ಆದಿ ಸಭೆಯವರು ಪ್ರಾರ್ಥಿಸಿದಾಗ ಬಾರ್ನಬ ಸೌಲರನ್ನು ನಾನು ಕರೆದ ಕೆಲಸಕ್ಕಾಗಿ ಪ್ರತ್ಯೇಕಿಸಿರಿ ಎಂದು ಕರ್ತನು ಹೇಳಿದನು (ಅ.ಕೃ. 13:2). ಅಷ್ಟಕ್ಕೇ ಉಪವಾಸವನ್ನು ನಿಲ್ಲಿಸಿಬಿಟ್ಟಿರಾ? ಇಲ್ಲ ನಂತರ, ಉಪವಾಸವಿದ್ದು ಪ್ರಾರ್ಥಿಸಿ ಅವರ ಮೇಲೆ ಹಸ್ತಾರ್ಪಣ ಮಾಡಿ ಅವರನ್ನು ಕಳುಹಿಸಿಕೊಟ್ಟರು (ಅ.ಕೃ. 13:3).

ದೇವಜನರೇ, ನಿಮ್ಮ ಕುಟುಂಬದಲ್ಲೂ, ಮುಖ್ಯವಾದ ತೀರ್ಮಾನಗಳನ್ನು ತೆಗೆದುಕೊಳ್ಳುವಾಗ, ವೈಯಕ್ತಿಕವಾಗಿಯೂ ಕುಟುಂಬದ ಸದಸ್ಯರೊಂದಿಗೂ ಸೇರಿ, ಉಪವಾಸ ಮಾಡಿ ದೇವರ ಚಿತ್ತವನ್ನು ತಿಳಿದುಕೊಂಡು ಒಂದು ತೀರ್ಮಾನ ತೆಗೆದುಕೊಳ್ಳಿರಿ.

*ನೆನಪಿಗೆ : "ನಿನ್ನನ್ನು ಉಪದೇಶಿಸಿ ನಡೆಯಬೇಕಾದ ಮಾರ್ಗವನ್ನು ತಿಳಿಸುವೆನು, ನಿನ್ನನ್ನು ಕಟಾಕ್ಷಿಸಿ, ಆಲೋಚನೆ ಹೇಳುವೆನು" (ಕೀರ್ತನೆ 32:8).*

ಜನವರಿ 27

## ಯಾಕೆ ಸಾಧ್ಯವಾಗಲಿಲ್ಲ!

ಬೆಳಿಗ್ಗೆ : ವಿಮೋ.16,17,18
ಸಂಜೆ : ಮತ್ತಾ. 18:1–20

"ಅವನನ್ನು ನಿನ್ನ ಶಿಷ್ಯರ ಬಳಿಗೆ ಕರೆದುಕೊಂಡು ಬಂದಿದ್ದೆನು; ಆದರೆ ಅವನನ್ನು ವಾಸಿ ಮಾಡುವದಕ್ಕೆ ಅವರಿಂದ ಆಗದೇ ಹೋಯಿತು" ಅಂದನು (ಮತ್ತಾ. 17:16).

ಒಬ್ಬ ತಂದೆ ಮೂರ್ಛೆ ರೋಗದಿಂದ ಬಹಳವಾಗಿ ಕಷ್ಟಪಡುತ್ತಿದ್ದ ತನ್ನ ಮಗನನ್ನು ಯೇಸುಕ್ರಿಸ್ತನ ಬಳಿ ಕರೆತಂದು ಸ್ವಾಮಿ ನನ್ನ ಮಗನನ್ನು ಕರುಣಿಸು, ಅವನು ಆಗಾಗ್ಗೆ ಬೆಂಕಿಯಲ್ಲಿಯೂ, ನೀರಿನಲ್ಲಿಯೂ ಬೀಳುತ್ತಿರುವನು. ಅವನನ್ನು ನಿನ್ನ ಶಿಷ್ಯರ ಬಳಿಗೆ ಕರೆದುಕೊಂಡು ಬಂದಿದ್ದೆನು. ಆದರೆ ವಾಸಿ ಮಾಡುವದಕ್ಕೆ ಅವರಿಂದ ಆಗದೇ ಹೋಯಿತು ಅಂದನು. ಆಗ ಯೇಸು ಎಲಾ ನಂಬಿಕೆಯಿಲ್ಲದಂಥ ಮೂರ್ಖ ಸಂತಾನವೇ, ನಾನು ಇನ್ನೆಷ್ಟು ದಿನ ನಿಮ್ಮ ಸಂಗಡ ಇರಲಿ? ಇನ್ನೆಷ್ಟು ದಿನ ನಿಮ್ಮನ್ನು ಸಹಿಸಿಕೊಳ್ಳಲಿ? ಅವನನ್ನು ಇಲ್ಲಿ ನನ್ನ ಬಳಿಗೆ ಕರಕೊಂಡು ಬನ್ನಿರಿ ಅಂದನು.

ಆ ಹುಡುಗನನ್ನು ಆತನ ಬಳಿಗೆ ಕರೆತರಲು ಆತನು ಆ ಹುಡುಗನನ್ನು ಕಾಡಿಸುತ್ತಿದ್ದ ಅಶುದ್ಧಾತ್ಮವನ್ನು ಗದರಿಸಲು ಅದು ಅವನನ್ನು ಬಿಟ್ಟುಹೋಯಿತು. ಆ ಹುಡುಗನು ಸ್ವಸ್ಥನಾದನು. ತರುವಾಯ ಶಿಷ್ಯರು ಏಕಾಂತವಾಗಿ ಯೇಸುವಿನ ಬಳಿಗೆ ಬಂದು ಅವನನ್ನು ಬಿಡಿಸಲಿಕ್ಕೆ ನಮ್ಮಿಂದ ಏಕೆ ಆಗದೆಹೋಯಿತು ಎಂದು ಕೇಳಲು ಅದಕ್ಕೆ ಯೇಸು ಅವರಿಗೆ "ನಿಮ್ಮ ನಂಬಿಕೆ ಕಡಿಮೆಯಾಗಿರುವದರಿಂದಲೇ ಆಗಲಿಲ್ಲ. ನಿಮಗೆ ಸತ್ಯವಾಗಿಯೇ ಹೇಳುತ್ತೇನೆ. ಸಾಸಿವೆ ಕಾಳಿನಷ್ಟು ನಂಬಿಕೆ ನಿಮಗೆ ಇರುವದಾದರೆ ನೀವು ಈ ಬೆಟ್ಟಕ್ಕೆ ಇಲ್ಲಿಂದ ಅಲ್ಲಿಗೆ ಹೋಗು ಎಂದು ಹೇಳಿದರೂ ಹೋಗುವದು. ನಿಮ್ಮ ಕೈಯಿಂದ ಆಗದಿರುವ ಕೆಲಸ ಒಂದೂ ಇರುವದಿಲ್ಲ" ಅಂದನು (ಮತ್ತಾ.17:19,20). ವೇದಪಂಡಿತನಾದ ಎಜ್ರನು ಯೆರೂಸಲೇಮಿನ ಗೋಡೆ ಕಟ್ಟಲ್ಪಡಬೇಕು, ಶಿಥಿಲವಾದ ದೇವಾಲಯ ಕಟ್ಟಲ್ಪಡಬೇಕು, ಜನರು ಬ್ಯಾಬಿಲೋನಿನ ದಾಸತ್ವದಿಂದ ಪೂರ್ಣವಾಗಿ ಬಿಡುಗಡೆಯಾಗಿ ಹಿಂದಿರುಗಿ ಬರಬೇಕು, ದೇಶದ ಪಾಪವನ್ನು ಕರ್ತನು ನೀಗಿಸಬೇಕು ಎಂದು ಉಪವಾಸ ಮಾಡಿ ಆಸಕ್ತಿಯಿಂದ ಪ್ರಾರ್ಥಿಸಿದನೆಂದು ಸತ್ಯವೇದ ಹೇಳುತ್ತದೆ (ಎಜ್ರ. 10:6).

ದೇವಜನರೇ, ನೀವು ನಿಮ್ಮ ಪಾಪಗಳಿಗಾಗಿ ಮಾತ್ರವಲ್ಲ, ಶತ್ರುವಿನ ಎಲ್ಲಾ ಕಾರ್ಯಗಳು ಮುರಿಯಲ್ಪಡಬೇಕೆಂದು ಉಪವಾಸ ಮಾಡಿ ಪ್ರಾರ್ಥಿಸಿರಿ. ನೀವು ಉಪವಾಸ ಪ್ರಾರ್ಥನೆ ಮಾಡುವಾಗ, ಆತ್ಮದಲ್ಲಿ ದೈವೀಕ ಬಲವುಂಟಾಗುವದು. ಆತ್ಮೀಕ ಹೋರಾಟದಲ್ಲಿ ಶತ್ರುವಿನ ಮೇಲೆ ಜಯವನ್ನು ಪಡೆಯುವಿರಿ.

*ನೆನಪಿಗೆ : ಹೀಗಿರಲಾಗಿ ದೇವರಿಗೆ ಒಳಗಾಗಿರಿ, ಸೈತಾನನನ್ನು ಎದುರಿಸಿರಿ, ಅವನು ನಿಮ್ಮನ್ನು ಬಿಟ್ಟು ಓಡಿಹೋಗುವನು (ಯಾಕೋಬ. 4:7).*



ಜನವರಿ 28

## ಐಶ್ವರ್ಯವಂತನ ಪ್ರಾರ್ಥನೆ!

ಬೆಳಿಗ್ಗೆ : ವಿಮೋ. 19,20
ಸಂಜೆ : ಮತ್ತಾ. 18:21–35

"ತಂದೆಯೇ ಅಬ್ರಹಾಮನೇ, ನನ್ನ ಮೇಲೆ ದಯೆಯಿಟ್ಟು ಲಾಜರನನ್ನು ಕಳುಹಿಸು; ಅವನು ತನ್ನ ತುದಿಬೆರಳನ್ನು ನೀರಿನಲ್ಲಿ ಅದ್ದಿ ನನ್ನ ನಾಲಿಗೆಯನ್ನು ತಣ್ಣಗೆ ಮಾಡಲಿ.... (ಲೂಕ.16:24–28).

ಐಶ್ವರ್ಯವಂತನು, ಅಬ್ರಹಾಮನಿಗೆ ಈ ಮೇಲ್ಕಂಡ ಪ್ರಾರ್ಥನೆಯನ್ನು ಮಾಡಿದನು. ಅವನು ಎರಡು ಪ್ರಾರ್ಥನೆಗಳನ್ನು ಮಾಡಿದನು. ಒಂದು ತನಗಾಗಿ ಮಾಡಿದ ಸ್ವಾರ್ಥದ ಪ್ರಾರ್ಥನೆ. ಎರಡನೆಯದು, ತನ್ನ ಸಹೋದರರಿಗಾಗಿ ಮಾಡಿದ ಪ್ರಾರ್ಥನೆ. ನರಕದಲ್ಲಿ ಯಾತನೆ ಪಡುತ್ತಿದ್ದ ಅವನನ್ನು ಬಾಧಿಸಿದ ಮೊದಲ ಭಾಗ ನಾಲಿಗೆಯಾಗಿತ್ತು.

ಈ ಪ್ರಪಂಚದಲ್ಲಿ ಜೀವಿಸುವಾಗ, ಒಬ್ಬ ಮನುಷ್ಯನನ್ನು ಅಧಿಕವಾಗಿ ಯಾತನೆಗೆ ಒಳಪಡಿಸುವಂಥದ್ದು ಈ ನಾಲಿಗೆ. ಕೆಲವರ ನಾಲಿಗೆ ಹರಿತವಾದ ಕತ್ತಿಯಂತಿರುವದು. ಇತರರ ಆಂತರ್ಯವನ್ನು ಸೀಳಿ, ವೇದನೆಗೆ ಒಳಪಡಿಸುವದು. ಕೆಲವರು ನಯವಂಚನೆಯಿಂದ ಕಪಟವಾದ ಮಾತುಗಳನ್ನಾಡಿ ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳುವರು. ಕೆಲವರ ನಾಲಿಗೆ ಸದಾ ಕೋಪದ ಮಾತುಗಳನ್ನೇ ಪ್ರಕಟಿಸುವದು. ಅಂಥಹ ನಾಲಿಗೆಗಳು ನಿಶ್ಚಯವಾಗಿ ನರಕದ ಕಡಲಲ್ಲಿ ಬಿದ್ದು ನೀರಿಗಾಗಿ ತವಕಿಸುವದು. "ಜೀವದಲ್ಲಿ ಸಂತೋಷಪಟ್ಟು ಸುದಿನಗಳನ್ನು ನೋಡುವದಕ್ಕೆ ಇಷ್ಟವುಳ್ಳವನು ಕೆಟ್ಟದ್ದನ್ನು ನುಡಿಯದಂತೆ ತನ್ನ ನಾಲಿಗೆಯನ್ನೂ ವಂಚನೆಯ ಮಾತುಗಳನ್ನಾಡದಂತೆ ತುಟಿಗಳನ್ನೂ ಬಿಗಿಹಿಡಿಯಲಿ" (1 ಪೇತ್ರ. 3:10) ಎಂದು ಸತ್ಯವೇದ ಬೋಧಿಸುತ್ತದೆ. ನಿಮ್ಮ ನಾಲಿಗೆ ಒಂದು ಅಗ್ನಿಯೋಪಾದಿಯಲ್ಲಿ ಇರುವದು. ಭಕ್ತನಾದ ಯಾಕೋಬನು ನಾಲಿಗೆಯನ್ನು ಕುರಿತು ಹೀಗೆ ಬರೆಯುತ್ತಾನೆ. "ಎಷ್ಟು ಕೊಂಚ ಕಿಚ್ಚು ಎಷ್ಟು ದೊಡ್ಡ ಕಾಡನ್ನು ಉರಿಸುತ್ತದೆ ನೋಡಿರಿ. ನಾಲಿಗೆಯೂ ಕಿಚ್ಚೇ, ನಾಲಿಗೆಯು ಅಧರ್ಮ ಲೋಕರೂಪವಾಗಿ ನಮ್ಮ ಅಂಗಗಳ ನಡುವೆ ಇಡಲ್ಪಟ್ಟಿದೆ. ಅದು ದೇಹವನ್ನೆಲ್ಲಾ ಕೆಡಿಸುತ್ತದೆ. ತಾನೇ ನರಕದಿಂದ ಬೆಂಕಿ ಹತ್ತಿಸಿಕೊಳ್ಳುತ್ತಾ ಪ್ರಪಂಚವೆಂಬ ಚಕ್ರಕ್ಕೆ ಬೆಂಕಿ ಹಚ್ಚುತ್ತದೆ" (ಯಾಕೋ. 3:6).

ದೇವಜನರೇ, ನಾಲಿಗೆಯ ಕುರಿತು ಎಚ್ಚರವಹಿಸಿರಿ. ನಿಮ್ಮ ಮಾತುಗಳು ಪರಲೋಕವನ್ನು ಸೃಷ್ಟಿಸಬಹುದು. ನರಕವನ್ನೂ ಸೃಷ್ಟಿಸಲು ಸಾಧ್ಯ. ಆಡುವ ಮಾತುಗಳು ಕ್ರಿಸ್ತನ ಮಧುರವಾದ ಮಾತುಗಳು ಖಂಡಿತ ಹಾಗೂ ಸತ್ಯದ ಮಾತುಗಳಾಗಿರಲಿ. ಒಬ್ಬರ ಜೀವಿತವನ್ನು ಕಟ್ಟಿ ಎಬ್ಬಿಸುವಂತಿರಲಿ.

*ನೆನಪಿಗೆ : "ಇಗೋ ಇದು ನಿನ್ನ ತುಟಿಗಳಿಗೆ ತಗುಲಿತು; ನಿನ್ನ ದೋಷವು ನೀಗಿತು, ನಿನ್ನ ಪಾಪಕ್ಕೆ ಪ್ರಾಯಶ್ಚಿತ್ತವಾಯಿತು ಅಂದನು" (ಯೆಶಾಯ 6:7).*

ಜನವರಿ 29

## ದೊಡ್ಡ ಡೊಂಗರ!

ಬೆಳಿಗ್ಗೆ : ವಿಮೋ. 21, 22
ಸಂಜೆ : ಮತ್ತಾ. 19

"ನಮಗೂ ನಿನಗೂ ನಡುವೆ ದೊಡ್ಡದೊಂದು ಡೊಂಗರ ಸ್ಥಾಪಿಸಿಯದೆ" (ಲೂಕ. 16:26).

ಈ ದೊಡ್ಡ ಡೊಂಗರ (ಹಳ್ಳ)ವನ್ನು ಉಂಟುಮಾಡುವವರು ಯಾರು? ಹೌದು, ಮನುಷ್ಯನೇ ನಿರ್ಮಿಸುವನು. ಪ್ರಪಂಚದ ಪಾಪ ಭೋಗಗಳನ್ನು ಬಯಸಿ, ದೇವರಿಂದ ದೂರಹೋಗಿ, ತನಗೂ ದೇವರಿಗೂ ನಡುವೆ ಡೊಂಗರವನ್ನು ನಿರ್ಮಾಣ ಮಾಡುವನು. "ನಿಮ್ಮ ಅಪರಾಧಗಳೇ ನಿಮ್ಮ ದೇವರಿಂದ ನಿಮ್ಮನ್ನು ಅಗಲಿಸುತ್ತಾ ಬಂದಿವೆ" (ಯೆಶಾ. 59:2) ಎಂದು ಸತ್ಯವೇದ ಹೇಳುತ್ತದೆ. ಗಂಡ ಹೆಂಡತಿಯರು ತಮ್ಮೊಳಗೆ ಕಹಿ ಭಾವನೆಗಳನ್ನು ಅಹಂ ಅನ್ನು ಬೆಳಸಿಕೊಂಡು ಒಬ್ಬರನ್ನೊಬ್ಬರು ಕ್ಷಮಿಸಲಾರದೆ ಇರುವಾಗ ಅವರೊಳಗೆ ಒಡಕು ಉಂಟಾಗಿ ಕುಟುಂಬಗಳು ಬೇರ್ಪಡುವವು.

ನೀವು ನಿಮಗೂ, ನಿಮ್ಮ ಸಹೋದರ ಸಹೋದರಿಯರ ನಡುವೆ ನಿಮ್ಮೊಳಗೆ ಡೊಂಗರನ್ನು ಏರ್ಪಡಿಸಿಕೊಂಡಿರುವಿರೋ? ನೀವು ಈ ಪ್ರಪಂಚವನ್ನು ಬಿಟ್ಟುಹೋಗುವಾಗ, ಅದು ಒಂದು ದೊಡ್ಡ ಡೊಂಗರವಾಗಿ ಮಾರ್ಪಡುವದು. ಕೆಲವರು ಒಂದೇ ಮನೆಯಲ್ಲಿಯೇ ಜೀವಿಸುವರು. ಆದರೆ ಆಂತರ್ಯದಲ್ಲಿ ಅವರಲ್ಲಿ ಅನ್ಯೋನ್ಯತೆ ಇಲ್ಲದೆ ಕಹಿಯನ್ನು ಇಟ್ಟುಕೊಂಡಿರುತ್ತಾರೆ. ಆಂತರ್ಯದಲ್ಲಿ ಜ್ವಾಲಾಮುಖಿ ಸಿಡಿಯುತ್ತಲೇ ಇರುತ್ತದೆ. ಅಂಥಹ ಸಂದರ್ಭಗಳಲ್ಲಿ ಕಲ್ವಾರಿ ಪ್ರೀತಿಯಿಂದ ತುಂಬಿದವರಾಗಿ, ದೊಡ್ಡ ಡೊಂಗರವನ್ನು ತೆಗೆದುಹಾಕಿ ಸಂಧಾನ ಮಾಡಿಕೊಳ್ಳಿರಿ. ನಿಮ್ಮನ್ನು ತಗ್ಗಿಸಿಕೊಂಡು ಹೋಗಿ ಕ್ಷಮೆಯನ್ನು ಬೇಡಿರಿ. ಒಂದು ವೇಳೆ ನಿಮ್ಮ ಶ್ವಾಸ ದಿಢೀರೆಂದು ನಿಂತುಹೋದರೆ, ಮರಣವು ಉಂಟಾಗುವದಾದರೆ, ನಂತರ ಸರಿಪಡಿಸಲಾಗದ ನಿತ್ಯಡೊಂಗರವಾಗಿ ಉಳಿದುಬಿಡುವದು. ಅನಂತರ ನೀವು ಎಷ್ಟೇ ಗೋಳಾಡಿ ದುಃಖಿಸಿದರೂ ಪ್ರಯೋಜನವಿಲ್ಲ. ಮಾತ್ರವಲ್ಲ, ಮುಂದಿನ ಪೀಳಿಗೆಗೂ ನಿಮ್ಮ ಕೃತ್ಯಗಳು ಶಾಪವಾಗಿ ಪರಿಣಮಿಸಿಬಿಡುವದು.

ದೇವಮಕ್ಕಳೇ, ನಿಮಗೂ ನಿಮ್ಮ ಸಹೋದರ ಸಹೋದರಿಯರ, ಬಂಧುಗಳ ನಡುವೆ ಕಹಿಯ ಭಾವನೆಗಳು, ದ್ವೇಷ ಮುಂತಾದವುಗಳು ಇರುವದಾದರೆ ಇಂದೇ ಕಲ್ವಾರಿ ಶಿಲುಬೆಯ ಬಳಿಗೆ ಬಂದು ಪಶ್ಚಾತ್ತಾಪದಿಂದ ಆತನ ಕ್ಷಮೆಯನ್ನು ಬೇಡಿ ಆತನ ಕಲ್ವಾರಿ ಪ್ರೀತಿಯಿಂದ ತುಂಬಿದವರಾಗಿ ನಿಮ್ಮ ಸಹೋದರ ಸಹೋದರಿ ಬಂಧುಗಳೊಂದಿಗೆ ನಿಮ್ಮನ್ನು ಸಂಧಾನಪಡಿಸಿಕೊಳ್ಳಿರಿ. ಕರ್ತನ ಪ್ರೀತಿ ಸಂತೋಷ, ಸಮಾಧಾನವನ್ನು ಹೊಂದಿಕೊಳ್ಳಿರಿ.

*ನೆನಪಿಗೆ : "ಸೂರ್ಯನು ಮುಳುಗುವದಕ್ಕಿಂತ ಮುಂಚೆ ನಿಮ್ಮ ಸಿಟ್ಟು ತೀರಲಿ" (ಎಫೆಸ.4:26).*



ಜನವರಿ 30

## ಐಶ್ವರ್ಯವಂತನ ಪ್ರಾರ್ಥನೆ!

ಬೆಳಿಗ್ಗೆ : ವಿಮೋ. 23, 24
ಸಂಜೆ : ಮತ್ತಾ. 20:1–16

"ಲಾಜ಼ರನನ್ನು ನನ್ನ ತಂದೆಯ ಮನೆಗೆ ಕಳುಹಿಸಬೇಕು. ನನಗೆ ಐದು ಮಂದಿ ಅಣ್ಣ ತಮ್ಮಂದಿರಿದ್ದಾರೆ; ಅವರೂ ಸಹ ಈ ಯಾತನೆಯ ಸ್ಥಳಕ್ಕೆ ಬಂದಾರು; ಅವರು ಬಾರದಂತೆ ಅವನು ತಾನು ಕಂಡದ್ದನ್ನು ಅವರಿಗೆ ತಿಳಿಸಲಿ" ಅಂದನು. (ಲೂಕ. 16:27–28).

ನರಕದಲ್ಲಿದ್ದುಕೊಂಡೋ, ಪಾತಾಳದಲ್ಲಿದ್ದುಕೊಂಡೋ ಮಾಡುವ ಯಾವ ಪ್ರಾರ್ಥನೆಗೂ ಉತ್ತರ ಸಿಗುವದಿಲ್ಲ. ಒಂದೇ ಸಾರಿ ಸಾಯುವದೂ, ಆಮೇಲೆ ನ್ಯಾಯತೀರ್ಪು ಮನುಷ್ಯರಿಗೆ ನೇಮಕವಾಗಿದೆ (ಇಬ್ರಿ. 9:27). ನರಕದಲ್ಲಿರುವ ಕೆಲವರು ಯಾತನೆ ಪಡುತ್ತಾ ಪರಲೋಕದ ಕಡೆಗೆ ನೋಡಿ ಗೋಳಾಡುವರು. ಕೆಲವರು ದೂಷಿಸುವರು, ಕೆಲವರು ತಮ್ಮಲ್ಲಿ ತಾವೇ ನೊಂದುಕೊಳ್ಳುವರು. ಆದರೆ ಯಾವದೇ ಪ್ರಾರ್ಥನೆಗೆ ಉತ್ತರ ಸಿಗುವದಿಲ್ಲ.

ಅದೇ ವೇಳೆಯಲ್ಲಿ ಪರಲೋಕದಲ್ಲಿರುವ ಭಕ್ತರಿಗೆ ಪ್ರಾರ್ಥಿಸಬೇಕಾದ ಅವಶ್ಯಕತೆ ಇಲ್ಲ. ಅವರ ಎಲ್ಲಾ ಅಗತ್ಯತೆಗಳೂ ಅಲ್ಲಿ ಸಂಧಿಸಲ್ಪಡುವದು. ಹಸಿವು ಬಾಯಾರಿಕೆಗಳಿರುವದಿಲ್ಲ. ನಿತ್ಯಸಂತೋಷಭರಿತರಾಗಿರುತ್ತಾರೆ. ನರಕದಲ್ಲಿ ಐಶ್ವರ್ಯವಂತನು, ಬೇಡದ ಎರಡು ಬೇಡಿಕೆಗಳಲ್ಲಿ ಮೊದಲನೆಯದು ತನಗಾಗಿ, ತನ್ನ ನಾಲಿಗೆಯ ಉರಿಯನ್ನು ತಣಿಸುವದಕ್ಕಾಗಿ ಪ್ರಾರ್ಥಿಸಿದನು. ಆದರೆ ಅವನ ಬೇಡಿಕೆ ನಿರಾಕರಿಸಲ್ಪಟ್ಟಿತು. ನಂತರ ಐಶ್ವರ್ಯವಂತನಿಗೆ ತಡೆಯಲು ಸಾಕ್ಷಿಯಾಗಿ ಲಾಜ಼ರನನ್ನು ತನ್ನ ತಂದೆಯ ಮನೆಗೆ ಕಳುಹಿಸೆಂದು ಬೇಡುತ್ತಾನೆ. ಆ ಆತ್ಮಭಾರ ಕೂಡ ಸ್ವಾರ್ಥಪರವಾಗಿತ್ತು. ತನ್ನ ಐದು ಮಂದಿ ಸಹೋದರರ ಆತ್ಮಗಳ ಕುರಿತಾಗಿ ಅಷ್ಟೇ ಅವನ ಪ್ರಾರ್ಥನೆಯಾಗಿತ್ತು. ಇತರರ ಕುರಿತಾದ ಆತ್ಮಭಾರವಿಲ್ಲ. ಇಂದೂ ನಾವು ಅನೇಕ ವೇಳೆಗಳಲ್ಲಿ ನಾವು ನಮ್ಮ ಕುಟುಂಬ ಎಂದಷ್ಟೇ ಚಿಂತಿಸುತ್ತೇವೆ, ಪ್ರಾರ್ಥಿಸುತ್ತೇವೆ. ಆದರೆ ಕ್ರಿಸ್ತನ ಕಲ್ವಾರಿ ಪ್ರೀತಿ ಸಮಸ್ತ ಭೂನಿವಾಸಿಗಳಿಗಾಗಿ ತೋರಿಸಿದ ಪ್ರೀತಿಯಾಗಿದೆ. ಇಡೀ ಮಾನವ ಕೋಟಿಯ ರಕ್ಷಣೆಗಾಗಿ ಆತನು ತನ್ನನ್ನೇ ಕಲ್ವಾರಿ ಬಲಿಪೀಠದಲ್ಲಿ ಯಜ್ಞವಾಗಿ ಅರ್ಪಿಸಿದನು.

ದೇವಜನರೇ, ಮನುಷ್ಯನ ಆಯುಷ್ಕಾಲ ಕೊಂಚವೇ. ಅದು ಎಪ್ಪತ್ತು ವರುಷ, ಬಲ ಹೆಚ್ಚಿದರೆ ಎಂಬತ್ತು ವರುಷ. ಇದರೊಳಗೆ ನೀವು ನಿಮ್ಮನ್ನು ಪರಲೋಕಕ್ಕೆ ಸಿದ್ಧಪಡಿಸಿಕೊಂಡು ಇತರರನ್ನೂ ಸಿದ್ಧಪಡಿಸಿರಿ.

*ನೆನಪಿಗೆ : "ಮೋಶೆಯ ಧರ್ಮಶಾಸ್ತ್ರವೂ, ಪ್ರವಾದಿಗಳ ಗ್ರಂಥಗಳೂ ಅವರಲ್ಲಿ ಅವೆ; ಅವುಗಳನ್ನು ಕೇಳಲಿ ಅಂದನು" (ಲೂಕ. 16:29).*